ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 14 | ಸಂಚಿಕೆ 40 | ಸೆಪ್ಟೆಂಬರ್ 28–ಅಕ್ಟೋಬರ್ 4, 2020 | ಪುಟ 16 | ರೂ. 10

Web : www.janashakthi.co.in e-mail : js_weekly@yahoo.com





‘ಗುಲಾಮರಾಗಿಸುವ ಆಟ ಸಾಗದು’
ಕಾರ್ಮಿಕ ವರ್ಗದ ಎಚ್ಚರಿಕೆ



‘ಸಂಸತ್ತಿನಲ್ಲಿ ದಬಾಯಿಸಿದ್ದನ್ನು ಬೀದಿಗೆ ಒಯ್ಯುತ್ತೇವೆ’
ರೈತರ ಕಹಳೆ ಮೊಳಗಿದೆ



ಪ್ರಜಾಪ್ರಭುತ್ವದ ಕತ್ತು ಹಿಸುಕಲಾಗುತ್ತಿದೆ

ಮಾನವ ಹಕ್ಕುಗಳ ಮೇಲೆ ದಾಳಿ ಬಂಡವಾಳ ವಾದದ ಹತಾಶ ಕ್ರಮ



ಭಾರತೀಯ ಸಂಸತ್ತಿನ ಮೇಲೆ ಪ್ರಹಾರ–ದೇಶದ ಆಹಾರ ಭದ್ರತೆಗೆ ಸಂಚಕಾರ
ರೈತರ ದೇಶವ್ಯಾಪಿ ಪ್ರತಿಭಟನಾ ಕಾರ್ಯಾಚರಣೆಗೆ ಸಿಪಿಐ(ಎಂ) ಬೆಂಬಲ

ಬಿಜೆಪಿ ಸರಕಾರ ಎಲ್ಲ ಸಂಸದೀಯ ವಿಧಾನಗಳನ್ನು ಉಲ್ಲಂಘಿಸಿ ಮತ್ತು ಸಂಸದ್ ಸದಸ್ಯರ ಹಕ್ಕನ್ನು ನಿರಾಕರಿಸಿ ಸಂಸತ್ತಿನಲ್ಲಿ ಬಲವಂತದಿಂದ ಶಾಸನಗಳಿಗೆ ಅಂಗೀಕಾರ ಪಡೆಯುತ್ತಿರುವ ರೀತಿಯನ್ನು ಸಿಪಿಐ(ಎಂ) ಪೊಲಿಟ್ ಬ್ಯುರೊ ಬಲವಾಗಿ ಖಂಡಿಸಿದೆ. ದೇಶದ ಮೇಲೂ ಮತ್ತು ಜನತೆಯ ಮೇಲೂ ವಿನಾಶಕಾರಿ ಪರಿಣಾಮಗಳನ್ನು ಬೀರುವ ಶಾಸನಗಳನ್ನು ಚರ್ಚಿಸುವ ಮತ್ತು ಗಂಭೀರವಾಗಿ ಪರಿಶೀಲಿಸುವ ಸಂಸದ್ ಸದಸ್ಯರ ಹಕ್ಕನ್ನು ವಂಚಿಸಲಾಗುತ್ತಿದೆ.

ಕೊವಿಡ್ ಮಹಾಸೋಂಕಿನ ಹರಡಿಕೆಯ ಬಗ್ಗೆ ಉಂಟಾಗಿರುವ ಗಂಭೀರ ಆತಂಕಗಳನ್ನು ದುರುಪಯೋಗ ಪಡಿಸಿಕೊಂಡು, ಈಗಾಗಲೇ ನಿರ್ಬಂಧಗೊಂಡಿರುವ ಸಂಸದ್ ಅಧಿವೇಶನವನ್ನು ಮತ್ತಷ್ಟು ಕಡಿತಗೊಳಿಸಲಾಗಿದೆ ಮತ್ತು ಲಾಕ್‌ಡೌನ್ ಅವಧಿಯಲ್ಲಿ ಹೊರಡಿಸಿರುವ ಎಲ್ಲ 11 ಸುಗ್ರೀವಾಜ್ಞೆಗಳನ್ನು ಬಲವಂತದಿಂದ ಕಾನೂನುಗಳಾಗಿ ಮಾಡುವ ತರಾತುರಿಯಲ್ಲಿದೆ.

ಭಾರತೀಯ ಕೃಷಿ ಕುರಿತಾದ ಸುಗ್ರೀವಾಜ್ಞೆಗಳನ್ನು ಬಲವಂತದಿಂದ ಶಾಸನಗಳಾಗಿ ಮಾಡಲಾಗಿದೆ. ಇದಕ್ಕಾಗಿ ಸಂಸತ್ ಸದಸ್ಯರು ಇವನ್ನು ಚರ್ಚಿಸಲು ಅವಕಾಶವನ್ನೂ ಕೊಟ್ಟಿಲ್ಲ, ರಾಜ್ಯಸಭೆಯಲ್ಲಿ ಇದರ ಮೇಲೆ ಮತದಾನ ನಡೆಸಲೂ ಅದು ನಿರಾಕರಿಸಿದೆ. ಇದು ಅಭೂತಪೂರ್ವ ನಡೆ, ಪ್ರಜಾಪ್ರಭುತ್ವದ ಕೊಲೆಯೆಂದೇ ಹೇಳಬಹುದು ಎಂದು ಸಿಪಿಐ(ಎಂ) ಖಂಡಿಸಿದೆ.

ಸಂಸತ್ತಿನ ಮುಂದೆ ಮಂಜೂರಾತಿಗೆ ಬರುವ ಯಾವುದೇ ವಿಷಯದ ಬಗ್ಗೆ ಮತದಾನ ನಡೆಯಬೇಕು ಎಂದು ಕೇಳುವುದು ಪ್ರತಿಯೊಬ್ಬ ಸಂಸದ್ ಸದಸ್ಯರ ಪರಭಾರೆ ಮಾಡಲಾಗದ ಹಕ್ಕು. ಇದನ್ನು ಅತ್ಯಂತ ತಿರಸ್ಕಾರದಿಂದ ತುಳಿದು ಹಾಕಲಾಗಿದೆ. ಈ ಸುಗ್ರೀವಾಜ್ಞೆಗಳ ಮೇಲೆ ಮತದಾನ ನಡೆಸಬೇಕು ಎಂದು ಕೇಳಿರುವ 8 ರಾಜ್ಯಸಭಾ ಸದಸ್ಯರನ್ನು ಅಮಾನತುಗೊಳಿಸಲಾಗಿದೆ. ಇದು ಅತ್ಯಂತ ಖಂಡನೀಯ ರೀತಿ. ರಾಜ್ಯಸಭೆಯಲ್ಲಿ ಈ ಶಾಸನಗಳನ್ನು ಕುರಿತಂತೆ ಬಿಜೆಪಿ/ಎನ್‌ಡಿಎಗೆ ಬಹುಮತ ಇರಲಿಲ್ಲ ಎಂಬುದು ಸ್ಪಷ್ಟ, ಏಕೆಂದರೆ ಎಲ್ಲ ಪ್ರತಿಪಕ್ಷಗಳೂ ಇದಕ್ಕೆ ವಿರುದ್ಧ ನಿಂತಿದ್ದವು. ಆದ್ದರಿಂದ ಈ ಹೊಸ ಶಾಸನಗಳು ನ್ಯಾಯಬಾಹಿರ, ಕಾನೂನುಬಾಹಿರ ಮತ್ತು ಭಾರತದ ರಾಷ್ಟ್ರಪತಿಗಳು ಈ ಶಾಸನಗಳನ್ನು ಭಾರತೀಯ ಸಂವಿಧಾನದ ಕಲಮು 111ರ ಅಡಿಯಲ್ಲಿ ಮರುಪರಿಶೀಲನೆಗೆ ರಾಜ್ಯಸಭೆಗೆ ಹಿಂದಕ್ಕೆ ಕಳಿಸಬೇಕಾಗಿದೆ ಎಂದು ಪೊಲಿಟ್ ಬ್ಯುರೊ ಹೇಳಿದೆ.

ಈ ಹೊಸ ಕಾನೂನುಗಳು ಭಾರತದ ಕೃಷಿಯನ್ನು, ನಮ್ಮ ಉತ್ಪನ್ನಗಳನ್ನು ಮತ್ತು ನಮ್ಮ ಮಾರುಕಟ್ಟೆಗಳನ್ನು ವಿದೇಶೀ ಮತ್ತು ದೇಶೀ ಕೃಷಿ ವ್ಯಾಪಾರೀ ಕಾರ್ಪೊರೇಟ್‌ಗಳಿಗೆ ಹಸ್ತಾಂತರಿಸುತ್ತವೆ. ಇದು ನಮ್ಮ ರೈತರ ಮೇಲೆ ಮತ್ತು ಜನತೆಯ ಮೇಲೂ ಸಂಕಟಗಳನ್ನು ಹೇರಿ ವಿದೇಶಿ ಮತ್ತು ದೇಶೀ ಕಾರ್ಪೊರೇಟ್‌ಗಳಿಗೆ ಸೂಪರ್ ಲಾಭಗಳನ್ನು ಕೊಳ್ಳೆ ಹೊಡೆಯುವ ಅಪಾರ ಸೌಕರ್ಯಗಳನ್ನು ಒದಗಿಸುತ್ತವೆ. ಕನಿಷ್ಟ ಬೆಂಬಲ ಬೆಲೆಯನ್ನು ಖಂಡಿತವಾಗಿಯೂ ರದ್ದು ಮಾಡಲಾಗುವುದು. ಈಗಿರುವ ಕನಿಷ್ಟ ಬೆಂಬಲ ಬೆಲೆಗಳ ವ್ಯವಸ್ಥೆಯ ಅನುಷ್ಠಾನ ಕಳಪೆ ಮಟ್ಟದಲ್ಲಿದ್ದರೂ, ರೈತರಿಗೆ ಸ್ವಲ್ಪ ಮಟ್ಟಿಗಾದರೂ ಆದಾಯದ ಭದ್ರತೆಯನ್ನು ಒದಗಿಸುತ್ತಿತ್ತು. ಆವಶ್ಯಕ ಸರಕುಗಳ ಕಾಯ್ದೆಗೆ ತಿದ್ದುಪಡಿಗಳೊಂದಿಗೆ ದೊಡ್ಡ ಪ್ರಮಾಣದಲ್ಲಿ ಕಳ್ಳದಾಸ್ತಾನಿಗೆ ಅವಕಾಶವಾಗಿದ್ದು, ಇದು ದೇಶಕ್ಕೆ ಮತ್ತು ಜನತೆಗೆ ಆಹಾರದ ಕೃತಕ ಅಭಾವ ಮತ್ತು ಬೆಲೆಯೇರಿಕೆಯ ಬೆದರಿಕೆ ಒಡ್ಡುತ್ತದೆ. "ಭೂಮಿಸಂಚಯ"(ಲ್ಯಾಂಡ್ ಪೂಲಿಂಗ್) ಮತ್ತು ಕಾಂಟ್ರಾಕ್ಟ್ ವ್ಯವಸ್ಥೆಯನ್ನು ಕಾನೂನಬದ್ಧಗೊಳಿಸುವ, ಕೃಷಿ ವ್ಯಾಪಾರಿ ಕಂಪನಿಗಳಿಗೆ ಸೌಕರ್ಯಗಳನ್ನು ಒದಗಿಸುವ ಪ್ರಸ್ತಾವಗಳು ಪಾರಂಪರಿಕ ಬೇಸಾಯವನ್ನು ಸಂಪೂರ್ಣವಾಗಿ ಧ್ವಂಸಗೊಳಿಸುತ್ತದೆ.

ಭಾರತದ ಆಹಾರ ಭದ್ರತೆ ಅಪಾಯದಲ್ಲಿದೆ ಎಂದು ಎಚ್ಚರಿಸಿರುವ ಸಿಪಿಐ(ಎಂ) ಪೊಲಿಟ್ ಬ್ಯುರೊ ರೈತ ಸಂಘಟನೆಗಳು ಸಪ್ಟಂಬರ್ 25ರಂದು ಒಂದು ರಾಷ್ಟ್ರವ್ಯಾಪಿ ಬೃಹತ್ ಪ್ರತಿಭಟನಾ ಕಾರ್ಯಾಚರಣೆಗೆ ನೀಡಿರುವ ಕರೆಗೆ ಬೆಂಬಲ ವ್ಯಕ್ತಪಡಿಸಿದೆ.

ಕೇಂದ್ರ ಸರಕಾರ ಭಾರತದ, ನಮ್ಮ ಅನ್ನದಾತರ ಮತ್ತು ಜನಗಳ ಆಹಾರ ಭದ್ರತೆಯ ಹಕ್ಕುಗಳ ಹಿತದೃಷ್ಟಿಯಿಂದ ಈ ಮಸೂದೆಗಳನ್ನು ಹಿಂದಕ್ಕೆ ಪಡೆಯಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ.

ಸಂಸದೀಯ ಗಣತಂತ್ರದ ಮೇಲೆ ದಾಳಿಗಳನ್ನು ಪ್ರತಿಭಟಿಸಿ
ರೈತರ ಸಪ್ಟಂಬರ್ 25ರ ಕಾರ್ಯಾಚರಣೆಯನ್ನು ಬೆಂಬಲಿಸಿ–ಎಡಪಕ್ಷಗಳ ಕರೆ

ಬಿಜೆಪಿ ಸರಕಾರ ಎಲ್ಲ ಸಂಸದೀಯ ವಿಧಿ–ವಿಧಾನಗಳನ್ನು ಗಾಳಿಗೆ ತೂರಿ ಭಾರತೀಯ ಕೃಷಿಯನ್ನು ಒತ್ತೆಯಿಡುವ ಶಾಸನಗಳನ್ನು ಬಲವಂತದಿಂದ ಪಾಸು ಮಾಡಿಕೊಂಡಿರುವುದನ್ನು ಎಡಪಕ್ಷಗಳು ಬಲವಾಗಿ ಖಂಡಿಸಿವೆ. ಮಸೂದೆಗಳ ಮೇಲೆ ಮತದಾನ ಕೇಳಿದ ಸದಸ್ಯರನ್ನು ಅಮಾನತು ಮಾಡಲಾಗಿದೆ. ಇಂತಹ ಕ್ರಮಗಳ ಮೂಲಕ ಪ್ರತಿಪಕ್ಷಗಳ ಬಾಯಿ ಮುಚ್ಚಿಸಬಹುದು ಎಂದು ಸರಕಾರ ಭಾವಿಸಿದ್ದರೆ ಅದು ಎಂದೂ ಸಾಧ್ಯವಿಲ್ಲ. ಭಾರತೀಯ ಸಂವಿಧಾನ, ಭಾರತೀಯ ಸಂಸತ್ತು ಮತ್ತು ಜಾತ್ಯತಿತ ಪ್ರಜಾಸತ್ತಾತ್ಮಕ ಗಣತಂತ್ರವನ್ನು ರಕ್ಷಿಸಲು ತಾವು ಬದ್ಧ ಎಂಬುದನ್ನು ಎಡಪಕ್ಷಗಳು ಪುನರುಚ್ಚರಿಸಿವೆ, ಮತ್ತು ನಮ್ಮ ಸಂವಿಧಾನಿಕ ಗಣತಂತ್ರದ ಮೇಲೆ ಇಂತಹ ದಾಳಿಗಳನ್ನು ನಡೆಸುವುದರ ವಿರುದ್ಧ ಎದ್ದು ನಿಂತು ಪ್ರತಿಭಟಿಸಬೇಕು ಎಂದು ಜನಗಳಿಗೆ ಕರೆ ನೀಡಿವೆ.

ಈ ಶಾಸನಗಳು ಭಾರತೀಯ ಕೃಷಿಯನ್ನು, ನಮ್ಮ ರೈತರನ್ನು ಧ್ವಂಸ ಮಾಡುತ್ತವೆ ಮತ್ತು ಈ ರೀತಿ ಇಡೀ ವಲಯವನ್ನು ಕೃಷಿ ಕಾರ್ಪೊರೇಟ್‌ಗಳಿಗೆ ವಹಿಸಿಕೊಡುವುದೆಂದರೆ ರೈತರಿಗೆ ಕನಿಷ್ಟ ಬೆಂಬಲ ಬೆಲೆಗಳ ರದ್ದು, ಸಾರ್ವಜನಿಕ ವಿತರಣಾ ವ್ಯವಸ್ಥೆಯ ಸಂಪೂರ್ಣ ನಾಶ ಮತ್ತು ನೀತಿಬಾಹಿರ ವ್ಯಾಪಾರಿಗಳು, ದೈತ್ಯ ಕಾರ್ಪೊರೇಟ್‌ಗಳು ಕಳ್ಳದಾಸ್ತಾನು ನಡೆಸಲು ಉತ್ತೇಜನೆ ಕೊಟ್ಟು ಆಹಾರದ ಕೃತಕ ಕೊರತೆಯನ್ನು ಉಂಟು ಮಾಡಿ ಭಾರತದ ಆಹಾರ ಭದ್ರತೆಗೆ ಸಂಚಕಾರ ತರಲಿವೆ ಎಂದು ಎಡಪಕ್ಷಗಳು ಎಚ್ಚರಿಸಿವೆ.

ಈ ಶಾಸನಗಳನ್ನು ಹಿಂದಕ್ಕೆ ತಗೊಳ್ಳಬೇಕು ಎಂದು ಆಗ್ರಹಿಸಿ ಅಖಿಲ ಭಾರತ ಕಿಸಾನ್ ಸಂಘರ್ಷ ಸಮನ್ವಯ ಸಮಿತಿ ಸಪ್ಟಂಬರ್ 25ರಂದು ದೇಶವ್ಯಾಪಿ ಪ್ರತಿಭಟನೆಗಳಿಗೆ ನೀಡಿರುವ ಕರೆಯನ್ನು ಸಂಪೂರ್ಣವಾಗಿ ಬೆಂಬಲಿಸಬೇಕು, ರೈತರ ಹೋರಾಟಕ್ಕೆ ಸೌಹಾರ್ದ ವ್ಯಕ್ತಪಡಿಸಬೇಕು ಎಡಪಕ್ಷಗಳು ಎಂದು ತಮ್ಮ ಘಟಕಗಳಿಗೆ ಕರೆ ನೀಡಿವೆ.

ಕೇಂದ್ರ ಸರಕಾರ ಈ ಶಾಸನಗಳನ್ನು ಹಿಂದಕ್ಕೆ ತಗೊಳ್ಳುವಂತೆ ಮಾಡಲು ರಾಜ್ಯ ಮಟ್ಟಗಳಲ್ಲಿ ಇತರ ರಾಜಕೀಯ ಪಕ್ಷಗಳೊಡನೆ ಪ್ರತಿಭಟನಾ ಕಾರ್ಯಾಚರಣೆಗಳನ್ನು ರೂಪಿಸಬೇಕು ಎಂದು ತಮ್ಮ ಎಲ್ಲ ರಾಜ್ಯ ಘಟಕಗಳಿಗೆ ಸಿಪಿಐ(ಎಂ), ಸಿಪಿಐ, ಸಿಪಿಐ(ಎಂ–ಎಲ್)–ಲಿಬರೇಷನ್, ಅಖಿಲ ಭಾರತ ಫಾರ್ವರ್ಡ್ ಬ್ಲಾಕ್ ಮತ್ತು ಆರ್.ಎಸ್.ಪಿ. ಪ್ರಧಾನ ಕಾರ್ಯದರ್ಶಿಗಳ ಜಂಟಿ ಹೇಳಿಕೆ ಕರೆ ನೀಡಿದೆ.

ಜಿಡಿಪಿ ಸೃಷ್ಟಿಕರ್ತರ ಮೇಲೆ ಗುಲಾಮಗಿರಿ ಹೇರುವ ಸಂಹಿತೆಗಳು–ಸಿಐಟಿಯು

ಮೋದಿ ಸರಕಾರ ಮೂರು ಕಾರ್ಮಿಕ ಸಂಹಿತೆಗಳನ್ನು ಅತ್ಯಂತ ತರಾತುರಿಯಿಂದ ಪಾಸು ಮಾಡಿಸಿಕೊಂಡಿರುವುದು ತನ್ನ ಕಾರ್ಪೊರೇಟ್ ಬಂಡವಾಳಶಾಹಿ ಮಾಲಕರನ್ನು ಸಂತುಷ್ಟಗೊಳಿಸಲಿಕ್ಕಾಗಿ.

ಈ ಮೂರು ಸಂಹಿತೆಗಳು–ಕೈಗಾರಿಕಾ ಸಂಬಂಧಗಳನ್ನು ಕುರಿತ ಸಂಹಿತೆ, ಸಾಮಾಜಿಕ ಭದ್ರತೆಯನ್ನು ಕುರಿತ ಸಂಹಿತೆ ಮತ್ತು ವೃತ್ತಿ ಸುರಕ್ಷಿತತೆ, ಆರೋಗ್ಯ ಮತ್ತು ದುಡಿಮೆಯ ಪರಿಸ್ಥಿತಿಗಳನ್ನು ಕುರಿತ ಸಂಹಿತೆ–74 ಶೇ. ಕೂಗಾರಿಕಾ ಕಾರ್ಮಿಕರನ್ನು ಮತ್ತು 70 ಶೇ. ಕೈಗಾರಿಕೆಗಳನ್ನು ಮನಬಂದಂತೆ ದುಡಿಸಿಕೊಳ್ಳುವ "ಹೈರ್ ಅಂಡ್‌ಫೈರ್' ವ್ಯವಸ್ಥೆಯೊಳಕ್ಕೆ ತಳ್ಳುತ್ತವೆ. ಕಾರ್ಮಿಕ ಸಂಘಟನೆಗಳನ್ನು ರಚಿಸಿಕೊಳ್ಳುವುದನ್ನು ಅತ್ಯಂತ ಕಷ್ಟಸಾಧ್ಯಗೊಳಿಸುತ್ತವೆ ಮತ್ತು ಮುಷ್ಕರದ ಹಕ್ಕಿನ ಮೇಲೆ ನಿಷೇಧವನ್ನೇ ಹಾಕಿದಂತಾಗುತ್ತದೆ, ತಮ್ಮ ಕುಂದುಕೊರತೆಗಳು ಮತ್ತು ಬೇಡಿಕೆಗಳ ಮೇಲೆ ಸಾಮೂಹಿಕವಾಗಿ ಚಳುವಳಿ ನಡೆಸುವುದಕ್ಕೂ ಅಡ್ಡಿಯುಂಟು ಮಾಡುತ್ತವೆ.

ದೇಶಕ್ಕಾಗಿ ಜಿಡಿಪಿ ಸೃಷ್ಟಿಸುವ ಕಾರ್ಮಿಕರನ್ನು ಗುಲಾಮಗಿರಿಗೆ ಒಳಪಡಿಸುವ ಪರಿಸ್ಥಿತಿಗಳನ್ನು ಉಂಟು ಮಾಡುವ ಸಂಹಿತೆಗಳಿವು. ಈ ಮೂರರಲ್ಲಿಯೂ ಹಲವು ಹಕ್ಕುಗಳು ಮತ್ತು ದುಡಿಮೆಯ ಪರಿಸ್ಥಿತಿಗಳಿಗೆ ಸಂಬಂಧಪಟ್ಟಂತೆ ಕಾರ್ಯಾಂಗಕ್ಕೆ, ಅಂದರೆ ಆಳುವ ಸರಕಾರಗಳಿಗೆ ಕೇವಲ ಸರಕಾರೀ ಆದೇಶದ ಮೂಲಕ ಏಕಪಕ್ಷೀಯವಾಗಿ ಬದಲಾವಣೆ ತರಲು ಅವಕಾಶ ಕಲ್ಪಿಸಿವೆ. ಈ ಬದಲಾವಣೆಗಳು ಸರಕಾರದ ಕಾರ್ಪೊರೇಟ್ ಯಜಮಾನರುಗಳು ನಿರ್ದೇಶಿಸುವ ಬದಲಾವಣೆಗಳು ಎಂದು ಬೇರೆ ಹೇಳಬೇಕಾಗಿಲ್ಲ.

ಈ ಗುಲಾಮಗಿರಿಯನ್ನು ನಾವು ಸ್ವೀಕರಿಸುವುದಿಲ್ಲ ಎಂದು ಸೆಟೆದು ನಿಲ್ಲುವುದೇ ಕಾರ್ಮಿಕ ಆಂದೋಲನದ ಮುಂದಿರುವ ದಾರಿ ಎಂದು ಈ ಮೂರು ಸಂಹಿತೆಗಳ ಅಂಗೀಕಾರವನ್ನು ವಿರೋಧಿಸುತ್ತ ಸಿಐಟಿಯು ಹೇಳಿದೆ.

ಬಿಎಂಎಸ್‌ಗೂ ಮುಜುಗರ

ಯುಪಿಎ ಸರಕಾರಗಳ ವಿರುದ್ಧ ಕಾರ್ಮಿಕ ಸಂಘಟನೆಗಳ ಐಕ್ಯ ಕಾರ್ಯಾಚರಣೆಗಳಲ್ಲಿ ಜತೆಗಿದ್ದ ಸಂಘ ಪರಿವಾರಕ್ಕೆ ಬಿಎಂಎಸ್ ಮೋದಿ ಸರಕಾರ ಬಂದ ಮೇಲೆ ದೂರ ಸರಿದು ಸರಕಾರದ ಧೋರಣೆಗಳನ್ನು ವಿರೋಧಿಸುವುದನ್ನು ನಿಲ್ಲಿಸಿತ್ತು. ಆದರೆ ಈಗ ಅದು ಕೂಡ ತನ್ನ ಅಸಮಾಧಾನವನ್ನು ವ್ಯಕ್ತಪಡಿಸಬೇಕಾಗಿ ಬಂದಿದೆ. ಇವು ಕಾರ್ಮಿಕ–ವಿರೋಧಿ ಕ್ರಮಗಳು ಎಂದು ಅದೂ ಖಂಡಿಸಿದೆ. ಕೈಗಾರಿಕಾ ಸಂಬಂಧಗಳ ಸಂಹಿತೆ ಕೈಗಾರಿಕಾ ಶಾಂತಿಯನ್ನು ಕದಡುತ್ತದೆ ಎಂದೂ ಅದು ಎಚ್ಚರಿಸಿದೆ.

ಕಾರ್ಮಿಕ ಸಂಘಟನೆಗಳನ್ನು ವಿಶ್ವಾಸಕ್ಕೆ ತಗೊಂಡಿದ್ದೇವೆ ಎಂದು ಬಿಜೆಪಿಯ ಸರಕಾರ ಹೇಳಿದರೆ, ಅದೇ ಪರಿವಾರಕ್ಕೆ ಸೇರಿದ ಬಿಎಂಎ???ನ ಪ್ರಧಾನ ಕಾರ್ಯದರ್ಶಿ ವೃಜೇ??? ಉಪಾಧ್ಯಾಯ ತಮ್ಮ ಸಂಘಟನೆ ಎತ್ತಿ ದ ಯಾವ ಆಕ್ಷೇಪಣೆಗಳನ್ನು ಕೂಡ ಗಮನಕ್ಕೆ ತಗೊಂಡಿಲ್ಲ, ಅಲ್ಲದೆ ಸಂಸದೀಯ ಸ್ಥಾಯೀ ಸಮಿತಿಯ ಕಾರ್ಮಿಕ–ಪರ ಶಿಫಾರಸುಗಳನ್ನೂ ಗಮನಕ್ಕೆ ತಗೊಂಡಿಲ್ಲ, ಬದಲಿಗೆ ಮಾಲಕರು ಮತ್ತು ಉದ್ಯೋಗದಾತರ ಹಾಗ ? ಅಧಿಕಾರಶಾಹಿಗಳ ಪರವಾಗಿ ಇನ್ನಷ್ಟು ತಿರುಗಿಸಲಾಗಿದೆ ಎಂದು ಖೇದ ವ್ಯಕ್ತಪಡಿಸಿದ್ದಾರೆ. "ಕೊನೆಗಳಿಗೆಯ ವಿರೂಪಗಳು ಕೈಗಾರಿಕಾ ಶಾಂತಿಯನ್ನು ಕದಡುತ್ತವೆ" ಎಂದು ಅವರು ಹೇಳಿದ್ದಾರೆ.

ಪ್ರಧಾನಿ, ಸರಕಾರ ಪ್ರಜಾಸತ್ತಾತ್ಮಕವಾಗಿ ವರ್ತಿಸುವುದನ್ನು ಕಲಿಯಬೇಕು
ಕಾರ್ಪೊರೇಟ್ ಹಿತಕ್ಕಾಗಿ ಸರ್ವಾಧಿಕಾರಶಾಹೀ ನಡೆ ಸಲ್ಲದು–ಎಐಕೆಎಸ್

ರಾಜ್ಯಸಭೆಯ ಉಪ ಸಭಾಪತಿ ಶ್ರೀ ಹರಿವಂಶ ನಾರಾಯಣ ಸಿಂಗ್ ಕೃಷಿ ಮಸೂದೆಗಳ ಮೇಲೆ ಮತದಾನದ ಸದಸ್ಯರ ಹಕ್ಕುಗಳನ್ನು ನಿರಾಕರಿಸಿ, ಮಸೂದೆಗಳು ದನಿಮತದಿಂದ ಪಾಸಾಗಿವೆ ಎಂದು ಘೋಷಿಸಿರುವುದನ್ನು ಅಖಿಲ ಭಾರತ ಕಿಸಾನ್ ಸಭಾ ಬಲವಾಗಿ ಖಂಡಿಸಿದೆ. ಇದು ಸಂಸದೀಯ ಪ್ರಜಾಪ್ರಭುತ್ವದ ಅಂತ್ಯವಲ್ಲದೆ ಬೇರೇನೂ ಅಲ್ಲ. ಇಂತಹ ಕೈಚಳಕ ನಾಚಿಕೆಗೇಡು. ಕಾರ್ಪೊರೇಟ್ ಹಿತಗಳಿಗೆ ನೆರವಾಗಲು ಈ ತೆರನ ಸರ್ವಾಧಿಕಾರಶಾಹೀ ಮತ್ತು ಫ್ಯಾಸಿಸ್ಟ್ ಮಾದರಿ ವರ್ತನೆಗೆ ಪ್ರಜಾಪ್ರಭುತ್ವದಲ್ಲಿ ಅವಕಾಶ ನೀಡುವುದು ಸಾಧ್ಯವಿಲ್ಲ. ಪ್ರಧಾನ ಮಂತ್ರಿ ಮತ್ತು ಅವರ ಸರಕಾರ ಸಂವಿಧಾನವನ್ನು ಗೌರವಿಸಬೇಕು ಮತ್ತು ಪ್ರಜಾಸತ್ತಾತ್ಮಕವಾಗಿ ವರ್ತಿಸುವುದನ್ನು ಕಲಿಯಬೇಕು ಎಂದು ಅದು ಹೇಳಿದೆ.

ಪ್ರತಿಪಕ್ಷಗಳ ಸದಸ್ಯರುಗಳು ಉಪಸಭಾಪತಿಯ ವಿರುದ್ಧ ಅವಿಶ್ವಾಸ ಠರಾವಿನ ನೋಟೀಸು ಕೊಟ್ಟಿದ್ದಾರೆ.

ಆಳುವ ಮೈತ್ರಿಕೂಟಕ್ಕೆ ಸೇರಿದ ತೆಲಂಗಾಣ ರಾಷ್ಟ್ರಸಮಿತಿ, ಅಖಿಲ ಭಾರತ ಅಣ್ಣಾ ಡಿಎಂಕೆ ಇತ್ಯಾದಿ ಪಕ್ಷಗಳ ಸಂಸದ್ ಸದಸ್ಯರುಗಳೂ ಹಲವರು, ಈ ಮಸೂದೆಗಳ ವಿರುದ್ಧ ಬಲವಾಗಿ ಮಾತಾಡಿದರು. ಹೀಗೆ ಸರಕಾರಕ್ಕೆ ರಾಜ್ಯಸಭೆಯಲ್ಲಿ ನೈತಿಕವಾಗಿ ಬಹುಮತ ಇರಲಿಲ್ಲ. ಇದು ಮೋದಿ ಸರಕಾರದ ರೈತ–ವಿರೋಧಿ ಧೋರಣೆಗಳ ವಿರುದ್ಧ ರೈತರ ನಡುವೆ ಜಾಗೃತಿಯ ಆಧಾರದಲ್ಲಿ ರಾಜ್ಯಮಟ್ಟಗಳಲ್ಲಿ ರಾಜಕೀಯ ಪಕ್ಷಗಳ ಧ್ರುವೀಕರಣ ನಡೆಯುತ್ತಿರುವುದನ್ನು ಸೂಚಿಸುತ್ತದೆ ಎಂದು ಎಐಕೆಎಸ್ ಅಭಿಪ್ರಾಯ ಪಟ್ಟಿದೆ.

ಸಂಸದೀಯ ವ್ಯವಸ್ಥೆಯಲ್ಲಿ ಕೈಚಳಕ ನಡೆಸಿ ಅದನ್ನು ಧ್ವಂಸ ಮಾಡುವ ಆರೆಸ್ಸೆಸ್–ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರದ ಹೊಲಸು ಪಾತ್ರವನ್ನು ಬಯಲಿಗೆಳೆಯಬೇಕು ಎಂದು ಸಮಸ್ತ ರೈತಾಪಿಗಳಿಗೆ ಮತ್ತು ಜನಗಳಿಗೆ ಎಐಕೆಎಸ್ ಕರೆ ನೀಡಿದೆ. ಇದು ಕಾರ್ಪೊರೇಟ್ ಹಿತಗಳಿಗೆ ಆರೆಸ್ಸೆಸ್–ಬಿಜೆಪಿಯ ಸಂಪೂರ್ಣ ಶರಣಾಗತಿಯ ಉದಾಹರಣೆ. ಸಂಸತ್ ಸದಸ್ಯರಿಗೆ ಮತದಾನದ ಹಕ್ಕನ್ನು ನಿರಾಕರಿಸಿ ಮಸೂದೆಗಳು ಪಾಸಾದವು ಎಂದು ಪ್ರಕಟಿಸಿರುವುದು ಉತ್ತಮ ಸಂಸದೀಯ ಆಚರಣೆಗಳ ಪ್ರಕಾರ ಅಸಿಂಧು. ಸಪ್ಟಂಬರ್ 20 ನ್ನು ಭಾರತೀಯ ಸಂಸತ್ತಿಗೆ ಮತ್ತು ಇಡೀ ರೈತಾಪಿ ಜನಗಳಿಗೆ ಒಂದು ಕರಾಳ ದಿನ ಎಂದು ಮುಂದೆ ನೆನಪಿಸಿಕೊಳ್ಳಲಾಗುವುದು. ಇದಕ್ಕೆ ತಕ್ಕ ಪ್ರತ್ಯುತ್ತರ ನೀಡಲು ಸಪ್ಟಂಬರ್ 25, 2020ರ ಅಖಿಲ ಭಾರತ ಪ್ರತಿಭಟನಾ ದಿನವನ್ನು ದೇಶಾದ್ಯಂತ ಅತ್ಯಂತ ಯಶಸ್ವಿಗೊಳಿಸಬೇಕು ಎಂದು ಅಖಿಲ ಭಾರತ ಕಿಸಾನ್ ಸಭಾ ಕರೆ ನೀಡಿದೆ.

ಸಂಪಾದಕೀಯ

ರೈತರು ಮತ್ತೊಮ್ಮೆ ಪಾಳೆಗಾರಿ ಗುಲಾಮಗಿರಿಗೆ!

ಹಿಂದೊಮ್ಮೆ ಬಡ ರೈತರು ಮತ್ತು ಭೂರಹಿತ ಕೃಷಿಕೂಲಿಕಾರರು ಹಾಗೂ ಗೇಣಿದಾರರು ಹಲವು ಹಂತದ ಹೋರಾಟ ಮಾಡಿ ಪ್ರಾಣ ಬಲಿದಾನ ಮಾಡಿ ಕ್ರೂರ ಜಮೀನ್ದಾರಿ ಜಮಿನ್ದಾರಿ ಪದ್ಧತಿಯನ್ನು ನಿರ್ಮೂಲನೆ ಮಾಡುವುದರಲ್ಲಿ ಯಶಸ್ವಿಯಾಗಿದ್ದರು. ಕೆಲಮಟ್ಟಿಗಾದರೂ ಭೂಮಿಯ ಸಮಾನ ಹಂಚಿಕೆ ಸಾಧ್ಯವಾಯಿತು. ಉಳುವವನೇ ಭೂಮಿಯ ಒಡೆಯನಾಗಲೂ ಸಾಧ್ಯವಾಯಿತು. ಕೆಲ ಮಟ್ಟಿಗಾದರೂ ಪಾಳೆಗಾರಿ ಗುಲಾಮಗಿರಿ ಅಂತ್ಯವಾಯಿತು. ರೈತರು ಸ್ವತಂತ್ರರಾದರು. ರೈತರ ಭೂಮಿಯನ್ನು ದುಡ್ಡು ಇರುವ ರೈತರಲ್ಲದ ಸಾಹುಕಾರರು ಕಿತ್ತು ಕೊಳ್ಳುವುದನ್ನು ಕಾನೂನಾತ್ಮಕವಾಗಿ ತಡೆಹಿಡಿಯಲಾಯಿತು.

ಭಾರತ ದೇಶದಲ್ಲಿ ಭೂಮಿಯ ಪ್ರಶ್ನೆ ಪರಿಪೂರ್ಣವಾಗಿ ಇನ್ನೂ ಇತ್ಯರ್ಥವಾಗಿಲ್ಲ. ಈ ಕಾಲ ಘಟ್ಟದಲ್ಲಿ ಒಂದು ರೈತ ಪರ ಸರ್ಕಾರ ಕೃಷಿ ಭೂಮಿಯ ಸಮಾನ ಹಂಚಿಕೆ, ಭೂಹೀನ ಬಡವರಿಗೆ, ದಲಿತರಿಗೆ ಕೃಷಿ ಭೂಮಿಯನ್ನು ವಿತರಣೆ ಮಾಡಿ ಸಾಮಾಜಿಕ ನ್ಯಾಯವನ್ನು ಎತ್ತಿಹಿಡಿಯಬೇಕಾಗಿತ್ತು. ಅದರ ಬದಲಾಗಿ ಮೋದಿ ಸರ್ಕಾರವು ವ್ಯಾಪಕ ವಿರೋಧದ ನಡುವೆಯೇ ದೊಡ್ಡ ಕಾರ್ಪೊರೇಟ್ ಕಂಪನಿಗಳಿಗೆ ಕೃಷಿ ರಂಗವನ್ನು ಪ್ರವೇಶಿಸಲು ಕಾನೂನು ಅವಕಾಶ ಕಲ್ಪಿಸಲು ಮುಂದಾಗಿದೆ. ಸಂಸತ್ತಿನಲ್ಲಿ ಪ್ರತಿಪಕ್ಷಗಳ ತೀವ್ರ ವಿರೋಧದ ನಡುವೆಯೂ ಅಂಗೀಕರಿಸಲಾದ ಕೃಷಿ ಹಾಗೂ ಕೃಷಿ ವ್ಯಾಪಾರದ ಮಸೂದೆಗಳನ್ನು ಗಮನಿಸಿದರೆ ರೈತರು ಮತ್ತೊಂದು ಬಾರಿಗೆ ಪಾಳೆಗಾರಿ ಗುಲಾಮಗಿರಿಗೆ ಬಲಿಯಾಗಲಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ಈ ಬಾರೀ ಜಮೀನ್ದಾರಿ ಗುಲಾಮಗಿರಿಯಲ್ಲ. ಅದಕ್ಕೂ ಹೆಚ್ಚು ಅಪಾಯಕಾರಿಯಾದ ಕಾರ್ಪೊರೇಟ್ ಕಂಪನಿಗಳ ಗುಲಾಮಗಿರಿಗೆ!

ಕೃಷಿ ರಂಗದಲ್ಲಿ ಸುಧಾರಣೆಗಳನ್ನು ತರುವುದೇ ಈ ಮಸೂದೆಗಳ ಉದ್ದೇಶವಾಗಿದೆ ಎಂದು ಸರ್ಕಾರ ರೈತರಿಗೆ ಹೇಳುತ್ತಿದೆ. ಈ ಮಸೂದೆಗಳನ್ನು ಕೃಷಿ ಮಾರುಕಟ್ಟೆ ಮತ್ತು ಕೃಷಿ ಉತ್ಪನ್ನಗಳ ವ್ಯಾಪಾರದ ರಂಗದಲ್ಲಿ ಬಹು ದೂರಗಾಮಿ ಪರಿಣಾಮಗಳನ್ನು ಬೀರಲಿವೆ. ಒಂದು ಸಾಮಾನ್ಯ ಮಾರುಕಟ್ಟೆ ನಿರ್ಮಾಣವಾಗಲಿದೆ. ಎಪಿಎಂಸಿ ಅಂತಹ ಒಂದು ವ್ಯವಸ್ಥೆಯ ಅಗತ್ಯವೇ ಇಲ್ಲದಂತೆ ಮಾಡಲಿದೆ. ಕನಿಷ್ಠ ಬೆಂಬಲ ಬೆಲೆ (ಎಮ್‌ಎಸ್‌ಪಿ) ಮುಂದು ವರೆಯಲಿದೆ. ಆತಂಕ ಬೇಡ ಎಂದು ಸರ್ಕಾರ ಹೇಳುತ್ತಿದೆ. ರೈತರಿಗೆ ಮೊದಲಿಗಿಂತಲೂ ಹೆಚ್ಚು ಸ್ವಾತಂತ್ರ್ಯ ದೊರೆಯಲಿದೆ ಎನ್ನಲಾಗುತ್ತಿದೆ. ಆದರೆ ರೈತರೊಂದಿಗೆ ಮುಕ್ತ ಚರ್ಚೆಗೆ ಸರಕಾರ ಮುಂದಾಗಲಿಲ್ಲ. ರಾಜ್ಯಗಳ ಅಭಿಪ್ರಾಯಗಳನ್ನಾಗಲಿ ಸಲಹೆಗಳನ್ನಾಗಲಿ ಕೇಳದೆ ಸಂಸತ್ತಿನಲ್ಲಿ ತಮಗೆ ಬಹುಮತವಿದೆ ಎಂಬ ಅಹಂಕಾರದಿಂದ ಕೇವಲ ಗಲಾಟೆ ಮಾಡಿಸಿ ಧ್ವನಿಮತದಿಂದ ಮಸೂದೆಗಳನ್ನು ಅಂಗೀಕರಿಸಲಾಗಿದೆ. ರೈತರಿಗೆ ಹೆಚ್ಚು ಸ್ವಾತಂತ್ರ್ಯ ದೊರೆಯಲಿದೆ ಎಂದು ಹೇಳಲಾಗುತ್ತಿದೆ. ವ್ಯಾಪಾರ ಇಬ್ಬರ ಅಸಮಾನರ ನಡುವೆ ನಡೆಯುವಾಗ, ಅಂದರೆ ದೊಡ್ಡ ಕಾರ್ಪೊರೇಟ್ ಕಂಪನಿಗಳು ಒಂದು ಕಡೆ, ಬಡ ಮಧ್ಯಮ ರೈತರು ಇನ್ನೊಂದು ಕಡೆ ಇರುವಾಗ ನ್ಯಾಯ ಯಾರ ಪರವಾಗಿ ನಿಲ್ಲುತ್ತದೆ. ಇನ್ನೂ ಕಾಲ ಮಿಂಚಿಲ್ಲ. ಸರ್ಕಾರ ಕಾರ್ಪೊರೇಟ್ ಪರವಾದ ತನ್ನ ಧೋರಣೆಯನ್ನು ಬದಲಾಯಿಸಿ ರೈತರ ಹಿತವನ್ನು ಕಾಪಾಡಲು ಮುಂದಾಗಬೇಕು. ತಪ್ಪಿದರೆ ರೈತರ ಆಕ್ರೋಶ ಮೋದಿ ಸರಕಾರವನ್ನು ಭಸ್ಮ ಮಾಡದೆ ಇರಲಾರದು.

ಸಂಸತ್ತಿನ ಈ ಬೆಳವಣಿಗೆಗಳಿಂದ ರಾಜ್ಯ ಬಿಜೆಪಿ ಸರಕಾರ ಪಾಠ ಕಲಿಯಬೇಕಾಗಿತ್ತು. ಭೂ ಸುಧಾರಣೆ ಕಾಯ್ದೆ ಹಾಗೂ ವಿದ್ಯುತ್ ಕಾಯ್ದೆಗಳಿಗೆ ತಿದ್ದುಪಡಿ ತರುವ ಸುಗ್ರೀವಾಜ್ಞೆಗಳನ್ನು ವಿಧಾನ ಮಂಡಲದಲ್ಲಿ ಮಂಡಿಸಿ ಅಂಗೀಕಾರ ಪಡೆಯಲು ಯಡಿಯೂರಪ್ಪ ಸರ್ಕಾರ ತುದಿಗಾಲ ಮೇಲೆ ನಿಂತಿದೆ. ರೈತ, ಕಾರ್ಮಿಕ, ದಲಿತ ಸಂಘಟನೆಗಳು ಸರಕಾರದ ವಿರುದ್ಧ ತೀವ್ರ ಪ್ರತಿಭಟನೆಯನ್ನು ಆರಂಭಿಸಿವೆ. ಭೂ ಸುಧಾರಣಾ ಮತ್ತು ಎಪಿಎಂಸಿ ಕಾಯ್ದೆಗಳನ್ನು ಸುಗ್ರೀವಾಜ್ಞೆಗಳ ಮೂಲಕ ಜಾರಿಗೆ ತರಲು ರಾಜ್ಯ ಸರಕಾರ ಮುಂದಾಗಿರುವುದು ಹೋರಾಟ ನಿರತ ರೈತರ ಆಕ್ರೋಶ ಮುಗಿಲು ಮುಟ್ಟಿಸಿದೆ.

ಇತ್ತೀಚಿಗೆ ಸಂಸತ್ತಿನಲ್ಲಿ ಅಂಗೀಕರಿಸಲಾಗಿರುವ ಕೃಷಿ ಸುಧಾರಣೆ ಮತ್ತು ಕಾರ್ಮಿಕ ಕಾಯ್ದೆ ತಿದ್ದುಪಡಿ ಮಸೂದೆ ವಿರುದ್ಧ 35ಕ್ಕೂ ಹೆಚ್ಚು ರೈತರ, ಕಾರ್ಮಿಕರ, ದಲಿತರ ಮತ್ತು ಕೃಷಿ ಕೂಲಿಕಾರರ ಸಂಘಟನೆಗಳು ಸೆಪ್ಟೆಂಬರ್ 25 ರಂದು ಭಾರತ್ ಬಂದ್‌ಗೆ ಕರೆ ನೀಡಿದೆ. ಅಂದು ದೇಶಾದ್ಯಂತ ನೂತನ ಶಾಸನಗಳಿಗೆ ವಿರುದ್ಧವಾಗಿ ರೈಲು ತಡೆ, ರಸ್ತೆ ತಡೆ ಚಳವಳಿ ನಡೆಯಲಿದೆ. ಪ್ರಮುಖ ಪ್ರತಿಪಕ್ಷಗಳು 'ಭಾರತ್ ಬಂದ್'ಗೆ ಬೆಂಬಲ ಘೋಷಿಸಿವೆ.

ಕರ್ನಾಟಕದಲ್ಲಿ ಮಾತ್ರ ಸೆಪ್ಟೆಂಬರ್ 28 ರಂದು ಈ ಚಾರಿತ್ರಿಕ ಹೋರಾಟವನ್ನು ಯಶಸ್ವಿಗೊಳಿಸಲು ತೀರ್ಮಾನಿಸಿರುವ ವಿವಿಧ ರೈತ, ಕಾರ್ಮಿಕ, ದಲಿತ ಹಾಗೂ ಕೂಲಿಕಾರ ಸಂಘಟನೆಗಳು 25 ರಂದು ಬೆಂಗಳೂರು ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಐದು ಸಾವಿರಕ್ಕೂ ಹೆಚ್ಚು ಜನರು ಸೇರಿ ರಸ್ತೆತಡೆ ನಡೆಸಲಿದ್ದಾರೆ. ಈ ಚಾರಿತ್ರಿಕ ಹೋರಾಟ ಯಶಸ್ವಿಯಾಗುವ ಎಲ್ಲ ಸಾಧ್ಯತೆಗಳು ಕಂಡು ಬರುತ್ತಿವೆ.

ಹಮಾಲಿ ಕಾರ್ಮಿಕರ ಮುಷ್ಕರಕ್ಕೆ ಕರ್ನಾಟಕ ಪ್ರಾಂತ ರೈತ ಸಂಘದ ಸೌಹಾರ್ದ ಬೆಂಬಲ:

ಕರ್ನಾಟಕ ರಾಜ್ಯ ಹಮಾಲಿ ಕಾರ್ಮಿಕರ ಫೆಡರೇಷನ್ ರಾಜ್ಯದಾದ್ಯಂತ 23, 24 ಸೆಪ್ಟಂಬರ್ 2020 ರಂದು ಎಪಿಎಂಸಿ ಮತ್ತಿತರೆಡೆ ಹಮಾಲಿ ಕೆಲಸವನ್ನು ತೆಜಿಸಿ ಮುಷ್ಕರನಡೆಸುತ್ತಿದೆ. ಇದನ್ನು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ಬೆಂಬಲಿಸುತ್ತದೆ. ರಾಜ್ಯದಾದ್ಯಂತ ಈ ಮುಷ್ಕರದ ಯಶಸ್ವಿಗೆ ವರ್ತಕರು ಹಾಗೂ ರೈತರು ನೆರವಾಗಲು ಕರೆ ನೀಡುತ್ತದೆ.

ರಾಜ್ಯದ ಎಪಿಎಂಸಿಗಳ ಇತಿಹಾಸದಲ್ಲಿ ಇದು, ಎಪಿಎಂಸಿಗಳ ಉಳುವಿಗಾಗಿ ನಡೆಸುತ್ತಿರುವ ಅಲ್ಲಿನ ಹಮಾಲಿ ಶ್ರಮಿಕರ ಐತಿಹಾಸಿಕ ಮುಷ್ಕರವಾಗಿದೆ.

ಕೇಂದ್ರ ಹಾಗೂ ರಾಜ್ಯ ಸರಕಾರಗಳು ಜಾರಿಗೊಳಿಸುತ್ತಿರುವ ಎಪಿಎಂಸಿ ತಿದ್ದುಪಡಿ ಕಾಯ್ದೆ–2020 ಅದು ಕೇವಲ ಹಮಾಲಿ ಕಾರ್ಮಿಕರನ್ನು ಮಾತ್ರವೇ ಬಾಧಿಸುತ್ತಿಲ್ಲ. ಅವರೆಲ್ಲರ ಹಾಗು ಅಲ್ಲಿನ ವರ್ತಕರ, ದಲ್ಲಾಳಿಗಳ ಮತ್ತು ನೌಕರರ ಮಾತ್ರವಲ್ಲಾ ರಾಜ್ಯದ ಎಲ್ಲಾ ಗ್ರಾಮೀಣರ ಉದ್ಯೋಗ ಭದ್ರತೆಯನ್ನು ತೀವ್ರವಾಗಿ ಬಾಧಿಸುತ್ತದೆ. ಜಗತ್ತಿನ ಲೂಟಿಕೋರ ಕಾರ್ಪೋರೇಟ್ ಕಂಪನಿಗಳ ಲೂಟಿಯನ್ನು ರಾಜ್ಯದಲ್ಲಿ ವ್ಯಾಪಕವಾಗಿ ವಿಸ್ತರಿಸುವ ಮತ್ತು ಕೃಷಿ ಮಾರುಕಟ್ಟೆಯನ್ನು ಪ್ರವೇಶಿಸಲು ನೆರವಾಗುವ ಏಕೈಕ ದುರುದ್ದೇಶದಿಂದ ಇದನ್ನು ಜಾರಿಗೊಳಿಸಲಾಗುತ್ತಿದೆ.

ಅದೇ ರೀತಿ, ಕೇಂದ್ರ ಹಾಗೂ ರಾಜ್ಯ ಸರಕಾರಗಳು ರಾಜ್ಯದ ಜನತೆಯನ್ನು ಕೋವಿಡ್ – 19 ರ ಸಾಂಕ್ರಾಮಿಕದ ಹಾವಳಿಗೆ ಬಿಡಲಾಗಿದೆ. ಲಾಕ್ಡೌನ್ ಹಾಗೂ ಈ ಹಾವಳಿ ತೀವ್ರ ಆರ್ಥಿಕ ಸಂಕಷ್ಟವನ್ನುಂಟು ಮಾಡಿದೆ. ಜನರನ್ನು ರಕ್ಷಿಸಲು ಕೇಂದ್ರ ಹಾಗೂ ರಾಜ್ಯ ಸರಕಾರಗಳು ಯಾವುದೇ ಗಂಭೀರವಾದ ಪರಿಹಾರಗಳನ್ನು ನೀಡದಿರುವುದು ತೀವ್ರ ಖಂಡನೀಯವಾಗಿದೆ. ಈ ಕುರಿತು ಶೀಘ್ರವೇ ಕ್ರಮವಹಿಸುವಂತೆ ಕೇಂದ್ರ ಹಾಗೂ ರಾಜ್ಯ ಸರಕಾರಗಳನ್ನು ಕರ್ನಾಟಕ ಪ್ರಾಂತ ರೈತ ಸಂಘ ಒತ್ತಾಯಿಸುತ್ತದೆ.

ಹೀಗಾಗಿ, ಹಮಾಲಿ ಕಾರ್ಮಿಕರು ಎತ್ತಿರುವ ಹಕ್ಕೊತ್ತಾಯಗಳು ನ್ಯಾಯಯುತ ಮತ್ತು ರಾಜ್ಯದ ಎಲ್ಲರ ಹಕ್ಕೊತ್ತಾಯಗಳಾಗಿವೆ.

ಜಿ.ಸಿ. ಬಯ್ಯಾರೆಡ್ಡಿ, ಅಧ್ಯಕ್ಷರು

ಯು. ಬಸವರಾಜ, ಪ್ರಧಾನ ಕಾರ್ಯದರ್ಶಿ

ಜನವಿರೋಧಿ ಕೃಷಿ ಕ್ಷೇತ್ರ ಕಾರ್ಪೋರೇಟೀಕರಣದ ವಿರುದ್ಧ ರೈತ ಸಂಘರ್ಷ ಬೆಂಬಲಾರ್ಥ ಶಾಂತಿಯುತ ಪ್ರತಿಭಟನೆ ನಡೆಸುತ್ತಿದ್ದ ಮಹಿಳಾ ವಿದ್ಯಾರ್ಥಿ ಕಾರ್ಮಿಕ ಸಂಘಟನೆಗಳ ಕಾರ್ಯಕರ್ತರ ಬಂಧನಕ್ಕೆ ಜನವಾದಿ ಮಹಿಳಾ ಸಂಘಟನೆಯ ಖಂಡನೆ:

ಕೊರೊನಾ ಪೆಂಡಮಿಕ್ ನಿಂದ ದೇಶದ ಜನ ತತ್ತರಿಸುತ್ತಿರುವಾಗ ಕೇಂದ್ರ ಹಾಗೂ ರಾಜ್ಯ ಸರಕಾರಗಳುಸಮರೋಪಾದಿಯಲ್ಲಿ ಜನರ ನೆರವಿಗೆ ಧಾವಿಸಬೇಕಿತ್ತು.

ಆದರೆ ಜನರ ಕಷ್ಟದ ಪರಿಸ್ಥಿತಿಯ ಲಾಭ ಪಡೆದು ತಮ್ಮ ವರ್ಗ ಬಂಧುಗಳಿಗೆ ಎಲ್ಲ ರೀತಿಯ ಅನುಕೂಲ ಮಾಡಿಕೊಡಲು ಸ್ವತಃ ಸರಕಾರವೇ ಟೊಂಕ ಕಟ್ಟಿ ನಿಂತಿದೆ.

ಸಚಿವರು ಸಂಸದರು ಕೊವಿಡ್ ಸೋಂಕಿನಿಂದ ಸಾವಿಗೀಡಾಗಿದ್ದಾರೆ. ಇನ್ನು ಜನಸಾಮಾನ್ಯರ ಪರಿಸ್ಥಿತಿ ಹೇಳತೀರದ ಹಾಗಿದೆ.

ಇಂಥಹ ಪರಿಸ್ಥಿತಿಯ ಮಧ್ಯದಲ್ಲಿಯೇ ದೇಶದ ಬೆನ್ನೆಲು ಬಾಗಿರುವ ಕೃಷಿ ಮತ್ತು ಕೃಷಿಯಾಧಾರಿತ ರೈತರ ಬದುಕಿಗೆ ಬಾರುಕೋಲಿನಿಂದ ಬಾರಿಸಿದಂತೆ ಸುಗ್ರೀವಾಜ್ಞೆ ಗಳ ಮೂಲಕ ಕಾನೂನುಗಳಿಗೆ ತಿದ್ದುಪಡಿ ತರಲಾಗಿತ್ತು.

ಈಗ ತರಾತುರಿಯಲ್ಲಿ ಅವುಗಳನ್ನು ಸಂಸತ್ತಿನಲ್ಲಿ ಅಂಗೀಕರಿಸಲಾಗಿದೆ. ಹಾಗೆಯೇ ನಮ್ಮ ರಾಜ್ಯದಲ್ಲಿ ಭೂ ಸುಧಾರಣಾ ಮಸೂದೆಗೆ ತಿದ್ದುಪಡಿ ತಂದು ಬಡ ರೈತರ ಭೂಮಿಯನ್ನು ನಿರಾತಂಕವಾಗಿ, ಕಾನೂನು ಬದ್ಧವಾಗಿ ಕಬಳಿಸಲು ಕಾರ್ಪೊರೇಟ್ ವಲಯಕ್ಕೆ ಅನುಕೂಲ ಮಾಡಿಕೊಡುವ ಸುಗ್ರೀವಾಜ್ಞೆಯಾಗಿದೆ.

ದುಡಿಯುವ ಜನರ ಬದುಕು ಕಿತ್ತು ಕೊಳ್ಳುವುದು ಅಮಾನವೀಯ ಮತ್ತು ಅಪ್ರಜಾಪ್ರಭುತ್ವ ನಡೆ ಎಂದು ಸಾರ್ವಜನಿಕ ವಿರೋಧ ವ್ಯಕ್ತವಾಗಿದೆ.

ಈ ಎಲ್ಲ ಜನವಿರೋಧೀ ನಡೆಗಳನ್ನು ಖಂಡಿಸಿ ಪ್ರಜಾಪ್ರಭುತ್ವ ನೆಲೆಯಲ್ಲಿ ಪ್ರತಿಭಟನೆ ನಡೆಸುತ್ತಿದ್ದ ಪ್ರತಿಭಟನಾಕಾರರನ್ನು ಬಂಧಿಸಿದ್ದನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಖಂಡಿಸುತ್ತದೆ. ಮತ್ತು ಬಂಧಿಸಿದ ಎಲ್ಲರನ್ನೂ ಬೇಷರತ್ತಾಗಿ ಬಿಡುಗಡೆ ಮಾಡಬೇಕು.

ಸರಕಾರವು ಜನವಿರೋಧೀ ಕಾನೂನುಗಳನ್ನು ಹಿಂಪಡೆಯಬೇಕೆಂದು ಒತ್ತಾಯಿಸುತ್ತದೆ.

ದೇವಿ, ಅಧ್ಯಕ್ಷರು

ಗೌರಮ, ಪ್ರಧಾನ ಕಾರ್ಯದರ್ಶಿ (25.9.2020)



ವರದಿ: ವಾ.ಉ.

ರೈತರ ಹೋರಾಟವನ್ನು ಬೆಂಬಲಿಸಿ ಐಕ್ಯ ವೇದಿಕೆಯಿಂದ ಬೃಹತ್ ಹೆದ್ದಾರಿ ತಡೆ ಚಳುವಳಿ

ರೈತ ಕಾರ್ಮಿಕ ವಿರೋಧಿ ಸುಗ್ರೀವಾಜ್ಞೆಗಳ ವಾಪಾಸಾತಿಗಾಗಿ, ಸಂಸದರನ್ನು ಅಮಾನತುಗೊಳಿಸಿದ ನರೇಂದ್ರ ಮೋದಿ ಸರಕಾರದ ಫ್ಯಾಸಿಸ್ಟ್ ನಡೆಯನ್ನು ಖಂಡಿಸಿ ರೈತ ಕಾರ್ಮಿಕ ದಲಿತ ವಿದ್ಯಾರ್ಥಿ ಯುವಜನ ಮಹಿಳಾ ಸಂಘಟನೆಗಳು ಹಾಗೂ ವಿವಿಧ ಜಾತ್ಯಾತೀತ ಪಕ್ಷಗಳ ಐಕ್ಯ ವೇದಿಕೆಯಿಂದ ನಗರದಲ್ಲಿ 25 ಸೆಪ್ಟೆಂಬರ್ 2020 ರಂದು ನಂತೂರು ಜಂಕ್ಷನ್ ಬಳಿಯಲ್ಲಿ ಬೃಹತ್ ಹೆದ್ದಾರಿ ತಡೆ ಚಳುವಳಿ ನಡೆಯಿತು. ರೈತ ಕಾರ್ಮಿಕರ ವಿರೋಧಿಯಾದ ನರೇಂದ್ರ ಮೋದಿ ಸರಕಾರದ ವಿರುದ್ದ ಪ್ರತಿಭಟನಾಕಾರರು ಆಕ್ರೋಶ ಭರಿತರಾಗಿ ಘೋಷಣೆ ಕೂಗಿದರು.

ಬಳಿಕ ನಡೆದ ಪ್ರತಿಭಟನಾ ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿದ ಕರ್ನಾಟಕ ಪ್ರಾಂತ ರೈತ ಸಂಘದ ದ.ಕ. ಜಿಲ್ಲಾಧ್ಯಕ್ಷರಾದ ಕೃಷ್ಣಪ್ಪ ಸಾಲ್ಯಾನ್ ರವರು, 'ಕೃಷಿ ಮತ್ತು ಮಾರಾಟಕ್ಕೆ ಸಂಬಂಧಿಸಿದ ಮೂರು ಸುಗ್ರೀವಾಜ್ಞೆಗಳು ಆಹಾರಧಾನ್ಯಗಳು ಮತ್ತು ಇತರ ಕೃಷಿ ಸರಕುಗಳನ್ನು ಅವಶ್ಯಕ ಸರಕುಗಳ ಪಟ್ಟಿಯಿಂದ ತೆಗೆಯುತ್ತವೆ ಹಾಗೂ ದಾಸ್ತಾನು ಮಿತಿಗಳನ್ನು ಏರಿಸಿವೆ. ರಾಜ್ಯಗಳ ಎಪಿಎಂಸಿ ಗಳನ್ನು ಸರ್ವನಾಶಗೊಳಿಸುವ ಮೂಲಕ ಆಹಾರ ಭದ್ರತೆಯ ಶಕ್ತಿಯನ್ನೂ ಕೂಡ ಕುಂದಿಸುತ್ತದೆ' ಎಂದು ಹೇಳಿದರು.

ರಾಜ್ಯ ರೈತ ಸಂಘ ಹಸಿರು ಸೇನೆಯ ಜಿಲ್ಲಾ ನಾಯಕರಾದ ಓಸ್ವಾಲ್ಡ್ ಪ್ರಕಾಶ್ ಫೆರ್ನಾಂಡೀಸ್ ರವರು ಮಾತನಾಡುತ್ತಾ, 'ಆತ್ಮನಿರ್ಭರದ ಹೆಸರಿನಲ್ಲಿ ಮೋದಿ ಸರಕಾರವು ನವ ಉದಾರವಾದಿ ನೀತಿಗಳನ್ನು ಅನುಸರಿಸುವ ಮೂಲಕ ಕೃಷಿ ಕ್ಷೇತ್ರವನ್ನು ಸಂಪೂರ್ಣವಾಗಿ ಕಾರ್ಪೋರೇಟ್ ಕಂಪೆನಿಗಳಿಗೆ ಒಪ್ಪಿಸಲು ಸಜ್ಜಾಗಿದೆ' ಎಂದು ಹೇಳಿದರು.

ದೇಶಾದ್ಯಂತ ನಡೆಯುತ್ತಿರುವ ರೈತರ ಹೋರಾಟವನ್ನು ಬೆಂಬಲಿಸಿ ಮಾಜಿ ಶಾಸಕರಾದ ಜೆ.ಆರ್. ಲೋಬೋ, ಡಿವೈಎಫ್ಐ ರಾಜ್ಯಾಧ್ಯಕ್ಷರಾದ ಮುನೀರ್ ಕಾಟಿಪಳ್ಳ, ಸಿಪಿಐ ಜಿಲ್ಲಾ ನಾಯಕರಾದ ಬಿ. ಶೇಖರ್, ಯುವ ಕಾಂಗ್ರೆಸ್ ನ ಜಿಲ್ಲಾಧ್ಯಕ್ಷರಾದ ಮಿಥುನ್ ರೈ, ಜೆಡಿಎಸ್ ರಾಜ್ಯ ನಾಯಕರಾದ ಎಂ.ಬಿ. ಸದಾಶಿವ, ದಲಿತ ನಾಯಕರಾದ ಎಂ. ದೇವದಾಸ್, ಸಿಐಟಿಯು ಜಿಲ್ಲಾಧ್ಯಕ್ಷರಾದ ಜೆ. ಬಾಲಕೃಷ್ಣ ಶೆಟ್ಟಿ, ಸಾಮಾಜಿಕ ಹೋರಾಟಗಾರರಾದ ಪಿ.ವಿ. ಮೋಹನ್ ರವರು ಮಾತನಾಡಿ, 'ದೇಶ ಪ್ರೇಮದ ಹೆಸರಿನಲ್ಲಿ ಜನತೆಯನ್ನು ಭಾವನಾತ್ಮಕವಾಗಿ ವಂಚಿಸಿ, ಪ್ರತಿಯೊಂದು ಹೆಜ್ಜೆಯಲ್ಲೂ ದೇಶದ್ರೋಹಿ ಕಾನೂನುಗಳನ್ನು ಜಾರಿಗೊಳಿಸುವ ನರೇಂದ್ರ ಮೋದಿ ಸರಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.'

ಪ್ರತಿಭಟನೆಯಲ್ಲಿ ರೈತ ಸಂಘಟನೆಯ ನಾಯಕರಾದ ವಾಸುದೇವ ಉಚ್ಚಿಲ್, ರಾಮಣ್ಣ ವಿಟ್ಲ, ಪ್ರೇಮನಾಥ ಶೆಟ್ಟಿ, ಸುಧಾಕರ ಜೈನ್, ವಿವಿಯನ್ ಪಿಂಟೋ, ವಿವಿಧ ಕಾರ್ಮಿಕ ಸಂಘಟನೆಗಳ ಮುಖಂಡರಾದ ಹೆಚ್.ವಿ. ರಾವ್, ಸೀತಾರಾಮ ಬೇರಿಂಜ, ಸುನಿಲ್ ಕುಮಾರ್ ಬಜಾಲ್, ಸುರೇಶ್ ಬಂಟ್ವಾಳ, ಪದ್ಮಾವತಿ ಶೆಟ್ಟಿ, ಬೊಂಡಾಲ ಚಿತ್ತರಂಜನ್ ಶೆಟ್ಟಿ, ಧೀರಜ್ ಪಾಲ್, ದಿನೇಶ್ ಕುಂಪಲ, ಜಗದೀಶ್, ಕಾಂಗ್ರೆಸ್ ಜಿಲ್ಲಾ ನಾಯಕರಾದ ಸದಾಶಿವ ಉಳ್ಳಾಲ, ಸಂತೋಷ್ ಕುಮಾರ್ ಶೆಟ್ಟಿ, ಮಹಮ್ಮದ್ ಸಲೀಂ, ಕಾರ್ಪೋರೇಟರ್‌ಗಳಾದ ಪ್ರವೀಣ್ ಚಂದ್ರ ಆಳ್ವ, ಅನಿಲ್ ಕುಮಾರ್, ಎ.ಸಿ. ವಿನಯರಾಜ್, ನವೀನ್ ಡಿಸೋಜ, ಶಂಶುದ್ದೀನ್, ಅಶ್ರಫ್, ಜೆಡಿಎಸ್ ನಾಯಕರಾದ ದಿನಕರ ಉಳ್ಳಾಲ, ರವೀಂದ್ರನಾಥ ಶೆಟ್ಟಿ, ಸಿಪಿಐ ನಾಯಕರಾದ ವಿ. ಕುಕ್ಯಾನ್, ಮಹಿಳಾ ಸಂಘಟನೆಯ ನಾಯಕರಾದ ಜಯಂತಿ ಶೆಟ್ಟಿ, ಭಾರತಿ ಬೋಳಾರ, ಶಾಲೆಟ್ ಪಿಂಟೋ, ಭಾರತಿ ಪ್ರಶಾಂತ್, ಶೋಭಾ ಕೇಶವ್, ಶಶಿಕಲಾ ಸುರತ್ಕಲ್, ಅಪ್ಪಿ, ದಲಿತ ಸಂಘಟನೆಯ ಮುಖಂಡರಾದ ರಘು ಎಕ್ಕಾರ್, ತಿಮ್ಮಯ್ಯ ಕೊಂಚಾಡಿ, ಸಾಮಾಜಿಕ ಚಿಂತಕರಾದ ಪ್ರಮೀಳಾ ದೇವಾಡಿಗ, ರಾಜೇಂದ್ರ ಚಿಲಿಂಬಿ, ಯುವಜನ ನಾಯಕರಾದ ಬಿ.ಕೆ. ಇಮ್ತಿಯಾಜ್, ಸಂತೋಷ್ ಬಜಾಲ್, ಅಶ್ರಫ್ ಕೆ.ಸಿ. ರೋಡ್, ಸುನಿಲ್ ತೇವುಲ, ಜಗತ್, ಸುಧಾಕರ್ ಕಲ್ಲೂರು, ಹರ್ಷಿತ್ ಮುಂತಾದವರು ಭಾಗವಹಿಸಿದ್ದರು.

ರೈತ ಕಾರ್ಮಿಕ ದಲಿತ ಜನಪರ ಚಳುವಳಿಗಳ ಒಕ್ಕೂಟದಿಂದ ಸಪ್ಟೆಂಬರ್ 25 ರಂದು ರಸ್ತೆ ತಡೆ



ರೈತ ಪ್ರಶ್ನೆಗಳು ಪ್ರಧಾನವಾಗಿದ್ದು, ದ.ಕ.ಜಿಲ್ಲೆಯಲ್ಲಿ ಜನಪರ ಚಳುವಳಿಗಳ ಒಕ್ಕೂಟ ರೂಪುಗೊಂಡಿದ್ದು, ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ರಾಜ್ಯ ರೈತ ಸಂಘ, ಸಿಐಟಿಯು, ದಸಂಸ (ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿತ) ಡಿಎಚ್‌ಎಸ್, ಡಿವೈಎಫ್ಐ, ಎನ್‌ಜಿಒ ಸಂಘಟನೆಗಳು ಈ ಒಕ್ಕೂಟದ ಭಾಗವಾಗಿವೆ. ಪಾರ್ಲಿಮೆಂಟಿನ ಮಳೆಗಾಲದ ಅಧಿವೇಶನ ಸಪ್ಟೆಂಬರ ಉತ್ತರಾರ್ಧದಲ್ಲಿ ನಡೆದಿದ್ದು, ಕೃಷಿ ಸಂಬಂಧಿಯಾಗಿ ಕೇಂದ್ರ ಸರಕಾರವು ಜಾರಿಗೊಳಿಸಿದ್ದ 3 ರೈತ ವಿರೋಧಿ ಸುಗ್ರೀವಾಜ್ಞೆಗಳು ಎರಡೂ ಸದನಗಳಲ್ಲಿ ಅಂಗೀಕಾರಗೊಂಡಿದ್ದು ರಾಷ್ಟ್ರಪತಿ ಅಂಕಿತದೊಂದಿಗೆ ಜಾರಿಯಾಗಲಿವೆ. ಇದಕ್ಕಾಗಿ ಕೇಂದ್ರ ಬಿಜೆಪಿ ಸರಕಾರವು ರಾಜ್ಯ ಸಭೆಯಲ್ಲಿ ನಡೆದುಕೊಂಡ ರೀತಿ ಅತ್ಯಂತ ಅಪ್ರಜಾಸತ್ತಾತ್ಮಕವಾಗಿತ್ತು. ಅದೇ ರೀತಿ ಕರ್ನಾಟಕದ ಶಾಸನ ಸಭೆಗಳಲ್ಲಿ ರೈತ ವಿರೋಧಿಯಾದ ಭೂಸುಧಾರಣಾ ತಿದ್ದುಪಡಿ ಕಾಯಿದೆ 2020, ಎಪಿಎಂಸಿ ತಿದ್ದುಪಡಿ ಕಾಯಿದೆ, ವಿದ್ಯುತ್ ತಿದ್ದುಪಡಿ ಕಾಯಿದೆಗಳು ಪಕ್ಷ ಹೊಂದಿದ್ದ ಬಹುಮತದ ಆಧಾರದಿಂದ ಅಂಗೀಕಾರಗೊಂಡಿವೆ. ಕೇಂದ್ರ ಹಾಗೂ ರಾಜ್ಯ ಸರಕಾರದ ಬಿಜೆಪಿ ಆಡಳಿತ ಯಾವ ಹಂತದಲ್ಲೂ ರೈತ ಸಂಘಟನೆಗಳೊಂದಿಗೆ ಚರ್ಚೆ ನಡೆಸದೆ, ಸದನ ಸಮಿತಿಗಳನ್ನೂ ನೇಮಕ ಮಾಡದೆ ಕೋವಿಡ್ ಸಂಕಷ್ಟ ಕಾಲದಲ್ಲಿ ಸುಗ್ರೀವಾಜ್ಞೆಗಳ ಮೂಲಕ ಹೊಸ ಶಾಸನಗಳನ್ನು ಜಾರಿಗೊಳಿಸಿದ್ದು ಮಾತ್ರವಲ್ಲ, ಸಂಸತ್ತು ಹಾಗೂ ಅಸೆಂಬ್ಲಿಗಳಲ್ಲಿ ತಮ್ಮ ಬಹುಮತದ ಆಧಾರದಿಂದ ಜನತೆಯನ್ನು ಧಿಕ್ಕರಿಸಿ ರೈತ ಹಾಗೂ ಕಾರ್ಮಿಕ ವಿರೋಧಿ ಕಾಯ್ದೆಗಳನ್ನು ಅಂಗೀಕರಿಸಿದೆ. ಇದನ್ನು ಪ್ರತಿಭಟಿಸಿ ರಾಜ್ಯಾದ್ಯಂತ ಸಪ್ಟೆಂಬರ್ 25 ರಂದು ರಸ್ತೆ ತಡೆ ಚಳುವಳಿಯನ್ನು ನಡೆಸಬೇಕೆಂದೂ, ಸಪ್ಟೆಂಬರ್ 28 ರಂದು ಕರ್ನಾಟಕ ಬಂದ್ ನಡೆಸಬೇಕೆಂದೂ ಅಖಿಲ ಭಾರತ ರೈತ ಸಂಘರ್ಷ ಸಮನ್ವಯ ಸಮಿತಿ ಕರೆಕೊಟ್ಟಿದೆ. ದ.ಕ.ಜಿಲ್ಲೆಯಲ್ಲಿ ರೈತ ಕಾರ್ಮಿಕ ದಲಿತ ಜನಪರ ಚಳುವಳಿಗಳ ಒಕ್ಕೂಟ ಆ ಕರೆಗೆ ಸ್ಪಂದಿಸಿ ಸಪ್ಟೆಂಬರ್ 25 ರಂದು ರಸ್ತೆ ತಡೆ ನಡೆಸಿದೆ.

ಮಂಗಳೂರಿನ ನಂತೂರು ವೃತ್ತದಲ್ಲಿ ನಡೆದ ರಸ್ತೆ ತಡೆ ಪ್ರತಿಭಟನೆಯಲ್ಲಿ ಪ್ರಾಂತ ರೈತ ಸಂಘದ ಜಿಲ್ಲಾದ್ಯಕ್ಷ ಕೃಷ್ಣಪ್ಪ ಸಾಲ್ಯಾನ್, ರಾಜ್ಯ ರೈತ ಸಂಘ ಮತ್ತು ಹಸಿರುಸೇನೆಯ ಜಿಲ್ಲಾದ್ಯಕ್ಷ ಓಸ್ವಾಲ್ಡ್ ಪ್ರಕಾಶ್ ಫೆರ್ನಾಂಡೀಸ್, ಮಾಜಿ ಕಾಂಗ್ರೆಸ್ ಶಾಸಕ ಜೆ.ಆರ್.ಲೋಬೋ, ಡಿವೈಎಫ್ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ ಮಾತನಾಡಿದರು. ಸಿಐಟಿಯು, ದಲಿತ ಹಕ್ಕುಗಳ ಸಮಿತಿ, ದಸಂಸ, ಡಿವೈಎಫ್ಐ, ಎಸ್‌ಎಫ್ಐ, ಸಿಪಿಐ(ಎಂ), ಸಿಪಿಐ, ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳ ಜಿಲ್ಲಾ ಸಮಿತಿಗಳು ಈ ರಸ್ತೆ ತಡೆಯಲ್ಲಿ ಬೆಂಬಲಿಸಿ ಭಾಗವಹಿಸಿದ್ದವು. ಈ ಸಂಘಟನೆಗಳ ಜಿಲ್ಲಾ ಮತ್ತು ನಗರ ಮುಖಂಡರು ಭಾಗವಹಿಸಿದ್ದರು. ಸುಮಾರು 150ಕ್ಕೂ ಮೀರಿ ಪ್ರತಿಭಟನಾಕಾರರು ಉಪಸ್ಥಿತರಿದ್ದರು.

ಸುಳ್ಯ ಪಟ್ಟಣದಲ್ಲಿ ನಡೆದ ರಸ್ತೆ ತಡೆ ಕಾರ್ಯಕ್ರಮದಲ್ಲಿ ಸಿಐಟಿಯು, ಜನತಾದಳ (ಎಸ್) ಹಾಗೂ ಕರ್ನಾಟಕ ರಾಜ್ಯ ರೈತ ಸಂಘಗಳು ಭಾಗವಹಿಸಿದ್ದವು. ಪ್ರತಿಭಟನೆಯನ್ನುದ್ದೇಶಿಸಿ ಈ ಸಂಘಟನೆಗಳ ಮುಖಂಡರಾದ ಸಿಐಟಿಯುನ ಜಾನಿ ಸಂಪಾಜೆ, ಜೆಡಿಎಸ್‌ನ ಎಂ.ಬಿ.ಸದಾಶಿವ ಮತ್ತು ರಾಜ್ಯ ರೈತ ಸಂಘದ ವಾಸುದೇವ ಪೈ ಮಾತನಾಡಿದರು. ಕೆಲವು ದಿನಗಳ ಮೊದಲು ಅಂದರೆ ಸಪ್ಟೆಂಬರ್ 21 ರಂದು ಇವೇ ಸಂಘಟನೆಗಳ ರೈತ ಪ್ರಶ್ನೆಗಳತ್ತ ಜನತೆಯ ಗಮನ ಸೆಳೆಯುವುದಕ್ಕಾಗಿ ಸುಳ್ಯದ ಮಿನಿವಿಧಾನಸೌಧದ ಎದುರು ಪ್ರತಿಭಟನಾ ಪ್ರದರ್ಶನ ನಡೆಸಿದ್ದವು.

ಸಪ್ಟೆಂಬರ್ 24 ರಂದು ಬೆಳ್ತಂಗಡಿಯಲ್ಲಿ ಮಿನಿವಿಧಾನಸೌಧದ ಎದುರು ರೈತ ಪ್ರಶ್ನೆಗಳನ್ನೆತ್ತಿ ಪ್ರತಿಭಟನೆ ನಡೆಸಿದ್ದ ಅಲ್ಲಿನ ಸಂಘಟನೆಗಳು ಮರುದಿನ ಅಂದರೆ ಸಪ್ಟೆಂಬರ್ 25 ರಂದು ರೈತ ಸಂಘರ್ಷ ಸಮನ್ವಯ ಸಮಿತಿಯ ಕರೆಯಂತೆ ➚



ಸೆಪ್ಟಂಬರ್ 28 ರಂದು ಕರ್ನಾಟಕ ಬಂದ್ ಆಚರಣೆಗೆ ಅಖಿಲ ಭಾರತ ಕಿಸಾನ್ ಸಂಘರ್ಷ ಸಮನ್ವಯ ಸಮಿತಿ- ಕರ್ನಾಟಕದ ಕರೆ

ಅಖಿಲ ಭಾರತ ಕಿಸಾನ್ ಸಂಘರ್ಷ ಸಮನ್ವಯ ಸಮಿತಿ – ಕರ್ನಾಟಕ ದ ಆನ್ ಲೈನ್ ಸಭೆಯು ನೆನ್ನೆ ನಡೆಯಿತು. ಈ ಸಭೆಯಲ್ಲಿ ಎರಡೂ ರಾಜ್ಯ ರೈತ ಸಂಘಗಳು, ಕರ್ನಾಟಕ ಪ್ರಾಂತ ರೈತ ಸಂಘ, ಅಖಿಲ ಭಾರತ ಕಿಸಾನ್ ಸಭಾ, ರೈತ ಕೃಷಿ ಕಾರ್ಮಿಕರ ಸಂಘ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ, ಆಶಾ, ಜನಶಕ್ತಿ ಮುಂತಾದ 09 ಸಂಘಟನೆಗಳು ಸಭೆಯಲ್ಲಿ ಪಾಲ್ಗೊಂಡಿದ್ದವು. ರಾಜ್ಯದ ಎಲ್ಲಾ ದಲಿತ ಹಾಗೂ ಕನ್ನಡಪರ ಸಂಘಟನೆಗಳು, ಬಹುತೇಕ ಕಾರ್ಮಿಕ ಸಂಘಗಳು, ಈ ಸಭೆಯ ನಿರ್ಣಯಕ್ಕೆ ಬದ್ಧವೆಂದು ಸೂಚನೆ ನೀಡಿದ್ದವು. ಎಪಿಎಂಸಿ ವರ್ತಕ ಸಮುದಾಯವು ಬೆಂಬಲಿಸಿದೆ.



ಕೇಂದ್ರ ಸರಕಾರದ, ರೈತ ಹಾಗೂ ಕೃಷಿಕೂಲಿಕಾರರು, ಕಸುಬುದಾರರ ಆಧಾರಿತ ಕೃಷಿ ವಿರೋಧಿಯಾದ ಮತ್ತು ಕಾರ್ಪೋರೇಟ್ ಕಂಪನಿಗಳ ಪರವಾದ ಕೃಷಿ ಸಂಬಂಧಿತ ಬಿಲ್ ಗಳನ್ನು ಕೂಡಲೇ ವಾಪಾಸು ಪಡೆಯಬೇಕು ಹಾಗೂ ಕರ್ನಾಟಕ ಸರಕಾರ ಈಚೆಗೆ ಘೋಷಿಸಿರುವ ಕೃಷಿ ವಿರೋಧಿ, ಭೂಸುಧಾರಣೆ ತಿದ್ದುಪಡಿ ಕಾಯ್ದೆ– 2020 ಹಾಗೂ ಎಪಿಎಂಸಿ ತಿದ್ದುಪಡಿ ಕಾಯ್ದೆ– 2020, ಅಗತ್ಯ ವಸ್ತುಗಳ ತಿದ್ದುಪಡಿ ಕಾಯ್ದೆ–2020 ಹಾಗೂ ವಿದ್ಯುಚ್ಛಕ್ತಿ ತಿದ್ದುಪಡಿ ಕಾಯ್ದೆ– 2020 ಹಾಗೂ ಕಾರ್ಮಿಕ ವಿರೋಧಿ ತಿದ್ದುಪಡಿ ಕಾಯ್ದೆ ಮುಂತಾದ ಸುಗ್ರೀವಾಜ್ಞೆಗಳನ್ನು ವಾಪಾಸು ಪಡೆಯಬೇಕು ಹಾಗೂ ಅವುಗಳನ್ನು ಶಾಸನಗಳನ್ನಾಗಿ ರೂಪಿಸುವ ಪ್ರಯತ್ನಗಳನ್ನು ತಕ್ಷಣವೇ ಕೈಬಿಡಬೇಕು ಎಂದು ಕೇಂದ್ರ ಹಾಗೂ ರಾಜ್ಯ ಸರಕಾರಗಳನ್ನು ಒತ್ತಾಯಿಸಿ, ಈ ಕರಾಳ ಕಾಯ್ದೆಗಳಿಂದ ಬಾಧಿತರಾಗುವ ಎಲ್ಲ ಜನ ವಿಭಾಗಗಳು ಮತ್ತು ಸಮುದಾಯಗಳು, ನಾಗರೀಕರು ಸ್ವಯಂ ಪ್ರೇರಣೆಯಿಂದ ತಮ್ಮ ಎಲ್ಲಾ ಕೆಲಸ ಕಾರ್ಯ ಹಾಗೂ ವಹಿವಾಟುಗಳನ್ನು ಸ್ಥಗಿತಗೊಳಿಸಿ ಕರ್ನಾಟಕವನ್ನು ಸ್ವಯಂ ಪ್ರೇರಿತ ಬಂದ್ ಆಗಿ ಪರಿವರ್ತಿಸಿ, ತಮ್ಮ ತೀವ್ರ ಪ್ರತಿರೋಧವನ್ನು ರಾಜ್ಯಾದ್ಯಂತ ಸೆಪ್ಟಂಬರ್ 28 ರಂದು ವ್ಯಕ್ತಪಡಿಸಲು ಕರೆ ನೀಡಿದೆ.

ಕೇಂದ್ರ ಸರಕಾರ, ಜೆಪಿಸಿಗಳಿಗೆ ಒಪ್ಪಿಸಿ ಹಾಗೂ ಸಾರ್ವಜನಿಕವಾಗಿ ಚರ್ಚಿಸಿ ನಂತರ ಪಾರ್ಲಿಮೆಂಟನಲ್ಲಿ ವಿವರವಾಗಿ ಪರಿಶೀಲಿಸಿ, ಸಾವಧಾನವಾಗಿ ಈ ಮಸೂದೆಗಳ ಕುರಿತು ನಿರ್ಧರಿಸಬಹುದಾಗಿತ್ತು. ಇವುಗಳು ಈ ದೇಶದ ರೈತರ ಕೋರಿಕೆಗಳೇನಾಗಿರಲಿಲ್ಲ. ಮಾತ್ರವಲ್ಲಾ, ದೇಶದಾದ್ಯಂತ ಇವುಗಳ ಸುಗ್ರೀವಾಜ್ಞೆಗಳಿಗೆ ವ್ಯಾಪಕವಾದ ವಿರೋಧವನ್ನು ವ್ಯಕ್ತಪಡಿಸಲಾಗಿತ್ತು.

ಆದಾಗಲೂ, ಇಷ್ಟೊಂದು ಅವಸರದಿಂದ ಅದೂ ಕೂಡಾ ಇಡೀ ದೇಶ ಕೋವಿಡ್–19 ರಿಂದ ತೀವ್ರವಾಗಿ ಬಾಧಿತವಾಗಿರುವಾಗ, ಇದರ ಕುರಿತು ಗಮನ ಹರಿಸಿ ಜನತೆಯನ್ನು ರಕ್ಷಿಸುವ ಬದಲು ಇಷ್ಟೊಂದು ಅವಸರವಾಗಿ ಮತ್ತು ಬಲವಂತವಾಗಿ, ಪಾರ್ಲಿಮೆಂಟ್ ನೀತಿಗಳನ್ನು ಉಲ್ಲಂಘಿಸಿ, ಈ ಬಿಲ್‌ಗಳನ್ನು ದೇಶದ ಮೇಲೆ ಹೇರುವ ಅವಶ್ಯಕತೆಯಾದರೂ ಏನಿತ್ತು? ಯಾರ ಒತ್ತಡವಿತ್ತು? ಯಾರನ್ನು ತೃಪ್ತಿ ಪಡಿಸಬೇಕಿತ್ತು? ಎಂದು ಎಐಕೆಎಸ್ ಸಿಸಿ–ಕರ್ನಾಟಕ ಪ್ರಶ್ನಿಸುತ್ತದೆ.

ಇವು, ರೈತರ ಹಾಗೂ ಮತ್ತಿತರೇ ಪರಂಪರೆಯಿಂದ ನಿರ್ವಹಿಸಲಾಗುವ ಉಪಕಸುಬುಗಳಾದ, ಹೈನುಗಾರಿಕೆ, ಕೋಳಿ, ಕುರಿ ಹಾಗೂ ಹಂದಿ ಸಾಕಾಣಿಕೆ ಮತ್ತು ಮೀನುಗಾರಿಕೆಯಲ್ಲಿ ತೊಡಗಿರುವವರು ಮತ್ತು ಕೃಷಿ ಆಧಾರಿತ ಕಸುಬುಗಳ ಕಸುಬುದಾರರ ಸಂಕುಲಗಳನ್ನೇ ಸಾರ್ವನಾಶ ಮಾಡಲಿವೆ. ಇದೊಂದು ಈ ಜನ ಸಮುದಾಯಗಳ ಮೇಲಿನ ಚಾರಿತ್ರಿಕ ದೌರ್ಜನ್ಯವಾಗಿದೆ.

ಬೆಲೆ ಖಾತರಿ, ಕೃಷಿಸೇವೆಗಳ ಕುರಿತ ರೈತರ (ಸಶಕ್ತೀಕರಣ ಮತ್ತು ರಕ್ಷಣೆ) ಒಪ್ಪಂದದ ಮಸೂದೆ–2020 ನಮ್ಮ ದೇಶದ ಹಾಗೂ ವಿದೇಶಗಳ ಕೃಷಿ ವ್ಯಾಪಾರಿ ಸಂಸ್ಥೆಗಳು, ರಫ್ತುದಾರರು, ಸಗಟು ವರ್ತಕರು, ಚಿಲ್ಲರೆ ವ್ಯಾಪಾರದಲ್ಲಿ ತೊಡಗಿದ ದೊಡ್ಡ ಬಂಡವಾಳದಾರರು, ಕಾರ್ಪೋರೇಟ್ ಸಂಸ್ಥೆಗಳಿಗೆ ರೈತರ ಕೃಷಿ ಉತ್ಪನ್ನಗಳಾದ ಏಕದಳ, ದ್ವಿದಳ ಧಾನ್ಯಗಳು, ಎಣ್ಣೆ ಕಾಳುಗಳು, ತರಕಾರಿ, ಹಣ್ಣುಗಳು, ಕಬ್ಬು, ಮಸಾಲೆ ಪದಾರ್ಥಗಳು, ಹತ್ತಿ, ಹತ್ತಿ ಬೀಜ, ಸೆಣಬು, ಹಾಗೂ ಗೋಡಂಬಿ ಮುಂತಾದ ನಟ್ಸ್‌ಗಳು ಮತ್ತು ಹೈನುಗಾರಿಕೆ, ಪಶು ಆಹಾರ, ಹಾಲು ಉತ್ಪನ್ನಗಳು, ಕೋಳಿ, ಕುರಿ, ಹಂದಿ ಸಾಕಾಣೆ, ಮೀನುಗಾರಿಕೆಗಳ ಮುಂಗಡ ವ್ಯಾಪಾರದಲ್ಲಿ ತೊಡಗಲು ಅವಕಾಶ ನೀಡುತ್ತದೆ.

ಈ ಮುಂಗಡ ವ್ಯಾಪಾರವೆಂಬುದು ಬೆಳೆ ಮತ್ತಿತರೆ ಉತ್ಪನ್ನಗಳು, ಬಿತ್ತನೆ ಹಾಗೂ ಉತ್ಪಾದಿಸಲ್ಪಡುವ ಪೂರ್ವವೇ ಇಂತಹ ಕಂಪನಿಗಳೊಂದಿಗೆ ಮಾರಾಟ ಮಾಡಿಕೊಳ್ಳುವ ಮೋಸದಿಂದ ಕೂಡಿದ ವ್ಯವಸ್ಥೆಯಾಗಿದೆ. ಇಂತಹ ದೈತ್ಯ ಕಂಪನಿಗಳ ಭಾರಿ ಬಂಡವಾಳ ಹಾಗೂ ಪ್ರಧಾನ ಮಂತ್ರಿಗಳವರೆಗಿನ ಅಧಿಕಾರಿಗಳ ಪ್ರಭಾವದೆದುರು, ಯಾವುದೇ ರೈತ ಹಾಗೂ ಕಸುಬುದಾರ ಖಂಡಿತಾ ಅವರ ಮೋಸಗಳನ್ನು ಎದುರಿಸಿ ನಿಲ್ಲಲು ಸಾಧ್ಯವಿಲ್ಲ. ಕೇಂದ್ರ ಹಾಗೂ ರಾಜ್ಯ ಸರಕಾರಗಳು ರೈತರ ಜೊತೆ ಸೇರಿ, ಅಂತಹ ಮೋಸಗಳಿಂದ ರೈತರನ್ನು ಹಾಗೂ ಕಸುಬುದಾರರನ್ನು ರಕ್ಷಿಸುವ ಗಂಭೀರವಾದ ಕ್ರಮಗಳೇನನ್ನು ಕೈಗೊಂಡಿಲ್ಲ.

ಇಂತಹ ದೈತ್ಯ ಕಂಪನಿಗಳ ಲೂಟಿಗಾಗಿಯೇ ಎಪಿಎಂಸಿಗಳನ್ನು ನಾಶ ಮಾಡುವ ಮತ್ತು ಗ್ರಾಹಕರ ಅಪಾರವಾದ ಲೂಟಿಗೆ ನೆರವಾಗುವ ಇನ್ನೆರಡು ತಿದ್ದುಪಡಿ ಕಾಯ್ದೆಗಳನ್ನ ತರಲಾಗಿದೆ. ಅದೇ ರೀತಿ ಈ ಎಲ್ಲವುಗಳು ನಮ್ಮ ಸಹಕಾರಿ ಚಳುವಳಿಯನ್ನೇ ಹೊಸಕಿ ಹಾಕುತ್ತವೆ.

ಈ ಕಾಯ್ದೆಗಳಿಂದ ಎಲ್ಲಾ ರೈತರು, ಕೃಷಿಕೂಲಿಕಾರರು, ಕಸುಬುದಾರರು, ಕೃಷಿ ಮಾರುಕಟ್ಟೆ ವರ್ತಕರು, ಅಲ್ಲಿನ ನೌಕರರು, ಕೃಷಿ ಸಂಬಂಧಿ ಹೂಡಿಕೆಗಳಾದ ಬೀಜ, ಗೊಬ್ಬರ ಕ್ರಿಮಿನಾಶಕಗಳ ವ್ಯಾಪಾರಿಗಳು, ಹಾಲು ಉತ್ಪಾದಕರು, ಎಲ್ಲಾ ಸಹಕಾರ ಸಂಘಗಳು, ಕೋಳಿ, ಕುರಿ, ಹಂದಿ ಸಾಕಾಣೆದಾರರು, ಈ ಉತ್ಪನ್ನಗಳನ್ನು ಆಧರಿಸಿದ ಸಣ್ಣ ಹಾಗೂ ಮಧ್ಯಮ ಕೈಗಾರಿಕೆಗಳ ಮಾಲೀಕರು, ಅಲ್ಲಿನ ಕಾರ್ಮಿಕರು ಹಾಗೂ ಇವುಗಳನ್ನು ಆಧರಿಸಿದ ವ್ಯಾಪಾರಿಗಳು, ಚಿಲ್ಲರೆ ವ್ಯಾಪಾರಿಗಳು, ಬೀದಿ ಬದಿ ವ್ಯಾಪಾರಿಗಳು, ಕುಲ ಕಸುಬುದಾರರು, ದಲಿತರು, ಮಹಿಳೆಯರು, ಒಟ್ಟಾರೇ ಸಮಸ್ತ ಗ್ರಾಹಕ ಸಮುದಾಯಗಳು ತೀವ್ರ ರೀತಿಯಲ್ಲಿ ಬಾಧಿತರಾಗಿ ಬೀದಿ ಪಾಲಾಗಲಿದ್ದಾರೆ.

ಅದೇ ರೀತಿ, ಒಂದು ವೇಳೆ ರಾಜ್ಯ ಸರಕಾರ ತನ್ನ ಹಟವನ್ನು ಮುಂದುವರೆಸಿ, ಸುಗ್ರೀವಾಜ್ಞೆಗಳನ್ನು ಕಾಯ್ದೆಗಳನ್ನಾಗಿಸಲು ರಾಜ್ಯದಲ್ಲಿ ಕ್ರಮ ವಹಿಸಿದಲ್ಲಿ ಈ ಸ್ವಯಂ ಪ್ರೇರಿತ ಬಂದ್ ಮಾತ್ರವಲ್ಲಾ, ಮತ್ತಷ್ಟು ವಿಶಾಲವಾದ ಉಧೃತವಾದ ಚಳುವಳಿಯನ್ನು ಸಂಘಟಿಸುವುದಾಗಿ ಸಭೆಯು ರಾಜ್ಯ ಸರಕಾರಕ್ಕೆ ಎಚ್ಚರಿಕೆಯನ್ನು ನೀಡಿದೆ.

ಆದ್ದರಿಂದ ಈ ಸ್ವಯಂ ಪ್ರೇರಿತ ಕರ್ನಾಟಕ ಬಂದ್ ನಲ್ಲಿ ಬಾಧಿತ ಎಲ್ಲ ಜನ ಸಮುದಾಯಗಳು ಭಾಗಿಯಾಗಿ ದೇಶದ ಆಹಾರದ ಭದ್ರತೆ ಮತ್ತು ಕೃಷಿ ಹಾಗೂ ಉಪಕಸುಬುಗಳ, ಕೈಗಾರಿಕೆಗಳ ಹಾಗೂ ದೇಶದ ಸ್ವಾತಂತ್ರ್ಯ ಮತ್ತು ಸ್ವಾವಲಂಬನೆಯನ್ನ ಸಂರಕ್ಷಣೆ ಮಾಡಲು ಸಭೆಯು ಮನವಿ ಮಾಡಿದೆ.

ಈ ಸುದ್ದಿಗೋಷ್ಠಿಯಲ್ಲಿ AIKSCC ಕೇಂದ್ರ ಸಮಿತಿ ಸದಸ್ಯರಾದ ಶ್ರೀಮತಿ ಕವಿತಾ ಕುರುಗಂಟಿ, AIKSCC ಕೇಂದ್ರ ಸಮಿತಿ ಸದಸ್ಯರಾದ ಶ್ರೀ ಕೋಡಿಹಳ್ಳಿ ಚಂದ್ರಶೇಖರ್, KRRS ರಾಜ್ಯಾಧ್ಯಕ್ಷರಾದ ಶ್ರೀ ಬಡಗಲಪುರ ನಾಗೇಂದ್ರ, KPRS ರಾಜ್ಯ ಪ್ರಧಾನ ಕಾರ್ಯದರ್ಶಿ ಶ್ರೀ ಯು. ಬಸವರಾಜ, KPRS ರಾಜ್ಯ ಉಪಾಧ್ಯಕ್ಷರಾದ ಶ್ರೀ ಮಾರುತಿ ಮಾನಪಡೆ, AIKS ರಾಜ್ಯ ನಾಯಕರಾದ ಶ್ರೀ ಪಿ.ವಿ. ಲೋಕೇಶ್, RKS ರಾಜ್ಯ ಪ್ರಧಾನ ಕಾರ್ಯದರ್ಶಿ ಶ್ರೀ ಹೆಚ್.ವಿ. ದಿವಾಕರ್, AIAWU ರಾಜ್ಯ ಪ್ರಧಾನ ಕಾರ್ಯದರ್ಶಿ ಶ್ರೀ ಚಂದ್ರಪ್ಪ ಹೊಸ್ಕೇರಾ ಮತ್ತು ಕರ್ನಾಟಕ ಜನಶಕ್ತಿ ರಾಜ್ಯ ನಾಯಕರಾದ ಶ್ರೀ ಕುಮಾರ್ ಸಮತಲ ಇವರು ಮಾತನಾಡಿದರು.

ಮತ್ತೊಮ್ಮೆ ರಸ್ತೆ ತಡೆ ಮೂಲಕ ಪ್ರತಿಭಟನೆ ನಡೆಸಿದವು. ಪ್ರತಿಭಟನೆಯನ್ನುದ್ದೇಶಿಸಿ ಸಿಐಟಿಯು ಮುಖಂಡ ಶಿವಕುಮಾರ್ ಎಸ್. ಎಂ. ಮಾತನಾಡಿದರು. ಸಿಪಿಐ(ಎಂ) ಮುಖಂಡರಾದ ವಸಂತ ನಡ, ಶೇಖರ ಲಾಯಿಲ ಹಾಗೂ ಕರ್ನಾಟಕ ಪ್ರಾಂತ ರೈತ ಸಂಘದ ಸದಸ್ಯರು ರಸ್ತೆ ತಡೆಯಲ್ಲಿ ಪಾಲ್ಗೊಂಡರು.

ಮೂಡಬಿದ್ರಿಯಲ್ಲಿ ಸೆಪ್ಟಂಬರ್ 25ರ ಪ್ರತಿಭಟನಾ ಧರಣಿ ಕಾರ್ಯಕ್ರಮದಲ್ಲಿ ಪ್ರಾಂತ ರೈತ ಸಂಘದ ಎರಡು ಬಣಗಳು, ಸಿಐಟಿಯು, ದಲಿತ ಹಕ್ಕುಗಳ ಸಮಿತಿ ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಭಾಗವಹಿಸಿದ್ದರು. ಪ್ರತಿಭಟನೆಯನ್ನುದ್ದೇಶಿಸಿ ಪ್ರಾಂತ ರೈತ ಸಂಘದ ದ.ಕ.ಜಿಲ್ಲಾ ಕಾರ್ಯದರ್ಶಿ ಯಾದವ ಶೆಟ್ಟಿ, ಮಾಜಿ ಕಾಂಗ್ರೆಸ್ ಸಚಿವ ಬಿ.ರಮಾನಾಥ ರೈ ಮಾತನಾಡಿದರು. ಮಾಜಿ ಕಾಂಗ್ರೆಸ್ ಶಾಸಕ ಅಭಯಚಂದ್ರ ಜೈನ್ ಕೂಡಾ ಬಾಗವಹಿಸಿದ್ದರು. ಇನ್ನೂರಕ್ಕೂ ಮಿಕ್ಕಿ ಪ್ರತಿಭಟನಾಕಾರರು ಉಪಸ್ಥಿತರಿದ್ದರು.



ಬೈಂದೂರು: ಸಿಪಿಎಂ ಪ್ರತಿಭಟಿಸಿ ಸಂಸದರಿಗೆ ಮನವಿ

ಬೈಂದೂರು: ಜನರು ಕೋವಿಡ್ ಸಂಕಷ್ಟದಲ್ಲಿರುವಾಗ 11 ಸುಗ್ರೀವಾಜ್ಞೆಗಳನ್ನು ಹೊರಡಿಸಿರುವುದು ಜನತೆಯ ಮೇಲೆ ನಡೆಸಿದ ದಾಳಿಯಾಗಿದೆ ಅಲ್ಲದೇ ರಾಜ್ಯದ ಜನರಿಂದ ಸಂಗ್ರಹಿಸಿದ ಜಿ.ಎಸ್.ಟಿ. ಪಾಲು ನೀಡದೇ ಜನರ ಮೇಲೆ ಸಾಲದ ಹೊರೆ ಹೊರಿಸುತ್ತಿರುವುದು ಖಂಡನೀಯ, ಸಂಸತ್ ಅಧಿವೇಶನ ನಡೆಯುತ್ತಿರುವಾಗ, ಬೈಂದೂರು ಸಂಸದರು ರೈತರ, ಕಾರ್ಮಿಕರ, ಕೃಷಿಕರ ಬಗ್ಗೆ ಚರ್ಚೆಯಾಗುವಂತೆ ಧ್ವನಿ ಎತ್ತಬೇಕು ಮತ್ತು ಕೇಂದ್ರ ಸರಕಾರಕ್ಕೆ ಪತ್ರ ಬರೆಯಬೇಕು ಎಂದು ಸಿಪಿಎಂ ಬೈಂದೂರು ವಲಯ ಕಾರ್ಯದರ್ಶಿ ಸುರೇಶ್ ಕಲ್ಲಾಗರ ಹೇಳಿದರು.

ಸಿಪಿಎಂ ರಾಜ್ಯ ಮುಖಂಡರಾದ ಕೆ. ಶಂಕರ್ ಮಾತನಾಡಿ ಪ್ರಜಾಸತ್ತಾತ್ಮಕವಾಗಿ ಶಾಂತಿಯುತವಾಗಿ ನಡೆಯುವ ರಾಜಕೀಯ ಚಳವಳಿಯನ್ನು ಕ್ರಿಮಿನಲ್ ಅಪರಾಧಗಳೆಂದು ಬಿಂಬಿಸಿ ಸಿಪಿಎಂ ರಾಷ್ಟ್ರೀಯ ಕಾರ್ಯದರ್ಶಿ ಸೀತರಾಮ್ ಯೆಚೂರಿ ಮೇಲೆ ಹೂಡಿರುವ ಮೊಕದ್ದಮ್ಮೆ ಹಿಂಪಡೆಯಬೇಕು. ಹೋರಾಟಗಾರರನ್ನು ಜೈಲಿನಿಂದ ಬಿಡುಗಡೆಗೊಳಿಸಬೇಕು. ಆದಾಯ ತೆರಿಗೆಯಿಂದ ಹೊರಗಿರುವ ಎಲ್ಲರಿಗೂ ರೂ. 7500/– ನಗದು, ಪೌಷ್ಠಿಕಾಂಶ ಆಹಾರ ಒದಗಿಸಿ ಕರೋನ ತಡೆಗಟ್ಟಲು ಕ್ರಮವಹಿಸಬೇಕು ಎಂದರು.

ಸಿಪಿಎಂ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ವೆಂಕಟೇಶ್ ಕೋಣಿ, ವಲಯ ಸಮಿತಿ ಸದಸ್ಯ ಸಂತೋಷ ಹೆಮ್ಮಾಡಿ ಮಾತನಾಡಿದರು. ನಾಗರತ್ನ ನಾಡ ರೊನಾಲ್ಡ್ ರಾಜೇಶ್ ಕ್ವಾಡ್ರಸ್, ಮಾಧವ ದೇವಾಡಿಗ, ಚಂದ್ರ ದೇವಾಡಿಗ, ರಾಜೀವ ದೇವಾಡಿಗ ಇದ್ದರು. 12 ಬೇಡಿಕೆಗಳ ಪಟ್ಟಿಯನ್ನು ಸಂಸದರ ಕಛೇರಿಗೆ ಎದುರು ಪ್ರತಿಭಟಿಸಿ ಮನವಿ ಸಲ್ಲಿಸಿದ್ದರು.

ವರದಿ: ವೆಂಕಟೇಶ್ ಕೋಣಿ

ಮಾನವ ಹಕ್ಕುಗಳ ಮೇಲೆ ದಾಳಿ, ಬಂಡವಾಳವಾದದ ಹತಾಶ ಕ್ರಮ

ಸಂವಿಧಾನ ದತ್ತ ಮತ್ತು ಸ್ವಾತಂತ್ರ್ಯ ಚಳುವಳಿಯ ಮತ್ತು ಆನಂತರದ ಹೋರಾಟಗಳ ಮೂಲಕ ಪಡೆದುಕೊಂಡ, ಪೂರ್ಣವಾಗಿ ಅಲ್ಲದಿದ್ದರೂ ಆಂಶಿಕವಾಗಿಯಾದರೂ ಸಾಧಿತವಾದ (ಜೀವನೋಪಾಯದ ಹಕ್ಕು ಸೇರಿದಂತೆ) ಎಲ್ಲ ಮಾನವ ಹಕ್ಕು/ಸ್ವಾತಂತ್ರ್ಯಗಳ ಮೇಲೆ ಕೊರೊನಾ ಕಾಲದಲ್ಲಿ ದಾಳಿ ನಡೆಯುತ್ತಿದೆ ಎನ್ನಲಾಗಿದೆ. ಇತ್ತೀಚಿನ ವರ್ಷಗಳಲ್ಲಿ ಅದು ಸತತವಾಗಿ ಹೆಚ್ಚುತ್ತಾ ಬಂದಿದ್ದರೂ ಕೊರೊನಾ ಕಾಲದಲ್ಲಿ ಅದರ ತೀಕ್ಷ್ಣತೆ ತಾರಕಕ್ಕೇರಿದೆ ಎನ್ನಲಾಗಿದೆ. ಆದ್ದರಿಂದ "ಮಾನವ ಹಕ್ಕು/ಸ್ವಾತಂತ್ರ್ಯ : ಕೊರೊನಾ ಕಾಲದಲ್ಲಿ ಮತ್ತು ನಂತರ" ಎಂಬ ವಿಷಯದ ಕುರಿತು ಕೆಳಗೆ ಕಾಣಿಸಿದ 5 ಪ್ರಶ್ನೆಗಳನ್ನು ಜನಶಕ್ತಿ ಕೇಳಿತ್ತು.

*** ಯಾವ ನಿರ್ದಿಷ್ಟ ಸ್ವಾತಂತ್ರ್ಯ/ಹಕ್ಕುಗಳ ಮೇಲೆ ದಾಳಿ ನಡೆದಿದೆ? ದಾಳಿಯ ಸ್ವರೂಪವೇನು?**

*** ಇದಕ್ಕೆ ಕೊರೊನಾ ಕಾರಣವೇ? ಅಥವಾ ಬರಿಯ ನೆಪವೇ? ನೆಪವಾದರೆ ನಿಜವಾದ ಕಾರಣಗಳೇನು?**

*** ದಾಳಿ ತಾತ್ಕಾಲಿಕ ವಾದದ್ದೇ? ಅಥವಾ ಶಾಶ್ವತ ಸ್ವರೂಪದ್ದೇ? ಶಾಶ್ವತ ಸ್ವರೂಪದ್ದಾದರೆ ಅದರ ಉದ್ದೇಶಗಳೇನು?**

*** ದಾಳಿಗೆ ಒಳಗಾದ ನಿರ್ದಿಷ್ಟ ಸ್ವಾತಂತ್ರ್ಯ/ಹಕ್ಕುಗಳ ಮೇಲಿನ ದಾಳಿಯನ್ನು ಎದುರಿಸಿ, ಹಿಮ್ಮೆಟ್ಟಿಸುವುದು ಹೇಗೆ?**

*** ಈ ದಾಳಿಯನ್ನು ಎದುರಿಸುವಲ್ಲಿ ಹಿಮ್ಮೆಟ್ಟಿಸುವಲ್ಲಿ ತೊಡಕುಗಳು ಯಾವುವು? ಅವುಗಳನ್ನು ನಿವಾರಿಸುವುದು ಹೇಗೆ?**

ಎಲ್ಲ ಪ್ರಶ್ನೆಗಳಿಗೆ ಅವರು ಒಟ್ಟಾಗಿ ಕೊಟ್ಟ ಉತ್ತರ ಇಲ್ಲಿದೆ.



ಪ್ರೊ. ವಿ.ಎನ್. ಲಕ್ಷ್ಮೀನಾರಾಯಣ

ಮಾರ್ಕ್ಸ್ ಮತ್ತು ಎಂಗೆಲ್ಸ್ 1845 ರಲ್ಲಿ ಬರೆದ 'ಜರ್ಮನ್ ತತ್ವಶಾಸ್ತ್ರದ ವಿಮರ್ಶೆ'ಯಲ್ಲಿ, ಮನುಷ್ಯರ ಬದುಕು, ಶ್ರಮ, ಉತ್ಪಾದನೆ, ಆಸ್ತಿ, ಪ್ರಭುತ್ವ, ಬಂಡವಾಳ, ಶೋಷಣೆ, ಮತ್ತು ಅದರಿಂದ ಜನಸಮುದಾಯದ ಬಿಡುಗಡೆಯ ಪರಿಕಲ್ಪನೆಗಳನ್ನು ತಳಮಟ್ಟದಿಂದ ಸ್ಪಷ್ಟಪಡಿಸಲು ತುಂಬಾ ಶ್ರಮವಹಿಸಿದ್ದಾರೆ. ಅವರಿಬ್ಬರ ಆನಂತರದ ಚಿಂತನೆ-ಪ್ರತಿಪಾದನೆ ಮತ್ತು ಬರವಣಿಗೆಗಳ ರೂಪರೇಶೆಗಳನ್ನು ಈ ಪುಸ್ತಕದಲ್ಲಿ ಹಾಕಿಕೊಟ್ಟಿದ್ದಾರೆ. ಅವುಗಳ ಸ್ಥೂಲ ಪರಿಚಯವಾದರೂ ಇದ್ದರೆ ಮೇಲಿನ 5 ಪ್ರಶ್ನೆಗಳನ್ನು ಸದ್ಯದ ರಾಜಕೀಯ ಮತ್ತು ಆರ್ಥಿಕ ಸಂದರ್ಭದಲ್ಲಿ ವಸ್ತುನಿಷ್ಠವಾಗಿ ಅರ್ಥಮಾಡಿಕೊಂಡು ಉತ್ತರಿಸುವುದು ಮತ್ತು ಆ ಉತ್ತರಗಳನ್ನು ಅರ್ಥಮಾಡಿಕೊಳ್ಳುವುದು ಸಾಧ್ಯವೆಂದು ನನ್ನ ನಂಬಿಕೆ. ಆದ್ದರಿಂದ ಈ ಪೀಠಿಕೆ.

ಚರಿತ್ರೆಯನ್ನು ಮನುಷ್ಯರು ನಿರ್ಮಿಸುತ್ತಾರೆ. ಆದರೆ ಅದಕ್ಕೆ ಮೊದಲು ಅವರು ಅಸ್ತಿತ್ವದಲ್ಲಿರಬೇಕು. ಅಂದರೆ ಬದುಕಿರಬೇಕು. ಹಾಗೆಂದರೆ, ಪಶು-ಪಕ್ಷಿ-ಪ್ರಾಣಿಗಳಂತೆ ನಿಸರ್ಗದಲ್ಲಿ ಸಿಗುವುದನ್ನು ಆಧರಿಸಿ ಜೀವಿಸುವುದಲ್ಲ. ನಿಸರ್ಗದ ವಸ್ತುಗಳನ್ನು ಮಾರ್ಪಡಿಸಿ, ಆಹಾರ, ಬಟ್ಟೆ, ವಸತಿ ಮುಂತಾದ ಕನಿಷ್ಠ ಜೀವನಾಧಾರವನ್ನು ಉತ್ಪಾದಿಸಬೇಕು. ಅದೇ ಬದುಕು.

ಹೀಗೆ ಬದುಕು ಮತ್ತು ಬದುಕಿನ ಜೀವನಾಧಾರದ ಉತ್ಪಾದನೆ ಎರಡೂ ಬೇರೆ ಬೇರೆಯಲ್ಲ. ಇವುಗಳೊಂದಿಗೆ ಬದುಕಿನ ಪುನರುತ್ಪಾದನೆ, ಅಂದರೆ ಸಂತಾನೋತ್ಪತ್ತಿ ಮತ್ತು ಜೀವನಾಧಾರದ ಪುನರುತ್ಪಾದನೆಗಳು ಅವಿಭಾಜ್ಯವಾಗಿ ಸೇರಿಕೊಂಡಿವೆ. ಜೀವನಾಧಾರದ ಉತ್ಪಾದನೆ, ಉತ್ಪಾದನಾ ಶಕ್ತಿಗಳಾದ ಸಂಚಿತ ಶ್ರಮ (ಅಂದರೆ ಬಂಡವಾಳ) ಮತ್ತು ಜೀವಂತ ಶ್ರಮ; ಉತ್ಪಾದನಾ ಸಾಧನಗಳಾದ ಸಲಕರಣೆಗಳು, ಯಂತ್ರೋಪಕರಣಗಳು; ಅವುಗಳ ಆವಿಷ್ಕಾರ ಮತ್ತು ಬಳಕೆಗೆ ಸಂಬಂಧಿಸಿದ, ಕುಶಲತೆ, ನೈಪುಣ್ಯ, ಜ್ಞಾನ, ವಿಜ್ಞಾನ, ತಂತ್ರಜ್ಞಾನ – ಇವೆಲ್ಲವೂ ಕೂಡಿ ಉತ್ಪಾದನಾ ವಿಧಾನವನ್ನು ರೂಪಿಸುತ್ತವೆ. ಇವುಗಳಿಂದಾಗಿ ಏರ್ಪಡುವ ಮನುಷ್ಯ ಮನುಷ್ಯರ ನಡುವಿನ ಶ್ರಮ ಸಂಬಂಧ; ಜೀವನಾಧಾರ ವಸ್ತುಗಳ ಹಂಚಿಕೆ, ಸಾಗಾಣಿಕೆ, ವಿನಿಮಯಗಳನ್ನು ಒಳಗೊಂಡ ಸಮುದಾಯದ ಸಾಮಾಜಿಕ ಸಂಘಟನೆಯ ವಿವರಣೆಯೇ ಚರಿತ್ರೆ.

ಬದುಕು ಸಾಗುತ್ತಲೇ ಇರಬೇಕಾದರೆ ವಸ್ತುಗಳ ಉತ್ಪಾದನೆ ಮತ್ತು ಪುನರುತ್ಪಾದನೆಗಳು ನಿರಂತರವಾಗಿ ಆಗುತ್ತಲೇ ಇರಬೇಕು. ಉತ್ಪಾದನೆಗೆ ಮೂಲ ಅಗತ್ಯವಾದ ಶ್ರಮದ ಪುನರುತ್ಪಾದನೆ ಅಂದರೆ ಸಮುದಾಯದ ಸದಸ್ಯರ ಪುನರುತ್ಪಾದನೆಯೂ ನಿರಂತರವಾಗಿ ಆಗುತ್ತಲೇ ಇರಬೇಕು. ಇವೆರಡು ನಿಂತರೆ ಮನುಷ್ಯ ಪ್ರಪಂಚವೇ ಮಾಯವಾಗುತ್ತದೆ. ಸಮುದಾಯದ ಸದಸ್ಯರಲ್ಲಿ ಎಲ್ಲರೂ ಬದುಕುತ್ತಿದ್ದರೆ, ಅಂದರೆ ಉತ್ಪಾದನೆ ಮತ್ತು ಪುನರುತ್ಪಾದನೆಗಳಲ್ಲಿ ತೊಡಗಿಕೊಂಡಿರುವವರೆಗೆ ಸಾಮಾಜಿಕವಾದ ಸಮಷ್ಟಿ ಜೀವನದೊಳಗೇ ಅವರವರಿಗೆ ಪ್ರಿಯವಾದ ಕೆಲಸ ಮಾಡಿಕೊಂಡು ಸೃಜನಾತ್ಮಕ ವ್ಯಕ್ತಿಗಳಾಗಿ ಬದುಕುವ ಜೀವನಶೈಲಿ ಸಾಧ್ಯವಾಗಿರುತ್ತದೆ. ಸ್ವಾತಂತ್ರ್ಯ ಎಂದರೆ ಇದೇ.



ಸಮುದಾಯವು ಒಡೆಯ-ಗುಲಾಮ, ಭೂಮಾಲೀಕ-ಜೀತಗಾರ, ರಾಜ-ಪ್ರಜೆ, ಬಂಡವಳಿಗ-ಶ್ರಮಿಕ ಎಂದು ಒಡೆಯುವುದೆಂದರೆ, ಕೆಲವೇ ಬಲಿಷ್ಠರು ಶ್ರಮಮಾಡದೆಯೇ, ಅವರ ಪಾಲಿನ ಶ್ರಮವನ್ನೂ ಅವರಿಗೆ ಅಧೀನರಾದ ದುರ್ಬಲರು ಬಲಾತ್ಕಾರವಾಗಿ ಮಾಡುವಂತೆ ಬದುಕಿನ ಉತ್ಪಾದನೆ ಮತ್ತು ಪುನರುತ್ಪಾದನೆಗಳನ್ನು ಸಂಘಟಿಸುವುದು. ಹೀಗೆ ಬದುಕಿನ ಉತ್ಪಾದನೆ ಮತ್ತು ಪುನರುತ್ಪಾದನೆಗಳು ಸಂಘಟಿತವಾದಾಗ, ಬಲಿಷ್ಠರಿಗೆ ವಿಕೃತವಾದ ಸ್ವಾತಂತ್ರ್ಯ ಮತ್ತು ಮಾನವೀಯತೆಯನ್ನು ಒಳಗೊಳ್ಳದ ವಾಣಿಜ್ಯ ಉದ್ದೇಶದ ಸೃಜನಾತ್ಮಕತೆಗಳು ಮಾತ್ರ ಸಾಧ್ಯವಾಗುತ್ತವೆ. ದುರ್ಬಲರ ಪಾಲಿಗೆ ಸ್ವಾತಂತ್ರ್ಯ-ಸೃಜನಾತ್ಮಕತೆಗಳು ಇದ್ದೂ ಇಲ್ಲದಂತಾಗಿ, ಕುಂಠಿತವಾಗಿ, ಅವುಗಳ ಕೊರತೆ ಮತ್ತು ಹಂಬಲಗಳನ್ನು ಏಕಕಾಲಕ್ಕೆ ಅಭಿವ್ಯಕ್ತಿಸುವ ದೇವರು, ಧರ್ಮ, ಅಧ್ಯಾತ್ಮ, ಅನುಭಾವ ಮುಂತಾದ ಭ್ರಾಮಕ ಅಲೌಕಿಕತೆಯನ್ನು ಸೃಷ್ಟಿಸಿಕೊಳ್ಳಬೇಕಾಗುತ್ತದೆ. ಹೀಗೆ, ಶ್ರಮಶೋಷಣೆಯನ್ನು ಆಧರಿಸಿ ಸಂಘಟಿತವಾದ ಸಮಾಜದಲ್ಲಿ ಬಲಿಷ್ಠರು ದುರ್ಬಲರ ಬಗ್ಗೆ ಅಮಾನುಷರಾಗಿ, ಮನುಷ್ಯತ್ವವನ್ನು ಕಳೆದುಕೊಂಡ ಶೋಷಕರಾದರೆ, ದುರ್ಬಲರು ಸ್ವಾತಂತ್ರ್ಯವನ್ನು ಕಳೆದುಕೊಂಡು. ಸೃಜನಾತ್ಮಕ ಮನುಷ್ಯರಾಗಿ ಬದುಕಲಾರದ ಶ್ರಮಿಕರ ಸ್ಥಿತಿಗೆ ಇಳಿಯುತ್ತಾರೆ.

ಜನರೆಲ್ಲರೂ ಮನುಷ್ಯರಾಗಿ ಬದುಕುವ ಸ್ವಾತಂತ್ರ್ಯವನ್ನು, ಸೃಜನಶೀಲತೆಯನ್ನು ಹತ್ತಿಕ್ಕುವ ಶ್ರಮಶೋಷಣೆಯನ್ನು ಹೊಟ್ಟೆಯಲ್ಲಿಟ್ಟುಕೊಂಡು, ಎಲ್ಲರಿಗೂ ಸ್ವಾತಂತ್ರ್ಯವು ಇದೆಯೆಂದು ಆದ್ದರಿಂದ ಎಲ್ಲರೂ ಸಮಾನರೆಂದು ಬಾಯಲ್ಲಿ ಹೇಳುವ ವಸ್ತುಸ್ಥಿತಿ, ಪ್ರಜಾಪ್ರಭುತ್ವ ಎಂಬ ಹುಸಿ ಸಾಮಾಜಿಕ ಸಂಘಟನೆಯಲ್ಲಿದೆ. ಅಮೂರ್ತವಾಗಿ ಜನಸಾಮಾನ್ಯರನ್ನು 'ಮನುಷ್ಯರು' ಎಂದು ಗುರುತಿಸುವ ಈ ಹುಸಿ ಪ್ರಜಾಪ್ರಭುತ್ವದಲ್ಲಿ, ಅವರನ್ನು ನಿರ್ದಿಷ್ಟವಾಗಿ ವರ್ಗಸಮಾಜದಲ್ಲಿ ವಂಚನೆಗೊಳಗಾದ ಸಂತ್ರಸ್ತರೆಂಬುದನ್ನು ಮರೆಮಾಚಲು ದುರ್ಬಲರ ಸಬಲೀಕರಣ, ಮಾನವಹಕ್ಕುಗಳು, ಮಾನವೀಯ ಮುಖದ ಆರ್ಥಿಕತೆ ಮುಂತಾದ ಪರಿಕಲ್ಪನೆಗಳು ಇವೆ.

ಆದ್ದರಿಂದ, ಸ್ವಾತಂತ್ರ್ಯ ಮತ್ತು ಹಕ್ಕಿನ ಪ್ರಶ್ನೆಗಳನ್ನು ಅಮೂರ್ತ ಮನುಷ್ಯರಿಗೆ ಸಂಬಂಧಿಸಿದಂತೆ ತಾತ್ವಿಕವಾಗಿ ಕೇಳದೆ, ವಸ್ತುಸ್ಥಿತಿಯ ವರ್ಗಸಮಾಜದ ವಾಸ್ತವ ಮನುಷ್ಯರಿಗೆ ಸಂಬಂಧಿಸಿದಂತೆ ರಾಜಕೀಯವಾಗಿ ಕೇಳಬೇಕಾಗುತ್ತದೆ. ಉದಾಹರಣೆಗೆ, ಗುಲಾಮರು ಸ್ವಾತಂತ್ರ್ಯ ಮತ್ತು ಹಕ್ಕುಗಳಿಗಾಗಿ ಹೋರಾಡುವುದೆಂದರೆ ಅವರು ಗುಲಾಮರಾಗಿರಲು ನಿರಾಕರಿಸುವುದೇ ಆಗಿದೆ. ಜೀತಗಾರರ ಸ್ವಾತಂತ್ರ್ಯವೆಂದರೆ ಜೀತಗಾರಾಗಿಲ್ಲದೆ ಇರುವ ಸ್ವಾತಂತ್ರ್ಯ. ಅದೇ ರೀತಿ ಪ್ರಸ್ತುತ ಸಮಾಜದಲ್ಲಿ ಜನರು ತಮ್ಮ ಸ್ವಾತಂತ್ರ್ಯಕ್ಕಾಗಿ ಮತ್ತು ಹಕ್ಕುಗಳಿಗಾಗಿ ಹೋರಾಡುವುದೆಂದರೆ, ಮನುಷ್ಯರಾಗಿ ಮತ್ತು ಸೃಜನಶೀಲರಾಗಿ ಬದುಕುವ ಹಕ್ಕುಗಳಿಗಾಗಿ ಹೋರಾಡುವುದು ಅಂದರೆ, ತಾವು ಶ್ರಮಶೋಷಿತರಾಗಿರಲು ನಿರಾಕರಿಸುವುದೇ ಆಗಿದೆ.

ಮೇಲೆ ಕೇಳಿರುವ ಎಲ್ಲಾ ಪ್ರಶ್ನೆಗಳೂ ಪ್ರಸ್ತುತ ಭಾರತದಲ್ಲಿ ಜನರಿಗೆ ಅಂದರೆ, ದೈಹಿಕ ಮತ್ತು ಬೌದ್ಧಿಕ ಶ್ರಮಗಳಲ್ಲಿ ತೊಡಗಿಕೊಂಡಿರುವ ಶೋಷಿತರಿಗೆ, ಸ್ವಾತಂತ್ರ್ಯ ಮತ್ತು ಹಕ್ಕುಗಳು ಅಮೂರ್ತವಾಗಿ, ಸೀಮಿತ ಅರ್ಥದಲ್ಲಿ, ಅರೆ-ಬರೆಯಾಗಿಯಾದರೂ ಇದ್ದು, ಈಗ ಅವಕ್ಕೂ ತೀವ್ರ ಧಕ್ಕೆಯಾಗಿದೆ ಎಂಬ ಗೃಹೀತದಲ್ಲಿ ಕೇಳಿದ ಪ್ರಶ್ನೆಗಳಾಗಿವೆ. ಹೀಗಾಗಿ ಆ ಗೃಹೀತದ ಚೌಕಟ್ಟಿನೊಳಗೇ ಈ ಮೂರೂ ಪ್ರಶ್ನೆಗಳಿಗೆ ಕೊಡಬಹುದಾದ ಉತ್ತರಗಳೂ ಬಹುಮಟ್ಟಿಗೆ ಅಮೂರ್ತವಾಗೇ ಇರುವುದು ಅನಿವಾರ್ಯ.

ಜನರ ಅಂದರೆ ಶೋಷಿತರ ಬದುಕುವ ಸ್ವಾತಂತ್ರ್ಯ/ಹಕ್ಕುಗಳು ಅಸ್ತಿತ್ವಕ್ಕೆ ನೇರವಾಗಿ ಸಂಬಂಧಿಸಿರುವ ಪ್ರಾಥಮಿಕ ಹಕ್ಕುಗಳು. ಅವುಗಳ ನಿರಾಕರಣೆ ಮತ್ತು ದಮನಗಳು, ವಿಶ್ವದಲ್ಲಿ ಮತ್ತು ನಿರ್ದಿಷ್ಟವಾಗಿ ಭಾರತದಲ್ಲಿ ಬಹು ಹಿಂದಿನಿಂದಲೂ ನಡೆಯುತ್ತಿವೆ. ಆದರೆ ಅವುಗಳ ವಿರುದ್ಧದ ಹೋರಾಟ ಮಾತ್ರ ಈ ಸಂದರ್ಭದಲ್ಲಿ ಹೆಚ್ಚು ಹೆಚ್ಚು ನಿರ್ದಿಷ್ಟವಾಗುತ್ತಿದೆ ಅಷ್ಟೆ.

ಕೊರೋನಾ ಜಾಡ್ಯವು ಜನರ ಅಂದರೆ, ಶೋಷಿತರ ಅಸ್ತಿತ್ವದ ಸಮಸ್ಯೆಗಳನ್ನು ತೀವ್ರಗೊಳಿಸಿದೆಯೇ ಹೊರತು ಅದೇ ಕಾರಣವಲ್ಲ. ಅದನ್ನು ಶೋಷಿತರಿಗಿಂತಾ ಶೋಷಕರೇ ಚೆನ್ನಾಗಿ ಬಲ್ಲರು. ಆದ್ದರಿಂದಲೇ ಜನರ ಎಲ್ಲ ಸಮಸ್ಯೆಗಳಿಗೂ ಕೊರೋನಾ ಜಾಡ್ಯವೇ ಕಾರಣವೆಂದು ಅವರು ಪ್ರಚಾರ ಮಾಡುತ್ತಿದ್ದಾರೆ. ನಿಜವಾಗಿ ನೋಡಿದರೆ ಕೋವಿಡ್ ಸಾಂಕ್ರಾಮಿಕವು ಜಾಗತಿಕ ಮಟ್ಟದಲ್ಲಿ ಶ್ರಮಶೋಷಣೆಯ ದಾರುಣತೆಯನ್ನು, ಶೋಷಕ ವ್ಯವಸ್ಥೆಯ ವೈರುಧ್ಯಗಳನ್ನು ಬಯಲಿಗೆಳೆದಿದೆ.

ಶ್ರಮಶೋಷಣೆಯ ರಾಜಕೀಯವನ್ನು ಮುನ್ನೆಲೆಯಲ್ಲಿಟ್ಟು ನೋಡಿದರೆ, ಜನರ ಸ್ವಾತಂತ್ರ್ಯ ಮತ್ತು ಹಕ್ಕುಗಳ ಮೇಲೆ ನಡೆದಿರುವ ದಾಳಿಯು ಬಂಡವಾಳವಾದವು ತನ್ನ ಅಸ್ತಿತ್ವಕ್ಕೇ ಒದಗಿರುವ ಸಂಕಷ್ಟಗಳಿಂದ ತನ್ನನ್ನೇ ಪಾರುಮಾಡಿಕೊಳ್ಳಲು ಕೈಗೊಳ್ಳುತ್ತಿರುವ ಹತಾಶ ಕ್ರಮಗಳು. ಅವು ಜನರಪಾಲಿಗೆ ಅಮಾನುಷವೂ, ನಿರ್ಭಾವದ ಕ್ರೌರ್ಯವೂ ಆಗಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ತೀವ್ರ ರೋಗಗ್ರಸ್ತ ವ್ಯಕ್ತಿಯ ದೇಹದಲ್ಲಿನ ಹೃದಯವು ವ್ಯಕ್ತಿಯ ಮೆದುಳು ಸಾಯುವ ಸ್ಥಿತಿಗೆ ತಲುಪುವ ಎಷ್ಟೋ ಮುಂಚೆ ಕೈ-ಕಾಲುಗಳಿಗೆ ರಕ್ತದ ಪೂರೈಕೆಯನ್ನು ಕಡಿಮೆಮಾಡುತ್ತಾ ಹೋಗಿ ಕೊನೆಗೆ ತಾನೂ ಸ್ಥಗಿತಗೊಳ್ಳುವಂತೆ, ಪ್ರಸ್ತುತ ಬಂಡವಾಳವಾದಿ ವ್ಯವಸ್ಥೆಯು ಅದರ ಹೃದಯವಾದ ಮಾರುಕಟ್ಟೆಗೆ ಸರಕುಗಳ ತಯಾರಿಕೆ-ಬಳಕೆಗಳ ಮೂಲಕ ಹಣದ ಪರಿಚಲನೆಯನ್ನು ನಿರಂತರವಾಗಿ ನಿರ್ವಹಿಸುವ ಜನಸಾಮಾನ್ಯರ ಅಂದರೆ, ಶ್ರಮಿಕರ ಬದುಕಿನ ವಿಷಯದಲ್ಲಿ ನಡೆದುಕೊಳ್ಳುತ್ತಿದೆ.




ನಿಸರ್ಗದ ವಿಕಾಸದಲ್ಲಿರುವ ಸಾಮಾನ್ಯ ನಿಯಮ ಒಳಗಿನಿಂದ ಹೊರಕ್ಕೆ ಹರಿಯುವುದು. ಇದಕ್ಕೆ ವಿರುದ್ಧವಾಗಿ, ಬಂಡವಾಳವಾದೀ ವ್ಯವಸ್ಥೆಯ ವಿಕಾಸವನ್ನು ಗಮನಿಸಿದರೆ, ಅದು ಪ್ರಾರಂಭದಿಂದಲೂ ಸಮುದಾಯದಿಂದ ಬಿಡಿ ವ್ಯಕ್ತಿಯ ಕಡೆಗೆ, ಸಮಷ್ಟಿಯಿಂದ ವ್ಯಷ್ಟಿಯ ಕಡೆಗೆ, ಭೌತ-ಮಾನುಷ-ನೈಸರ್ಗಿಕ ಶಕ್ತಿಗಳ ವಿಕೇಂದ್ರಿತ ಪ್ರಜ್ಞಾಪೂರ್ವಕ ಬದುಕಿನಿಂದ ಅಮಾನುಷ, ಕೇಂದ್ರೀಕರಣದ ಕಡೆಗೆ ನುಗ್ಗುತ್ತಿದೆ. ಪರಿಧಿಯನ್ನು ಅಳಿಸಿದಾಗ ಕೇಂದ್ರಬಿಂದುವೂ ಕಾಣದಾಗುವಂತೆ, ತೀವ್ರ ಅಸ್ವಸ್ಥತೆಯ ವ್ಯಕ್ತಿಯು ತನ್ನೊಳಕ್ಕೆ ಸರಿಯುತ್ತಾ ವ್ಯಕ್ತಿತ್ವವನ್ನೇ ನಾಶಮಾಡಿಕೊಳ್ಳುವಂತೆ ಬಂಡವಾಳವಾದದ ಇಂದಿನ ಬೆಳವಣಿಗೆಯು ಭಸ್ಮಾಸುರನಂತೆ ಸ್ವಯಂಘಾತಕವಾಗಿದೆ. ಆದ್ದರಿಂದಲೇ ಬಂಡವಾಳವಾದೀ ವ್ಯವಸ್ಥೆಯಲ್ಲಿ, ಜನರಿಗಾಗಿ ಸಂಘಟಿತಗೊಳ್ಳುವ ಸಂಸ್ಥೆಗಳು ಖಾಸಗೀಕರಣಗೊಳ್ಳುವುದು ಹಾಗಿರಲಿ, ಜನರಿಂದ ಚುನಾಯಿತವಾಗುವ ಸರ್ಕಾರಗಳೇ ಖಾಸಗೀಕರಣಗೊಂಡು ಬಂಡವಳಿಗರ ಸೌಲಭ್ಯಕಾರ ಪ್ರತಿನಿಧಿಯಾಗಿ ಬಿಟ್ಟಿದೆ.

ಒಂದು ಕಡೆ, ಜನಸಾಮಾನ್ಯರ ಶಕ್ತಿಗಳನ್ನು ಮಾತ್ರವಲ್ಲ, ದೌರ್ಬಲ್ಯಗಳನ್ನೂ ಲಾಭದಾಯಕವಾಗುವಂತೆ ನಗದೀಕರಿಸಿಕೊಳ್ಳುವ ತಂತ್ರಗಾರಿಕೆಗಳು ಬಂಡವಾಳವಾದಕ್ಕೆ ಕರಗತವಾಗಿವೆ. ಕೊರೋನ ಜಾಡ್ಯವು ದಿನಬೆಳಗಾದರೆ, ಬಂಡವಳಿಗರಿಗೆ ಲಾಭಮಾಡಿಕೊಳ್ಳುವ ಹೊಸ ಹೊಸ ದಾರಿಗಳನ್ನು ತೆರೆದಿಡುತ್ತಿದೆ. ಔಷಧ ಮತ್ತು ಆರೋಗ್ಯದ ಉದ್ಯಮ, ಡಿಜಟಲೀಕರಿಸಿದ ಸಂವಹನದ ಮೂಲಕ ಯಾವ ಸೇವೆಯನ್ನು ಬೇಕಾದರೂ ಕುಳಿತಲ್ಲಿಗೆ ತಲುಪಿಸುವ ಸೇವಾ ಉದ್ಯಮ, ಶಿಕ್ಷಣ ಉದ್ಯಮ, ಮಾಹಿತಿ ಉದ್ಯಮ, ಹೀಗೆ ಬದುಕಿನ ಎಲ್ಲ ಚಟುವಟಿಕೆಗಳನ್ನೂ ಕೇಂದ್ರೀಕರಿಸಿ ಉದ್ಯಮವಾಗಿಸಲು ಕೊರೋನಾ ಜಾಡ್ಯವನ್ನು ತಾನೇ ಒಂದು ರೋಗಾಣುವಾಗಿರುವ ಬಂಡವಾಳವು ಸದವಕಾಶವನ್ನಾಗಿ ಬಳಸಿಕೊಳ್ಳುತ್ತಿದೆ.

ಮತ್ತೊಂದು ಕಡೆ, ಬಂಡವಾಳವಾದೀ ಆಳುವ ವರ್ಗವನ್ನು ಕೆಳಗಿಳಿಸಿ, ಶ್ರಮಿಕರ ಪ್ರಭುತ್ವನ್ನು ಸ್ಥಾಪಿಸುವುದೇ ಎಡಪಕ್ಷಗಳ ಪ್ರಧಾನ ಗುರಿಯಾಗಿದೆ. ಆದರೆ, ಇದನ್ನು ಮನಗಾಣಿಸುವ, ರಾಜಕೀಯ ಶಿಕ್ಷಣದ ಪ್ರಾಮುಖ್ಯತೆ ಮತ್ತು ಹೋರಾಟಗಳ ಐಕ್ಯತೆಗಿರುವ ಶಕ್ತಿಯ ಬಗೆಗಿನ ಅಜ್ಞಾನವೇ ಎಲ್ಲಕ್ಕಿಂತಾ ದೊಡ್ಡದಾದ ತೊಡಕು. ಇದರಿಂದಾಗಿ ನೈತಿಕ, ಸಾಂಸ್ಕೃತಿಕ, ಸಾಂಕೇತಿಕ ಮತ್ತು ವಿಕೇಂದ್ರಿತ ಸಂಘರ್ಷಗಳೇ ರಾಜಕೀಯ ಹೋರಾಟ ಎಂದು ನಂಬಿಕೊಳ್ಳುವಂತಾಗಿದೆ. ಎಡಪಂಥೀಯ ಸಂಘಟನೆಗಳಲ್ಲಿ, ನಿಸ್ಪೃಹ ಮತ್ತು ತ್ಯಾಗಶೀಲ ಉತ್ಸಾಹೀ ಕಾರ್ಯಕರ್ತ-ಸಂಘಟಕರಿದ್ದೂ ಜನಸಮುದಾಯವನ್ನು ಹೋರಾಟಕ್ಕೆ ಅಣಿಗೊಳಿಸಲಾಗದೆ, ಸಾರ್ಥಕ ಗಳಿಗೆಯೊಂದರ ನಿರೀಕ್ಷೆಯಲ್ಲೇ ಜೀವ ಸವೆಸುವಂತಾಗಿದೆ.

ರೋಗಕಾರಕ ಸೂಕ್ಷ್ಮಾಣುಗಳು ಮ್ಯುಟೇಶನ್ ಮೂಲಕ ಹೊಸ ಹೊಸ ರೂಪವನ್ನು ಪಡೆಯುವಂತೆ, ಕಳೆದ ನೂರಾರು ವರ್ಷಗಳಲ್ಲಿ ಅತ್ಯಂತ ಸಂಕೀರ್ಣ ರೂಪಗಳನ್ನು ಪಡೆಯುತ್ತಾ ಮನುಕುಲವನ್ನು ಕಾಡುತ್ತಿರುವ ಬಂಡವಾಳವಾದವನ್ನು, ಕಲ್ಪನೆಯಿಂದ, ಅಮೂರ್ತ ಊಹಾ ಚಿಂತನೆಯಿಂದ ಎಂದಿಗೂ ಹಿಮ್ಮೆಟ್ಟಿಸಲಾಗುವುದಿಲ್ಲ. ವಸ್ತುಸ್ಥಿತಿಗಳ ಆಧಾರದ ಮೇಲೆ ಬದುಕನ್ನು ಅರ್ಥಮಾಡಿಕೊಳ್ಳುವ ಗತಿತಾರ್ಕಿಕ ಭೌತವಾದ ಅಂದರೆ ಮಾರ್ಕ್ಸ್‌ವಾದವನ್ನು, ಕಡೆಯ ಪಕ್ಷ ಅದರ ಪ್ರಧಾನ ಪರಿಕಲ್ಪನೆಗಳನ್ನು ಅರ್ಥಮಾಡಿಕೊಳ್ಳುವ, ಅರ್ಥಮಾಡಿಸುವ ಕ್ರಿಯೆಗಳನ್ನು (ಸಾಮೂಹಿಕ ಕರನಿರಾಕರಣೆಯೇ ಮೊದಲಾದ) ಮೂಲಭೂತ ಆರ್ಥಿಕ ಆಂದೋಲನಗಳೊಂದಿಗೆ ಮೇಳೈಸುವುದೇ ಏಕೈಕ ಪರಿಹಾರ ಕ್ರಮ. ■



ವ್ಯಂಗ್ಯಚಿತ್ರ ಕೃಪೆ: ಸುರೇಂದ್ರನ್, ದಿ ಹಿಂದು



ಪ್ರಜಾಪ್ರಭುತ್ವದ ಕತ್ತು ಹಿಸುಕಲಾಗುತ್ತಿದೆ

ಈ ಸಂಸತ್ ಅಧಿವೇಶನ ಕಾರ್ಪೋರೇಟ್‌ಗಳು ಮತ್ತು ದೊಡ್ಡ ಬಂಡವಳಿಗರ ಪ್ರಯೋಜನಕ್ಕಾಗಿ ರೈತರು ಮತ್ತು ಕಾರ್ಮಿಕರ ಮೇಲೆ ಒಂದು ನಗ್ನ ದಾಳಿಯನ್ನು ಕಂಡಿದೆ. ದೇಶದಲ್ಲಿ ಎಲ್ಲ ಪ್ರಜಾಸತ್ತಾತ್ಮಕ ಅವಕಾಶಗಳನ್ನು ಮುಚ್ಚಿ ಬಿಡಲಾಗುತ್ತಿದೆ. ಪ್ರಜಾಪ್ರಭುತ್ವ ಸಾಯುವುದು ಹೀಗೆಯೇ. ಆದರೆ ಪ್ರಜಾಪ್ರಭುತ್ವದ ಈ ಸಾವನ್ನು ಪ್ರತಿರೋಧಿಸಲು, ನಿಲ್ಲಿಸಲು ಸಾಧ್ಯವಿದೆ. ಇದಕ್ಕೆ ಜನತೆಯನ್ನು, ಮುಖ್ಯವಾಗಿ ದುಡಿಯುವ ಜನಗಳನ್ನು ಅವರು ಕಷ್ಟಪಟ್ಟು ಗಳಿಸಿಕೊಂಡಿರುವ ಹಕ್ಕುಗಳ ರಕ್ಷಣೆಗಾಗಿ ಅಣಿನೆರೆಸಬೇಕು. ಜನಗಳು ಈ ಕ್ರಮಗಳ ವಿರುದ್ಧ ಎದ್ದು ಚಲಿಸಲಾರಂಭಿಸಿದಾಗ, ತಮ್ಮ ಹಕ್ಕುಗಳ ರಕ್ಷಣೆಗೆ ಒಟ್ಟುಗೂಡ ತೊಡಗಿದಾಗ, ಅದು ಎಲ್ಲ ಪ್ರಜಾಪ್ರಭುತ್ವ ಶಕ್ತಿಗಳ ಒಂದು ಸಂಯೋಜಿತ ಮತ್ತು ಐಕ್ಯ ಆಂದೋಲನಕ್ಕೆ ದಾರಿ ತೆರೆಯುತ್ತದೆ.



ಪ್ರಕಾಶ ಕಾರಟ್

ಸಂಸತ್ತಿನ ಮೊಟಕುಗೊಂಡ ಮಳೆಗಾಲದ ಅಧಿವೇಶನ, ಪ್ರತಿಯೊಂದು ಅರ್ಥದಲ್ಲೂ, ಇದುವರೆಗೆ ನಡೆದ ಸಂಸತ್ತಿನ ಅತ್ಯಂತ ಕೆಟ್ಟ ಅಧಿವೇಶನ. ಬಹುಶಃ 1976ರಲ್ಲಿ ತುರ್ತು ಪರಿಸ್ಥಿತಿ ಅವಧಿಯಲ್ಲಿ ನಡೆದ ಅಧಿವೇಶನವನ್ನು ಬಿಟ್ಟು– 42ನೇ ಸಂವಿಧಾನ ತಿದ್ದುಪಡಿಯನ್ನು ಅಂಗೀಕರಿಸಿದ ಅಧಿವೇಶನ ಅದು. ಒಂದು ಸರ್ವಾಧಿಕಾರಶಾಹಿ ಆಡಳಿತಕ್ಕೆ ಅನುಕೂಲ ಕಲ್ಪಿಸಿಕೊಟ್ಟಿರುವ ತಿದ್ದುಪಡಿ ಅದು.

ಕೃಷಿಗೆ ಸಂಬಂಧಪಟ್ಟ ಎರಡು ಮಸೂದೆಗಳನ್ನು ಪರಿಶೀಲಿಸುವಾಗ ರಾಜ್ಯಸಭೆಯಲ್ಲಿ ನಡೆದಿರುವಂತದ್ದು ಸಂಸದೀಯ ಪ್ರಜಾಪ್ರಭುತ್ವದ ಅಪಹಾಸ್ಯ. ಕಡಿತಗೊಂಡ ಚರ್ಚೆಯ ನಂತರ ಉಪಸಭಾಪತಿಗಳು ಎಲ್ಲ ಸಂಸದೀಯ ವಿಧಾನಗಳನ್ನು ಮತ್ತು ನಿಯಮಗಳನ್ನು ಉಲ್ಲಂಘಿಸಿ ಈ ಎರಡು ಮಸೂದೆಗಳನ್ನು ಬಲವಂತದಿಂದ ಪಾಸು ಮಾಡಿಸಿದರು.

ಸುಗ್ರೀವಾಜ್ಞೆಗಳಿಗೆ ಮಂಜೂರಾತಿ ನೀಡಬಾರದು ಎಂಬ ಶಾಸನಾತ್ಮಕ ಠರಾವುಗಳನ್ನು ಮತಕ್ಕೆ ಹಾಕಬೇಕು ಎಂಬ ಆಗ್ರಹವನ್ನು ಉಪೇಕ್ಷಿಸಲಾಯಿತು. ಈ ಮಸೂದೆಗಳನ್ನು ಆಯ್ಕೆ ಸಮಿತಿಗೆ ವಹಿಸಿ ಕೊಡಬೇಕು ಎಂಬ ನಿರ್ಣಯಗಳನ್ನು ಮಂಡಿಸಲು ಮತ್ತು ಮತಕ್ಕೆ ಹಾಕಲು ಅವಕಾಶ ನೀಡಲಿಲ್ಲ. ಅಂತಿಮವಾಗಿ ಪ್ರತಿಪಕ್ಷಗಳ ಸದಸ್ಯರು ಮಂಡಿಸಿದ್ದ ವಿವಿಧ ತಿದ್ದುಪಡಿಗಳನ್ನು ಮತಕ್ಕೆ ಹಾಕಬೇಕು ಎಂಬ ಬೇಡಿಕೆಯನ್ನೂ ತಿರಸ್ಕರಿಸಲಾಯಿತು ಮತ್ತು ಮಸೂದೆಗಳನ್ನು ಧ್ವನಿಮತದಿಂದ ಅಂಗೀಕರಿಸಲಾಯಿತು. ಈ ಶಾಸನಗಳನ್ನು ಪಾಸು ಮಾಡಿಸಿಕೊಳ್ಳಲು ತನಗೆ ಬಹುಮತ ಇಲ್ಲ ಎಂಬುದು ಸರಕಾರದ ಅರಿವಿಗೆ ಬಂದುದರಿಂದಲೇ ಅದು ಇಂತಹ ಸ್ವೇಚ್ಛಾಚಾರಕ್ಕೆ ಇಳಿಯಿತು; ಒಬ್ಬರೇ ಒಬ್ಬ ಸದಸ್ಯರೂ ಮತಕ್ಕೆ ಹಾಕಬೇಕು ಎಂದು ಅಗ್ರಹಿಸಿದರೆ ಹಾಗೆ ಮಾಡಲೇಬೇಕು ಎಂಬ ಒಂದು ಮೂಲಭೂತ ನಿಯಮವನ್ನು ಉಲ್ಲಂಘಿಸಿತು.

ವಿಧಿ–ವಿಧಾನಗಳು ಮತ್ತು ನಿಯಮಗಳನ್ನು ಈ ರೀತಿ ಕಣ್ಣಿಗೆ ರಾಚುವಂತೆ ಉಲ್ಲಂಘಿಸಿರುವುದನ್ನು ಸಹಜವಾಗಿಯೇ ಪ್ರತಿಪಕ್ಷಗಳ ಸದಸ್ಯರು ಪ್ರತಿಭಟಿಸಿದ್ದಾರೆ. ಇದಕ್ಕೆ ಸರಕಾರದ ಪ್ರತಿಕ್ರಿಯೆಯೆಂದರೆ ಎಂಟು ಸದಸ್ಯರನ್ನು ಒಂದು ವಾರದ ಕಾಲ ಸದನದಿಂದ ಅಮಾನತುಗೊಳಿಸಿದ್ದು. ಅಮಾನತುಗೊಂಡ ಹೆಚ್ಚಿನ ಸದಸ್ಯರು ಮತಕ್ಕೆ ಹಾಕಬೇಕು ಎಂದು ಕೇಳುವ ತಮ್ಮ ಹಕ್ಕನ್ನು ಒತ್ತಾಯಿಸಿದ ಸಿಪಿಐ(ಎಂ)ನ ಎಳಮಾರಂ ಕರೀಮ್ ಮತ್ತು ಕೆ.ಕೆ.ರಾಗೇಶ್ ರಂತವರು.

ಇಂತಹ ಸಂಸತ್ ಸದಸ್ಯರ ಬಾಯಿ ಮುಚ್ಚಿಸುವ ಪ್ರಯತ್ನದಿಂದಾಗಿ ಸಂಸತ್ತಿನ ಆವರಣದೊಳಗೇ, ಮಹಾತ್ಮ ಗಾಂಧಿ ಪ್ರತಿಮೆಯ ಬಳಿ ಎಂಟು ಅಮಾನತುಗೊಂಡ ಸದಸ್ಯರು ಹಗಲು–ರಾತ್ರಿ ಧರಣಿ ನಡೆಸುವ ಅಭೂತಪೂರ್ವ ಘಟನೆ ಸಂಭವಿಸುವಂತಾಯಿತು. ಪ್ರತಿಪಕ್ಷಗಳು ಅಧಿವೇಶನದ ಉಳಿದ ಅವಧಿಯನ್ನು ಬಹಿಷ್ಕರಿಸಿದವು. ಅದು ಸಪ್ಟಂಬರ್ 23ರಂದು ಮುಗಿದಿದೆ.

ಸಂಸತ್ತನ್ನು ಕುರಿತಂತೆ ಸರ್ವಾಧಿಕಾರಶಾಹೀ ವರ್ತನೆ ಈ ಮೊದಲು ಈ ಅಧಿವೇಶನದಲ್ಲಿ ಪ್ರಶ್ನೋತ್ತರ ಕಾಲವನ್ನು ರದ್ದು ಮಾಡಿದಾಗಲೇ ಕಂಡುಬಂದಿತ್ತು. ಸಾಂಕ್ರಾಮಿಕದಿಂದಾಗಿ ಕುಳಿತುಕೊಳ್ಳುವಲ್ಲಿ ದೈಹಿಕ ಅಂತರ ಮತ್ತು ಮುಖಗವಸು ಧರಿಸುವುದರಿಂದ ಸಂಬಂಧಪಟ್ಟ ಮಂತ್ರಿಗಳಿಗೆ ಪ್ರಶ್ನೆ ಹಾಕಲು ಸದಸ್ಯರಿಗೆ ಏನು ತೊಂದರೆಯಾಗುತ್ತದೆ ಎಂದು ವಿವರಿಸುವುದು ಸರಕಾರಕ್ಕೆ ಆಗಲಿಲ್ಲ. ಪ್ರಶ್ನೆ ಹಾಕಿ ಸರಕಾರವನ್ನು ಜವಾಬುದಾರನಾಗಿಸುವ ಸದಸ್ಯರ ಪ್ರಾಥಮಿಕ ಹಕ್ಕನ್ನೂ ನಿರಾಕರಿಸಲಾಯಿತು. ಲಿಖಿತ ಪ್ರಶ್ನೆಗಳಿಗೆ ಉತ್ತರ ನೀಡುವಲ್ಲಿಯೂ ಸಂಸತ್ತನ್ನು ಬದಿಗೆ ತಳ್ಳುವ ನಿಲುವು ಕಾಣಿಸಿದೆ. ಕೊವಿಡ್ ಸಮಯದಲ್ಲಿ ತಮ್ಮ ಊರುಗಳಿಗೆ ಪ್ರಯಾಣಿಸುತ್ತಿದ್ದ ವಲಸೆ ಕಾರ್ಮಿಕರಲ್ಲಿ ಸಾವುಗಳ ದತ್ತಾಂಶ ತನ್ನ ಬಳಿ ಇಲ್ಲ ಎಂದು ಸರಕಾರ ಸಾರಿತು. ಅಸ್ಸಾಂನಲ್ಲಿ ನಿರ್ಬಂಧ ಕೇಂದ್ರಗಳಲ್ಲಿ ಎಷ್ಟು ವ್ಯಕ್ತಿಗಳಿದ್ದಾರೆ ಎಂಬ ದತ್ತಾಂಶವೂ ಇಲ್ಲ ಎಂದಿತು. ಕಳೆದ ವರ್ಷ ಚಳಿಗಾಲದ ಅಧಿವೇಶನದಲ್ಲಿ ಅದು ಈ ಅಂಕಿ–ಅಂಶವನ್ನು ಕೊಟ್ಟಿತ್ತು.

ಸಂಸದೀಯ ನಡವಳಿಕೆಯನ್ನು ಮೊಟಕುಗೊಳಿಸುವಲ್ಲಿನ ಇನ್ನೊಂದು ಅಂಶವೆಂದರೆ, ಒಂದು ಅಧಿವೇಶನದಲ್ಲಿ ಮಂಡಿಸಿದ ಮಸೂದೆಗಳ ಮೇಲೆ ಆಳವಾದ ಚರ್ಚೆ ಮತ್ತು ಪರೀಕ್ಷಣೆ ಅಗತ್ಯವಿದ್ದಲ್ಲಿ ಅವನ್ನು ಸ್ಥಾಯೀ ಸಮಿತಿಗೆ ಕಳಿಸುವುದು ಅಥವ ಒಂದು ಆಯ್ಕೆ ಸಮಿತಿಗೆ ವಹಿಸಿಕೊಡುವುದು ಶಾಸನಗಳನ್ನು ಕುರಿತಾದ ಸಾಮಾನ್ಯ ವಿಧಾನ.

ಕಳೆದ ಆರು ತಿಂಗಳಲ್ಲಿ ಸರಕಾರ ಹೊರಡಿಸಿದ 11 ಸುಗ್ರೀವಾಜ್ಞೆಗಳನ್ನು ಮಸೂದೆಗಳಾಗಿ ಮಂಡಿಸಿ ಈ ಅಧಿವೇಶನದಲ್ಲಿ ಪಾಸು ಮಾಡಿಸಿಕೊಳ್ಳಲಾಗಿದೆ. ಇವುಗಳಲ್ಲಿ ಒಂದನ್ನು ಬಿಟ್ಟು ಉಳಿದ ಯಾವ ಮಸೂದೆಗಳೂ ಕೊವಿಡ್ ಪಿಡುಗಿನಿಂದಾಗಿ ಉಂಟಾದ ವಿಶೇಷ ಪರಿಸ್ಥಿತಿಗೆ ಸಂಬಂಧಪಟ್ಟ ತುರ್ತಿನ ವಿಷಯಗಳೇನಲ್ಲ. ಸರಕಾರಕ್ಕೆ ಸಂಸತ್ತನ್ನು ಬದಿಗೊತ್ತಲು ಸುಗ್ರೀವಾಜ್ಞೆಗಳ ಮಾರ್ಗ ಅನುಕೂಲಕರವಾಗಿ ಕಂಡಿದೆ. ಸುಗ್ರೀವಾಜ್ಞೆಯನ್ನು ಹೊರಡಿಸಿದ ಆರು ತಿಂಗಳ ಒಳಗೆ ಇಂತಹ ಮಸೂದೆಯನ್ನು ಅಂಗೀಕರಿಸಬೇಕಾಗುತ್ತದೆ ಎಂಬ ಕಾರಣ ಕೊಟ್ಟು ಸ್ಥಾಯೀ ಸಮಿತಿಗೆ ಕಳಿಸಿಲ್ಲ.

ಸಂಸತ್ತಿನ ಬಾಯಿ ಮುಚ್ಚಿಸುವುದು ಪ್ರಜಾಪ್ರಭುತ್ವ ಮತ್ತು ಪ್ರಜಾಸತ್ತಾತ್ಮಕ ಸಂಸ್ಥೆಗಳ ಮೇಲಿನ ಒಟ್ಟು ಪ್ರಹಾರಗಳ ಭಾಗವಾಗಿದೆ. ನಾಗರಿಕರ ಹಕ್ಕುಗಳ ಮೇಲೆ ವ್ಯಾಪಕ ಹಲ್ಲೆಗಳು ನಡೆಯುತ್ತಿವೆ; ಯುಎಪಿಎ ಮತ್ತು ಎನ್ಎಸ್ಎ ಯಂತಹ ಕರಾಳ ಕಾಯ್ದೆಗಳ ಬಳಕೆ; ರಾಜದ್ರೋಹದ ಕಲಮನ್ನು ಎತ್ತಿ ಭಿನ್ನಮತವನ್ನು ದಮನ ಮಾಡುವುದು; ಅಲ್ಪಸಂಖ್ಯಾತರು, ಬುದ್ಧಿಜೀವಿಗಳು ಮತ್ತು ಸಕ್ರಿಯ ಕಾರ್ಯಕರ್ತರನ್ನು 'ರಾಷ್ಟ್ರ–ವಿರೋಧಿಗಳು' ಎಂದು ಗುರಿ ಮಾಡುವುದು; ಮತ್ತು ಮಾಧ್ಯಮಗಳನ್ನು ಹೆದರಿಸುವುದು. ಈಗ ಅಂಗೀಕರಿಸಿರುವ ಹೊಸ ಕಾರ್ಮಿಕ ಕಾನೂನುಗಳು ಕಾರ್ಮಿಕ ವರ್ಗಕ್ಕೆ ಅದರ ಮೂಲಭೂತ ಹಕ್ಕುಗಳೇ ಇಲ್ಲದಂತೆ ಮಾಡುತ್ತವೆ, ಕೆಲಸದ ಭದ್ರತೆ ಇಲ್ಲವಾಗುತ್ತದೆ ಮತ್ತು ಮುಷ್ಕರಗಳ ಮೇಲೆ ನಿರ್ಬಂಧಗಳು ಬರುತ್ತವೆ. ದೇಶದಲ್ಲಿ ಎಲ್ಲ ಪ್ರಜಾಸತ್ತಾತ್ಮಕ ಅವಕಾಶಗಳನ್ನು ಮುಚ್ಚಿ ಬಿಡಲಾಗುತ್ತಿದೆ. ಪ್ರಜಾಪ್ರಭುತ್ವ ಸಾಯುವುದು ಹೀಗೆಯೇ.

ಆದರೆ ಪ್ರಜಾಪ್ರಭುತ್ವದ ಈ ಸಾವನ್ನು ಪ್ರತಿರೋಧಿಸಲು, ನಿಲ್ಲಿಸಲು ಸಾಧ್ಯವಿದೆ. ಇದಕ್ಕೆ ಜನತೆಯನ್ನು, ಮುಖ್ಯವಾಗಿ ದುಡಿಯುವ ಜನಗಳನ್ನು ಅವರು ಕಷ್ಟಪಟ್ಟು ಗಳಿಸಿಕೊಂಡಿರುವ ಹಕ್ಕುಗಳ ರಕ್ಷಣೆಗಾಗಿ ಅಣಿನೆರೆಸಬೇಕು. ಸಂಸತ್ತಿನಲ್ಲಿ ಕೃಷಿ–ಸಂಬಂಧಿತ ಕಾಯ್ದೆಗಳಿಗೆ ವಿರೋಧ ಪಂಜಾಬ್ ಮತ್ತು ಹರ್ಯಾಣದಲ್ಲಿ ರೈತರ ಸಾಮೂಹಿಕ ಪ್ರತಿಭಟನೆಗಳಿಂದಾಗಿ ಹುರುಪು ತುಂಬಿಕೊಂಡಿತು. ಬಿಜೆಪಿಯ ಒಂದು ದೀರ್ಘಕಾಲದ ಮಿತ್ರಪಕ್ಷವಾದ ಅಕಾಲಿ ದಳ ಕೂಡ ಈ ಪ್ರಶ್ನೆಯ ಮೇಲೆ ಸಂಪುಟವನ್ನು ತ್ಯಜಿಸಿತು. ಮೋದಿ ಸರಕಾರವನ್ನು ಹಲವು ಪ್ರಶ್ನೆಗಳಲ್ಲಿ ವಿರೋಧಿಸದೇ ಇರುವ ಪಕ್ಷವಾದ ತೆಲಂಗಾಣ ರಾಷ್ಟ್ರ ಸಮಿತಿ(ಟಿಆರ್‌ಎಸ್) ಕೂಡ ಬಹಿರಂಗವಾಗಿ ವಿರೋಧಿಸಿತು; ಬಿಜು ಜನತಾ ದಳ ಕೂಡ ಈ ಮಸೂದೆಗಳನ್ನು ಬೆಂಬಲಿಸಲಿಲ್ಲ, ಅವನ್ನು ಆಯ್ಕೆ ಸಮಿತಿಗೆ ಕಳಿಸಬೇಕು ಎಂದು ಬಯಸಿತು.

ಪ್ರತಿಪಕ್ಷಗಳ ಸದಸ್ಯರ ಗೈರುಹಾಜರಿಯಲ್ಲಿ ಸಂಸತ್ತಿನಲ್ಲಿ ಹೇಗೋ ಪಾಸು ಮಾಡಿಸಿಕೊಂಡಿರುವ ಕಾರ್ಮಿಕ–ವಿರೋಧಿ ಕಾಯ್ದೆಗಳೂ ದೃಢ ವಿರೋಧ ಮತ್ತು ಒಂದು ಐಕ್ಯ ಕಾರ್ಮಿಕ ವರ್ಗದ ಆಂದೋಲನವನ್ನು ಎದುರಿಸಬೇಕಾಗುತ್ತದೆ. ಈ ಸಂಸತ್ ಅಧಿವೇಶನ ಕಾರ್ಪೋರೇಟ್‌ಗಳು ಮತ್ತು ದೊಡ್ಡ ಬಂಡವಳಿಗರ ಪ್ರಯೋಜನಕ್ಕಾಗಿ ರೈತರು ಮತ್ತು ಕಾರ್ಮಿಕರ ಮೇಲೆ ಒಂದು ನಗ್ನ ದಾಳಿಯನ್ನು ಕಂಡಿದೆ. ಜನಗಳು ಈ ಕ್ರಮಗಳ ವಿರುದ್ಧ ಎದ್ದು ಚಲಿಸಲಾರಂಭಿಸಿದಾಗ, ತಮ್ಮ ಹಕ್ಕುಗಳ ರಕ್ಷಣೆಗೆ ಒಟ್ಟುಗೂಡ ತೊಡಗಿದಾಗ, ಅದು ಎಲ್ಲ ಪ್ರಜಾಪ್ರಭುತ್ವ ಶಕ್ತಿಗಳ ಒಂದು ಸಂಯೋಜಿತ ಮತ್ತು ಐಕ್ಯ ಆಂದೋಲನಕ್ಕೆ ದಾರಿ ತೆರೆಯುತ್ತದೆ. ಪ್ರಜಾಪ್ರಭುತ್ವದ ಕತ್ತು ಹಿಸುಕುವುದನ್ನು ವಿಫಲಗೊಳಿಸಬಹುದಾದ ಪರಿ ಇದು.


ತ್ರಿಶೂಲ ಮಸೂದೆಗಳ ವಿರುದ್ಧ ರೈತರ ಆಕ್ರೋಶ


ತ್ರಿವಳಿ ಸಂಹಿತೆಗಳ ವಿರುದ್ಧ ಕಾರ್ಮಿಕರ ಆಕ್ರೋಶ



ದಿಲ್ಲಿ


ಬೆಂಗಳೂರು

ಕಾರ್ಮಿಕರನ್ನು ಗುಲಾಮರಾಗಿಸುವ ಆಟ ಸಾಗದು
ಮೋದಿ ಸರಕಾರಕ್ಕೆ ಕಾರ್ಮಿಕ ವರ್ಗದ ಎಚ್ಚರಿಕೆ

ಬಿಜೆಪಿ ಸರಕಾರ ಕಾರ್ಮಿಕ–ವಿರೋಧಿ ಮತ್ತು ರೈತ–ವಿರೋಧಿ ಮಸೂದೆಗಳನ್ನು ಸಂಸತ್ತಿನಲ್ಲಿ ಅತ್ಯಂತ ಪ್ರಜಾಪ್ರಭುತ್ವ–ವಿರೋಧಿ ಮತ್ತು ಸರ್ವಾಧಿಕಾರಶಾಹಿ ರೀತಿಯಲ್ಲಿ ಪಾಸು ಮಾಡಿಸಿಕೊಂಡಿರುವುದರ ವಿರುದ್ಧ ವ್ಯಾಪಕ ಪ್ರತಿಭಟನೆಗಳು ನಡೆದಿವೆ. ಎಲ್ಲ ರಾಜ್ಯಗಳಲ್ಲಿ ಲಕ್ಷಕ್ಕೂ ಹೆಚ್ಚು ಸ್ಥಳಗಳಲ್ಲಿ ಲಕ್ಷಾಂತರ ಕಾರ್ಮಿಕರು ಇದರಲ್ಲಿ ಭಾಗವಹಿಸಿದ್ದಾರೆ.

ಸಂಸದೀಯ ಪ್ರಜಾಪ್ರಭುತ್ವಕ್ಕೆ ತನ್ನ ಸಂಪೂರ್ಣ ತಿರಸ್ಕಾರವನ್ನು ಪ್ರದರ್ಶಿಸುತ್ತ ಬಿಜೆಪಿ ಸರಕಾರ ಮೂರು ಕಾರ್ಮಿಕ ಮಸೂದೆಗಳನ್ನು–ಕೈಗಾರಿಕಾ ಸಂಬಂಧಗಳನ್ನು ಕುರಿತ ಸಂಹಿತೆ, ಸಾಮಾಜಿಕ ಭದ್ರತೆಯನ್ನು ಕುರಿತ ಸಂಹಿತೆ ಮತ್ತು ವೃತ್ತಿ ಸುರಕ್ಷಿತತೆ, ಆರೋಗ್ಯ ಮತ್ತು ದುಡಿಮೆಯ ಪರಿಸ್ಥಿತಿಗಳನ್ನು ಕುರಿತ ಸಂಹಿತೆ–ಲೋಕಸಭೆ ಮತ್ತು ರಾಜ್ಯಸಭೆಗಳಲ್ಲಿ ಪ್ರತಿಪಕ್ಷಗಳ ಸದಸ್ಯರ ಗೈರುಹಾಜರಿಯಲ್ಲಿ ಪಾಸು ಮಾಡಿಕೊಂಡಿದೆ. ಇದರ ಮೊದಲು ಕೃಷಿ ಮಸೂದೆಗಳನ್ನು ಮತಕ್ಕೆ ಹಾಕಬೇಕು ಎಂದು ಕೇಳುವ ತಮ್ಮ ಹಕ್ಕನ್ನು ಚಲಾಯಿಸಿದ್ದಕ್ಕಾಗಿ ಎಂಟು ಸಂಸದ್ ಸದಸ್ಯರನ್ನು ಕಾನೂನುಬಾಹಿರವಾಗಿ ಅಮಾನತುಗೊಳಿಸಿರುವುದನ್ನು ಪ್ರತಿಭಟಿಸಿ ಪ್ರತಿಪಕ್ಷಗಳು ಸಂಸದ್ ಕಲಾಪಗಳನ್ನು ಬಹಿಷ್ಕರಿಸಿದ್ದವು.

ಪುಟ 10 ನೋಡಿ




ಮಂಗಳೂರು

ಕರ್ನಾಟಕದಲ್ಲಿ ಸಾವಿರಾರು ಕಾರ್ಮಿಕರಿಂದ ವಿಧಾನ ಸೌಧ ಚಲೋ

ಕರ್ನಾಟಕದಲ್ಲಿ ಸಪ್ಟಂಬರ್ 24 ರಂದು ರಾಜ್ಯಾದ್ಯಂತ 29 ಜಿಲ್ಲೆಗಳ 61 ಸ್ಥಳಗಳಲ್ಲಿ ಸಾವಿರಾರು ಕಾರ್ಮಿಕರು ಪ್ರತಿಭಟನೆಗಳಲ್ಲಿ ಭಾಗವಹಿಸಿದರು. ಬೆಂಗಳೂರಿನಲ್ಲಿ ಸಾವಿರಾರು ವಿವಿಧ ಕಾರ್ಖಾನೆಗಳ ಕಾಯಂ ಹಾಗೂ ಗುತ್ತಿಗೆ ಟ್ರೈನಿ ಕಾರ್ಮಿಕರು, ಅಸಂಘಟಿತ ವಲಯದ ಕಟ್ಟಡ, ಹಮಾಲಿ, ಬೀದಿ ಬದಿ, ಮನೆಗೆಲಸ, ಆಟೋ, ಟ್ಯಾಕ್ಸಿ ಚಾಲಕರು ಪ್ರೀಡಂ ಪಾರ್ಕ್‌ನಲ್ಲಿ ಕೇಂದ್ರ ಹಾಗೂ ರಾಜ್ಯ ಸರಕಾರಗಳ ಕಾರ್ಮಿಕ ತಿದ್ದುಪಡಿಗಳ ವಿರುದ್ಧ ಮತ್ತು ಸಾಮಾಜಿಕ ಭದ್ರತಾ ಕಾನೂನಿಗೆ ಆಗ್ರಹಿಸಿ ಬೃಹತ್ ವಿಧಾನ ಸೌಧ ಚಲೋ ನಡೆಸಿ ಸರಕಾರ ಕಾರ್ಮಿಕ ವಿರೋಧಿ ನೀತಿಗಳನ್ನು ಕೈಬಿಡಲು ಆಗ್ರಹಿಸಿದರು.

ಲಾಕ್‌ಡೌನ್ ಕಾಲಾವಧಿಯ ಪೂರ್ಣ ವೇತನ ಸಿಗದ ಕಾರಣ ಸಂಘಟಿತ

ಪುಟ 10 ನೋಡಿ


ಹಾಸನ


ವಿಜಯಪುರ


ಧಾರವಾಡ


ಯಾದಗಿರಿ

ರೈತ ವಿರೋಧಿ ಕಾಯ್ದೆ ಖಂಡಿಸಿ ರಸ್ತೆ ತಡೆ: ನೂರಕ್ಕೂ ಹೆಚ್ಚು ಬಂಧನ



ಕೋವಿಡ್ 19 ರ ಸಾಂಕ್ರಮಿಕ ರೋಗದ ಸಂಕಷ್ಟದಲ್ಲಿ ಜನರು ಜೀವನ ನಿರ್ವಹಿಸಲಾರದೆ ಆರ್ಥಿಕ ಸಂಕಷ್ಟ ಎದುರಿಸುತ್ತಿರುವಾಗ ಅವರ ಸಮಸ್ಯೆಗೆ ಸ್ಪಂದಿಸಬೇಕಾದ ಕೇಂದ್ರ ಸರ್ಕಾರ ಹಿಂಭಾಗಿಲಿನಿಂದ ಅಗತ್ಯ ವಸ್ತುಗಳ ಕಾಯ್ದೆ, ಭೂಸುಧಾರಣಾ ಕಾಯ್ದೆ, ಎಪಿಎಂಸಿ ಕಾಯ್ದೆ ಹಾಗು ವಿದ್ಯುತ್ ಕಾಯ್ದೆಗಳಿಗೆ ತಿದ್ದುಪಡಿ ತರುವ ಮೂಲಕ ಮಸೂದೆಯನ್ನು ಜಾರಿ ಮಾಡಲಾಗಿದೆ.

ಕೃಷಿಗೆ ಸಂಬಂಧಿಸಿದ ಈ ಮಸೂದೆಗಳನ್ನು ವಿರೋಧಿಸಿ 35ಕ್ಕೂ ಅಧಿಕ ರೈತ ಸಂಘಟನೆಗಳು ಸೆಪ್ಟೆಂಬರ್ 25ರಂದು ರಾಜ್ಯಾದ್ಯಂತ ಹೆದ್ದಾರಿ ಬಂದ್ ನಡೆಸಿ ಪ್ರತಿಭಟನೆ ನಡೆಸಿದ್ದಾರೆ. ಬೆಂಗಳೂರಿನ ಹೊರವಲಯ ಮತ್ತು ರಾಜ್ಯದ ಪ್ರಮುಖ ಹೆದ್ದಾರಿಗಳಲ್ಲಿ ರಸ್ತೆ ತಡೆ ನಡೆಸಿ ರೈತರು ಪ್ರತಿಭಟನೆ ನಡೆದಿದ್ದು ಮೈಸೂರುಬ್ಯಾಂಕ್ ವೃತ್ತದಲ್ಲಿ ನಡೆಯುತ್ತಿದ್ದ ಪ್ರತಿಭಟನೆಯು ಹೆಚ್ಚು ಕಾವು ಪಡೆಯುತ್ತಿದ್ದಂತೆ ಅಲ್ಲಿನ ಪ್ರಮುಖ ಮುಖಂಡರಾದ ಕರ್ನಾಟಕ ಪ್ರಾಂತ ರೈತ ಸಂಘಟನೆಯ ಮಾರುತಿ ಮಾನಪಡೆ, ಕರ್ನಾಟಕ ರಾಜ್ಯ ರೈತ ಸಂಘಟನೆಯ ಬಡಗಲಪುರ ನಾಗೇಂದ್ರ, ಕೋಡಿಹಳ್ಳಿ ಚಂದ್ರಶೇಖರ್, ರಾಜ್ಯ ಕಬ್ಬು ಬೆಳೆಗಾರರ ಸಂಘದ ಕುರಬುರ ಶಾಂತಕುಮಾರ್, ಕವಿತಾ ಕುರಗುಂಟಿ, ಎನ್ ವೆಂಕಟೇಶ್, ಸಿಐಟಿಯುನ ರಾಜ್ಯಾಧ್ಯಕ್ಷರಾದ ಎಸ್ ವರಲಕ್ಷ್ಮಿ, ಎಸ್ ಎಫ್ ಐ ನ ರಾಜ್ಯ ಉಪಾಧ್ಯಕ್ಷರಾದ ಶಿವಕುಮಾರ್ ಮ್ಯಾಗಳಮನಿ, ಭೀಮನಗೌಡ ಸೇರಿದಂತೆ ಅನೇಕ ಕಾರ್ಯಕರ್ತರನ್ನು ಪೊಲೀಸರು ರಸ್ತೆ ತಡೆದು ಬಂಧಿಸಿದ್ದಾರೆ.

ಪ್ರತಿಭಟನೆಯಲ್ಲಿ ರಾಜ್ಯ ರೈತ ಸಂಘಗಳು, ಕರ್ನಾಟಕ ಪ್ರಾಂತ ರೈತ ಸಂಘ, ರಾಜ್ಯ ಹಸಿರು ಸೇನೆ, ಅಖಿಲ ಭಾರತ ಕಿಸಾನ್ ಸಭ, ರೈತ ಕೃಷಿ ಕಾರ್ಮಿಕರ ಸಂಘ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ, ಆಶಾ ಕಾರ್ಯಕರ್ತೆ ಸಂಘ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಸಿಐಟಿಯು, ಕಾರ್ಮಿಕ ಸಂಘಟನೆ ಮತ್ತುಇತರೆ ಸಂಘಟನೆಗಳು ಭಾಗವಹಿಸಿದ್ದು ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಅನ್ನದಾತರು ನಡೆಸುತ್ತಿರುವ ಐದನೇ ದಿನದ ಅಹೋರಾತ್ರಿ ಪ್ರತಿಭಟನೆಗೆ ಸ್ಪಂದಿಸದ ಸರ್ಕಾರದ ಈ ನಡೆಗೆ ಪ್ರತಿಭಟನಾಕಾರರು ಅಸಮಾಧಾನ ಹೊರಹಾಕಿದ್ದಾರೆ.


ಹಾಸನ



ಕಲಬುರಗಿ



ಮಂಡ್ಯ



ಮಂಗಳೂರು


ಉಡುಪಿ


ಕೋಲಾರ

ಮೋದಿ ಸರಕಾರಕ್ಕೆ ಕಾರ್ಮಿಕ ವರ್ಗದ ಎಚ್ಚರಿಕೆ

ಪುಟ 8 ರಿಂದ

ಒಂದು ಸಂಸದೀಯ ಪ್ರಜಾಪ್ರಭುತ್ವದಲ್ಲಿ ಒಂದು ಚುನಾಯಿತ ಸರಕಾರ ಜನಸಾಮಾನ್ಯರು ಮಾತ್ರವಲ್ಲ, ಸಂಸತ್ತಿನ ಚುನಾಯಿತ ಸದಸ್ಯರ ಸಂವಿಧಾನಿಕ ಮತ್ತು ಪ್ರಜಾಪ್ರಭುತ್ವ ಹಕ್ಕುಗಳಿಗೆ ಕೂಡ ಇಂತಹ ತುಚ್ಛೀಕಾರವನ್ನು ತೋರಿಸುತ್ತದೆ ಎಂಬುದು ನಾಚಿಕೇಗೇಡಿನ ಸಂಗತಿ ಎಂದು ಸಿಐಟಿಯು ಅಖಿಲ ಭಾರತ ಅಧ್ಯಕ್ಷರಾದ ಡಾ.ಕೆ.ಹೇಮಲತಾ ಹೇಳಿದ್ದಾರೆ.

ಸಪ್ಟೆಂಬರ್ 23ರಂದು ದೇಶದ ರಾಜಧಾನಿ ದಿಲ್ಲಿಯ ಜಂತರ್ ಮಂತರ್ ನಲ್ಲಿ ನಡೆದ ಪ್ರತಿಭಟನೆಯನ್ನುದ್ದೇಶಿಸಿ ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಮುಖಂಡರು ಬಿಜೆಪಿ ಸರಕಾರ ಹರಡಿಸಿರುವ ಅಸತ್ಯಭರಿತ ದಾವೆಗಳನ್ನು ಬಯಲಿಗೆಳೆದರು. ಈ ಸಂಹಿತೆಗಳು ಕಾರ್ಮಿಕ ವರ್ಗಕ್ಕೆ ಪ್ರಯೋಜನಕಾರಿ ಮತ್ತು ಕಾರ್ಮಿಕ ಸಂಘಟನೆಗಳನ್ನು ವಿಶ್ವಾಸಕ್ಕೆ ತಗೊಂಡು ಇವುಗಳನ್ನು ತರಲಾಗಿದೆ ಎಂಬುದು ಬರೀ ಸುಳ್ಳು ಎಂದು ಅವರು ಹೇಳಿದ್ದಾರೆ. ಆಕ್ರೋಶಭರಿತ ಪ್ರತಿಭಟನಾಕಾರರು ಮಸೂದೆಗಳ ಪ್ರತಿಗಳನ್ನು ಹರಿದು ಹಾಕಿದರು. ಕೇಂದ್ರೀಯ ಕಾರ್ಮಿಕ ಮುಖಂಡರು ರೈತರ ಸಪ್ಟಂಬರ್25ರ ಅಖಿಲ ಭಾರತ ಪ್ರತಿಭಟನೆಗೆ ತಮ್ಮ ಬೆಂಬಲವನ್ನು ಪುನರುಚ್ಚರಿಸಿದರು. ಕಾರ್ಮಿಕ ಸಂಹಿತೆಗಳ ಮಸೂದೆಗಳನ್ನೂ ಪಾಸು ಮಾಡಿಸಿಕೊಂಡ ನಂತರ ಈಗ ಶ್ರಮಜೀವಿ ಜನಗಳು ಇದರ ವಿರುದ್ಧ ಹೋರಾಡಲು ಬುಡಮಟ್ಟದಿಂದ ತಮ್ಮ ಸಕಲ ಶಕ್ತಿಗಳನ್ನೂ ಒಂದು ಗೂಡಿಸಿಕೊಳ್ಳುವುದು ಅತ್ಯಗತ್ಯವಾಗಿದೆ ಎಂದು ಅವರು ಹೇಳಿದರು. ಸಪ್ಟಂಬರ್ 25 ರಂದು ಸಮಸ್ತ ಕಾರ್ಮಿಕ ವರ್ಗ ರೈತಾಪಿ ಜನಗಳೊಂದಿಗೆ ದೊಡ್ಡ ಪ್ರಮಾಣದಲ್ಲಿ ಸೌಹಾರ್ದ ವ್ಯಕ್ತಪಡಿಸಬೇಕು ಎಂಧು ಈ ಮುಖಂಡರು ತಮ್ಮ ಘಟಕಗಳಿಗೆ ಕರೆ ನೀಡಿದರು.

ಕೃಷಿ ಮಸೂದೆಗಳು ಮತ್ತು ಕಾರ್ಮಿಕ ಮಸೂದೆಗಳು ಕಾರ್ಮಿಕ ವರ್ಗವನ್ನು 19ನೇ ಶತಮಾನದ ಗುಲಾಮಗಿರಿಯ ಪರಿಸ್ಥಿತಿಗಳತ್ತ ತಳ್ಳುವ, ನಮ್ಮ ಸಣ್ಣ ಹಾಗೂ ಮಧ್ಯಮ ರೈತರನ್ನು ಕಾರ್ಪೊರೇಟ್ ಕೃಷಿವ್ಯವಹಾರಸ್ಥರುಗಳ ಮಾರಣಾಂತಿಕ ಮುಷ್ಠಿಯೊಳಕ್ಕೆ ತಳ್ಳುವ ಹಾಗೂ ನಮ್ಮ ಸಣ್ಣ ರೈತ ಆಧಾರಿತ ಕೃಷಿಯನ್ನು ಕಾರ್ಪೊರೇಟ್ ಕೃಷಿಯಾಗಿ ಪರಿವರ್ತಿಸುವ ಭಂಡ ಕೃತ್ಯಗಳಲ್ಲದೆ ಬೇರೇನೂ ಅಲ್ಲ. ಇವುಗಳೊಂದಿಗೆ ಸಾರ್ವಜನಿಕ ವಲಯದ ಸಾರಾಸಗಟು ಖಾಸಗೀಕರಣ ನಮ್ಮ ಸ್ವಾವಲಂಭೀ ಅರ್ಥವ್ಯವಸ್ಥೆ ಮತ್ತು ನಮ್ಮ ಶ್ರಮಜೀವಿ ಜನಗಳಿಗೆ ಮರಣಶಾಸನವಾಗುತ್ತವೆ . ಇವೆಲ್ಲವೂ ಈ ಬಿಜೆಪಿ ಸರಕಾರದ ದೇಶಿ–ವಿದೇಶಿ ಕಾರ್ಪೊರೇ??? ಬಂಟರುಗಳ ಹಿತ ಸಾಧಿಸುವುದಕ್ಕಾಗಿ ಎಂದು ಕಾರ್ಮಿಕ ಮುಖಂಡರುಗಳು ಹೇಳಿದ್ದಾರೆ.

ಕೊವಿಡ್‌ನ ಭರ ಹೆಚ್ಚುತ್ತಿರುವ ನಡುವೆಯೂ ಕಾರ್ಮಿಕ ವರ್ಗ ಬೃಹತ್ ಪ್ರಮಾಣದಲ್ಲಿ ಅಣಿನೆರೆದು ಈ ವಿನಾಶಕಾರಿ ಧೋರಣೆಗಳು ಮುಂದುವರೆಯಲು ಬಿಡೆವು ಎಂದು ಸಾರಿದ್ದಾರೆ. ಏನೇ ಬರಲಿ, ಬುಡಮಟ್ಟದಲ್ಲಿ, ಈ ಜನವಿರೋಧಿ, ರಾಷ್ಟ್ರವಿರೋಧಿ ಕ್ರಮಗಳನ್ನು ಶ್ರಮಜೀವಿಗಳು ವಿರೋಧಿಸುತ್ತಾರೆ, ಪ್ರತಿರೋಧಿಸುತ್ತಾರೆ ಮತ್ತು ನಿಲ್ಲಿಸುತ್ತಾರೆ ಎಂಬುದನ್ನು ಆಳುವ ಮಂದಿಯ ಗಮನಕ್ಕೆ ತಂದಿದ್ದಾರೆ, ಬಿಜೆಪಿ ಸರಕಾರ ಇನ್ನು ಮುಂದೆ ಬಲಿಷ್ಠ ಹೋರಾಟಗಳನ್ನು ಎದುರಿಸಬೇಕಾಗುತ್ತದೆ ಎಂಬ ಎಚ್ಚರಿಕೆಯನ್ನು ದುಡಿಯುವ ಜನರು ನೀಡಿದ್ದಾರೆ ಎಂದಿರುವ ಸಿಐಟಿಯು ಅಧ್ಯಕ್ಷರಾದ ಡಾ.ಕೆ.ಹೇಮಲತಾ ಇದಕ್ಕಾಗಿ ಕಾರ್ಮಿಕ ವರ್ಗವನ್ನು ಅಭಿನಂದಿಸಿದ್ದಾರೆ, ಬಿಜೆಪಿ ಸರಕಾರ ತನ್ನ ದುಡಿಯುವ ಜನ–ವಿರೋಧಿ ಅಜೆಂಡಾವನ್ನು ಹಿಂದಕ್ಕೆ ತಗೊಳ್ಳುವಂತೆ ಮಾಡಲು ನಿರಾಕರಣೆ ಮತ್ತು ಪ್ರತಿರೋಧವೇ ಮುನ್ನಡೆಯ ಏಕೈಕ ದಾರಿ ಎಂದಿದ್ದಾರೆ.

ಕರ್ನಾಟಕದಲ್ಲಿ ಕಾರ್ಮಿಕರ ವಿಧಾನ ಸೌಧ ಚಲೋ

ಪುಟ 8 ರಿಂದ

ಕಾರ್ಮಿಕರು ಸಂಕಷ್ಟಕ್ಕೆ ಸಿಲುಕಿದ್ದಾರೆ, ಅಸಂಘಟಿತ ಕಾರ್ಮಿಕರು ಲಾಕ್‌ಡೌನ್ ಕಾಲಾವಧಿಯ ಗಳಿಕೆ ಇಲ್ಲದೆ ರಾಜ್ಯ ಸರ್ಕಾರವು ಎಲ್ಲಾ ನೀಡದಿರುವ, ಮುಂದೂಡುವ ಪ್ರಯತ್ನಗಳನ್ನು ನಡೆಸಿದ್ದಾರೆ. ಗುತ್ತಿಗೆ ಕಾರ್ಮಿಕರು, ಟ್ರೈನಿಗಳು ಮುಂತಾದ ಉದ್ಯೋಗ ಭದ್ರತೆಯಿಲ್ಲದ 70 ಶೇಕಡ ಕಾರ್ಮಿಕರು ಕೆಲಸ ಕಳೆದುಕೊಂಡಿದ್ದಾರೆ.

ಆದರೆ ಇಂತಹ ಶ್ರಮಿಕ ವರ್ಗಕ್ಕೆ ಇರುವ ಕಾನೂನುಗಳನ್ನು ಬಲಪಡಿಸುವ ಬದಲು ಕಾರ್ಪೋರೇಟ್ ವಲಯಕ್ಕೆ ಭರಪೂರ ಪ್ಯಾಕೇಜ್‌ಗಳನ್ನು ಘೋಷಿಸುತ್ತಾ ಕಾರ್ಮಿಕ ವಿರೋಧಿ ತಿದ್ದುಪಡಿಗಳನ್ನು ಮಾಡುತ್ತಾ ಕಾರ್ಮಿಕ ವರ್ಗವನ್ನು ಮತ್ತಷ್ಟು ತೀವ್ರವಾಗಿ ಶೋಷಿಸಲು ಅವಕಾಶ ಕಲ್ಪಿಸುತ್ತಿದೆ. ಈ ಹಿನ್ನೆಲೆಯಲ್ಲಿ ಕೋವಿಡ್–19 ಲಾಕ್‌ಡೌನ್ ಸಂತ್ರಸ್ಥರಿಗೆ ಪರಿಹಾರ ಹಾಗೂ ಆರ್ಥಿಕ ಪುನಶ್ಚೇತನ ಅಸಂಘಟಿತ ಮತ್ತು ಸ್ಕೀಂ ಕಾರ್ಮಿಕರಿಗೆ ಸಾಮಾಜಿಕ ಭದ್ರತೆಗಾಗಿ ಆಗ್ರಹಿಸಿ ಸಿಐಟಿಯು ನೇತೃತ್ವದಲ್ಲಿ ಸುಮಾರು ಒಂದು ಲಕ್ಷಕ್ಕಿಂತ ಅಧಿಕ ಕಾರ್ಮಿಕರು ತಾಲೂಕ ಕಚೇರಿಗಳು ಹಾಗೂ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಬೃಹತ್ ಪ್ರತಿಭಟನೆ ನಡೆಸಿದರು.

ಸಪ್ಟೆಂಬರ್ 24 ರ ಈ ಹೋರಾಟದ ಭಾಗವಾಗಿ

ಕಾರ್ಮಿಕ ಸಚಿವರಿಗೆ ಮನವಿ: ಪ್ರತಿಭಟನಾ ಸ್ಥಳಕ್ಕೆ ಕಾರ್ಮಿಕ ಸಚಿವ ಶ್ರೀ ಅರೇಬೈಲ್ ಶಿವರಾಮ ಹೆಬ್ಬಾರ್ ಕಾರ್ಮಿಕ ಆಯುಕ್ತರಾದ ಅಕ್ರಂ ಪಾಷಾ ಅವರೊಂದಿಗೆ ಆಗಮಿಸಿ ಸಿಐಟಿಯುವಿನಿಂದ ನೀಡಲಾದ ಹಕ್ಕೊತ್ತಾಯಗಳ ಮನವಿಯನ್ನು ಸ್ವೀಕರಿಸಿದರು. ರಾಜ್ಯ ಸರಕಾರ ಈ ಕೋವಿಡ್ ಪರಿಸ್ಥಿತಿಯಲ್ಲಿ ಕಾರ್ಮಿಕರ ಹಕ್ಕುಗಳನ್ನು ಮತ್ತು ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸಲು ಅಗತ್ಯ ಕ್ರಮವಹಿಸಲಿದೆ ಈ ಬಗ್ಗೆ ಸಿಐಟಿಯು ನಾಯಕತ್ವದೊಂದಿಗೆ ಮಾತುಕತೆ ನಡೆಸಲಿದ್ದೇವೆ ಎಂಬ ಭರವಸೆ ನೀಡಿದರು.

ಪ್ರತಿಭಟನೆಯನ್ನುದ್ದೇಶಿಸಿ ಸಿಐಟಿಯು ರಾಜ್ಯ ಅಧ್ಯಕ್ಷರಾದ ಎಸ್. ವರಲಕ್ಷ್ಮಿ, ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ, ರಾಜ್ಯ ಖಜಾಂಚಿ ಪಿ.ಕೆ.ಪರಮೇಶ್ವರ್, ರಾಜ್ಯ ಕಾರ್ಯದರ್ಶಿಗಳಾದ ಕೆ.ಎನ್. ಉಮೇಶ್, ಕೆ. ಮಹಾಂತೇಶ್, ಪ್ರತಾಪಸಿಂಹ, ಎಚ್.ಎಸ್ ಸುನಂದಾ ಮಾಲಿನಿ ಮೇಸ್ತಾ, ರಾಘವೇಂದ್ರ ಮಾತನಾಡಿದರು. ಕಾರ್ಮಿಕರ ಹೋರಾಟವನ್ನು ಬೆಂಬಲಿಸಿ ರೈತ ಕಾರ್ಮಿಕ ದಲಿತ ಐಕ್ಯ ಹೋರಾಟ ಸಮಿತಿ ಸಂಚಾಲಕ ಡಾ ಪ್ರಕಾಶ ಕಮ್ಮರಡಿ, ಕರ್ನಾಟಕ ರಾಜ್ಯ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಬಡಗಲಪುರ ನಾಗೇಂದ್ರ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷ ಮಾರುತಿ ಮಾನ್ಪಡೆ ಮಾತನಾಡಿದರು. ಸಿಐಟಿಯು ಬೆಂಗಳೂರು ಉತ್ತರ ಜಿಲ್ಲಾ ಸಮಿತಿ ಅಧ್ಯಕ್ಷರಾದ ಹೆಚ್.ಎನ್ ಗೋಪಾಲಗೌಡ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಬೆಂಗಳೂರು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎನ್. ಮಂಜುನಾಥ, ಗ್ರಾಮಾಂತರ ಸಮಿತಿ ಜಿಲ್ಲಾಧ್ಯಕ್ಷ ನರಸಿಂಹಮೂರ್ತಿ, ಪ್ರಧಾನ ಕಾರ್ಯದರ್ಶಿ ಬಸವರಾಜ್ ಸೇರಿ ಹಲವರು ಉಪಸ್ಥಿತರಿದ್ದರು.

ಸೆಪ್ಟೆಂಬರ್ 28 ಕರ್ನಾಟಕ ಬಂದ್ ಗೆ ಬೆಂಬಲ: ಕೇಂದ್ರ ಸರಕಾರ ಕೈಗೊಂಡಿರುವ ರೈತ ಕಾರ್ಮಿಕ ತಿದ್ದುಪಡಿಗಳು ಹಾಗೂ ರಾಜ್ಯ ಸರಕಾರ ನಿನ್ನೆ ವಿಧಾನ ಸಭೆಯಲ್ಲಿ ಅಂಗೀಕರಿಸಿರುವ ಎಪಿಎಂಸಿ ಕಾನೂನು ತಿದ್ದುಪಡಿ ಹಾಗೂ ಭೂ ಸುಧಾರಣಾ ಕಾನೂನು ತಿದ್ದುಪಡಿಗಳನ್ನು ವಿರೋಧಿಸಿ ನಾಳೆ ನಡೆಯುವ ರಸ್ತೆ ತಡೆ ಚಳವಳಿಗೆ ಹಾಗೂ 28 ರಂದು ನಡೆಯುವ ಕರ್ನಾಟಕ ಬಂದ್‌ಗೆ ಸಭೆಯ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿ ಅದನ್ನು ಯಶಸ್ವಿಗೊಳಿಸಲು ಎಲ್ಲಾ ಕಾರ್ಮಿಕರು ಶ್ರಮಿಸಬೇಕೆಂದು ಸಿಐಟಿಯು ರಾಜ್ಯ ಸಮಿತಿ ಕರೆ ನೀಡಿದೆ.

ಪುಸ್ತಕ ಬಿಡುಗಡೆ: ಕೇಂದ್ರ ರಾಜ್ಯ ಸರಕಾರಗಳು ಎಪಿಎಂಸಿ ಖಾಸಗೀಕರಣ, ರೈಲ್ವೆ, ವಿಮಾ, ದೂರ ಸಂಪರ್ಕ, ಬ್ಯಾಂಕ್ ಹಾಗೂ ಆರೋಗ್ಯ ಕ್ಷೇತ್ರಗಳ ಖಾಸಗೀಕರಣ ಮಾಡಲು ಹೊರಟಿದೆ ಇದರ ಅಪಾಯಗಳ ಬಗ್ಗೆ ಹಲವು ಕ್ಷೇತ್ರಗಳ ಗಣ್ಯರು, ಕಾರ್ಮಿಕ ನಾಯಕರು ಬರೆದಿರುವ ಪುಸ್ತಕವನ್ನು ಹೋರಾಟದ ಸ್ಥಳದಲ್ಲಿ ರೈತ ಮುಖಂಡ ಬಡಗಲಪುರ ನಾಗೇಂದ್ರ ಬಿಡುಗಡೆ ಮಾಡಿದರು.



ಬಿಜೆಪಿ ಸರಕಾರಗಳ ರೈತ, ಕಾರ್ಮಿಕ ವಿರೋಧಿ ಮಸೂದೆಗಳ ವಿರುದ್ಧ ಚಾರಿತ್ರಿಕ ಐಕ್ಯ ಹೋರಾಟ....

ಪುಟ 16 ರಿಂದ

ಕಾಯ್ದೆ, ಎಪಿಎಂಸಿ ಕಾಯ್ದೆ ತಿದ್ದುಪಡಿ, ವಿದ್ಯುತ್ ಕಾಯ್ದೆ ತಿದ್ದುಪಡಿಗೆ ಸುಗ್ರೀವಾಜ್ಞೆಗಳನ್ನ ವಿರೋಧಿಸಿ ರೈತರು ಪ್ರತಿಭಟನೆ ನಡೆಸಿದರು. ಹಾಗೆಯೇ, ಕೇಂದ್ರ ಸರ್ಕಾರದ ರೈತ–ವಿರೋಧಿ ಕೃಷಿ ಕಾಯಿದೆಗಳಾದ ಎಪಿಎಂಸಿ ಮತ್ತು ಕಾಂಟ್ರಾಕ್ಟ್ ಕೃಷಿ ಸಂಬಂಧಿತ ಕಾಯಿದೆಗಳು ಮತ್ತು ಜನ–ವಿರೋಧಿ ಅಗತ್ಯ ವಸ್ತುಗಳ ಕಾಯಿದೆಗೆ ತಿದ್ದುಪಡಿ ಮಸೂದೆಗಳಿಗೂ ವಿರೋಧ ವ್ಯಕ್ತಪಡಿಸಿ ಪ್ರತಿಭಟನೆ ನಡೆಸಲಾಯಿತು.

ಈ ಐಕ್ಯ ಹೋರಾಟವನ್ನು ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ರಾಜ್ಯ ರೈತ ಸಂಘ, ಹಸಿರು ಸೇನೆ, ಕರ್ನಾಟಕ ಕಬ್ಬು ಬೆಳೆಗಾರರ ಸಂಘ, ಆಶಾ, ಕರ್ನಾಟಕ ಜನಶಕ್ತಿ, ಆರ್.ಕೆ.ಎಸ್, ಮುಂತಾದ ರೈತಸಂಘಟನೆಗಳು, ಕರ್ನಾಟಕ ಕೃಷಿ ಕೂಲಿಕಾರರ ಸಂಘಟನೆ, ಸಿಐಟಿಯು, ಎಚ್.ಎಂ.ಕೆ.ಪಿ ಮುಂತಾದ ಕಾರ್ಮಿಕ ಸಂಘಟನೆಗಳು, ದಲಿತ ಹಕ್ಕುಗಳ ಸಮಿತಿ ಮುಂತಾದ ದಲಿತ ಸಂಘಟನೆಗಳು – ಒಟ್ಟು ಸೇರಿ 14 ರೈತ ಕಾರ್ಮಿಕ ದಲಿತ ಸಂಘಟನೆಗಳು ಸೇರಿ ನಡೆಸಿದ್ದು ವಿಶೇಷವಾಗಿತ್ತು. ಮೆರವಣಿಗೆಯಲ್ಲಿ ಹಸಿರು, ಕೆಂಪು, ನೀಲಿ ಬಾವುಟಗಳ ಸಾಗರವೇ ಹರಿದು ಬಂದಂತಿತ್ತು. ಫ್ರೀಡಂ ಪಾರ್ಕ್ ನಲ್ಲಿ ತಡೆಯಲಾದ ಮೆರವಣಿಗೆ ಸಾರ್ವಜನಿಕ ಸಭೆಯಾಯಿತು.

ಮೂರು ರೈತ–ವಿರೋಧಿ ಮಸೂದೆಗಳನ್ನು ಮಂಡಿಸಿ ಮಂಜೂರಿ ಪಡೆಯಲು ಕರೆದಿರುವ ವಿಧಾನ ಸಭೆಯ ಅಧಿವೇಶನದ ಮೊದಲ ದಿನವಾದ ಸೆ.21ರಂದು ಆರಂಭಿಸಿ ವಿಧಾನಸಭೆ ಅಧಿವೇಶನ ನಡೆಯುವ ಸೆ.30ರ ವರೆಗೆ 'ಸಮಾನಾಂತರ ಜನತಾ ಅಧಿವೇಶನ' ನಡೆಸಿ ರೈತ–ವಿರೋಧಿ ಕೃಷಿ ಮಸೂದೆಗಳ, ಕಾರ್ಮಿಕ ವಿರೋಧಿ ಮಸೂದೆಗಳ ಹಾಗೂ ದಲಿತರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯಗಳ ಕುರಿತು ಚರ್ಚೆ ನಡೆಸುವುದು ಇತ್ಯಾದಿ ನಿರಂತರ ಕಾರ್ಯಕ್ರಮಗಳನ್ನು ಈ ಐಕ್ಯ ಹೋರಾಟದ ಭಾಗವಾಗಿ ಯೋಜಿಸಲಾಗಿತ್ತು. ಕೋವಿಡ್ ಸಂಕಷ್ಟ ಬಂದ ನಂತರ ಬೆಂಗಳೂರಿನಲ್ಲಿ ನಡೆಯುತ್ತಿರುವ ಮೊದಲ ರೈತರ ಪ್ರತಿಭಟನೆ ಇದಾಗಿದೆ. ಮಾತ್ರವಲ್ಲ ಇತ್ತೀಚಿನ ವರ್ಷಗಳಲ್ಲಿ ಸಂಘಟಿಸಲಾದ ಮೊದಲ ರೈತ–ಕಾರ್ಮಿಕ–ದಲಿತರ ಐಕ್ಯ ಹೋರಾಟವಾಗಿತ್ತು.

ಸ್ವರಾಜ್ ಇಂಡಿಯಾದ ರಾಷ್ಟ್ರ ಮುಖಂಡ ಯೋಗೇಂದ್ರ ಯಾದವ್ ಐಕ್ಯ ಹೋರಾಟದ ಸರಣಿಯನ್ನು ಉದ್ಘಾಟಿಸಿ ಮಾತನಾಡಿದರು " ಬಿಜೆಪಿ ಸರಕಾರ ಅಪಾಯಕಾರಿ ಕಾಯ್ದೆಗಳ ಮೂಲಕ ರೈತರ ಬದುಕನ್ನು ನಾಶಮಾಡುತ್ತಿದೆ. ಕೊರೊನಾ ಸಂದರ್ಭವನ್ನು ಬಳಸಿ ಕಾರ್ಪೊರೇಟ್ ಗಳ ಪರವಾದ ಕೆಲಸಕ್ಕೆ ಮುಂದಾಗಿದೆ. ಕರ್ನಾಟಕದಲ್ಲಿ ರೈತರು, ದಲಿತರು, ಕಾರ್ಮಿಕರು ಐಕ್ಯ ಹೋರಾಟ ನಡೆಸುತ್ತಿರುವುದು ಉತ್ತಮ ಬೆಳವಣಿಗೆ ಎಂದರು.

ಅಖಿಲ ಭಾರತ ಕಿಸಾನ್ ಸಂಘರ್ಷ ಸಮನ್ವಯ ಸಮಿತಿಯ ರಾಷ್ಟ್ರ ಮುಖಂಡ ಅಶೋಕ ಧವಲೆ ಮಾತನಾಡಿ" ರೈತ ವಿರೋಧಿ ಸುಗ್ರೀವಾಜ್ಞೆಗಳನ್ನು ಪ್ರಶ್ನಿಸುವ ಸಂಸದರನ್ನು ಬಿಜೆಪಿ ಅಮಾನತ್ತು ಮಾಡುತ್ತದೆ. ಇದ್ದಕ್ಕಿಂತ ನಾಚಿಕೇಡಿನ ಸಂಗತಿ ಕೇಂದ್ರ ಸರಕಾರಕ್ಕೆ ಬೇರೇನು ಇಲ್ಲ. ಇದು ರೈತ ವಿರೋಧಿ ಸರಕಾರ, ಕರ್ನಾಟಕದಲ್ಲಿ ಆರಂಭವಾದ ಅಂದೋಲನ ಯಶಸ್ವಿಯಾಗಲಿ ಎಂದರು.

ಸ್ವಾತಂತ್ರ್ಯ ಹೋರಾಟಗಾರ ಎಚ್. ಎಸ್. ದೊರೆಸ್ವಾಮಿ ಮಾತನಾಡುತ್ತಾ ಬಿಜೆಪಿಯ ರೈತ ವಿರೋಧಿ ನೀತಿಗಳ ವಿರುದ್ಧ ಹರಿಹಾಯ್ದರು, ಐಕ್ಯ ಹೋರಾಟ ಬಲಗೊಂಡರೆ ಮಾತ್ರ ಬಿಜೆಪಿಗೆ ನಡುಕ ಹುಟ್ಟಲು ಸಾಧ್ಯ ಎಂದು ಅವರು ಹೇಳಿದರು. ಹೋರಾಟಗಾರರನ್ನು ಉದ್ದೇಶಿಸಿ ಜಸ್ಟೀಸ್ ನಾಗಮೋಹನ್ ದಾಸ್, ಮೈಕಲ್ ಫರ್ನಾಂಡೀಸ್, ಶಿವಕುಮಾರ ಕಕ್ಕಾಜಿ, ಎಸ್. ಆರ್. ಹಿರೇಮಠ, ಕವಿತಾ ಕುರುಗುಂಟಿ, ಕುರುಬೂರು ಶಾಂತಕುಮಾರ, ಪ್ರಕಾಶ್ ಕಮ್ಮರಡಿ, ಬಡಗಲಪುರ ನಾಗೇಂದ್ರ, ಪಿ.ವಿ ಲೋಕೇಶ್, ಕುಮಾರ ಸಮತಳ, ಯು. ಬಸವರಾಜ್, ಮಾರುತಿ ಮಾನ್ಪಡೆ, ಮೀನಾಕ್ಷಿ ಸುಂದರಂ, ಚಾಮರಸ ಪಾಟೀಲ್ ಮುಂತಾದವರು ಮಾತನಾಡಿದರು.



ಶತಮಾನೋತ್ಸವ ಲೇಖನಮಾಲೆ-45

1920-2020

ರೈತಾಪಿ ಜನರ ನಡುವಿನ ಕೆಲಸ ಕಾರ್ಯಗಳು – 1

ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯು ತನ್ನ ಏಪ್ರಿಲ್ 1954 ರ ಸಭೆಯಲ್ಲಿ 'ರೈತಾಪಿ ಜನರ ನಡುವಿನ ಕೆಲಸ ಕಾರ್ಯಗಳು' ಕುರಿತು ಒಂದು ನಿರ್ಣಯ ಅಂಗೀಕರಿಸಿತು. "ಭೂಮಿತಿ, 'ಪುನಃಸ್ವಾಧೀನದ ಹಕ್ಕು', ಗೇಣಿ ಕಡಿಮೆಮಾಡುವುದು, ಕಂದಾಯದ ಹೊರೆಗಳು, ರೈತರ ಉತ್ಪನ್ನಕ್ಕೆ ಆರ್ಥಿಕ ಬೆಲೆ, ಋಣಭಾರ, ಹಿಡುವಳಿಗಳ ಕ್ರೋಢೀಕರಣ ಮತ್ತು ಛಿದ್ರೀಕರಣವನ್ನು ತಡೆಯುವುದು, ಸಹಕಾರ ಸಂಘಗಳು, ಪಂಚಾಯತ್‌ಗಳು, ನೀರಾವರಿ ಸೌಲಭ್ಯಗಳು, ಕೃಷಿ ಕೂಲಿಕಾರರ ಬೇಡಿಕೆಗಳು ಮತ್ತು ರೈತ ಸಂಘಟನೆಗಳನ್ನು ಕಟ್ಟುವುದು ಮತ್ತು ಕ್ರಿಯಾಶೀಲಗೊಳಿಸುವಲ್ಲಿನ ಸಮಸ್ಯೆಗಳು ಮುಂತಾದ ಪ್ರಶ್ನೆಗಳನ್ನು ಅದು ಎತ್ತಿಕೊಂಡಿತ್ತು. ರೈತ ಚಳುವಳಿಯಲ್ಲಿ ಪಕ್ಷದ ಕೆಲಸಗಳಿಗೆ ಮಾರ್ಗದರ್ಶನ ಮಾಡಲು ಈ ಎಲ್ಲ ಪ್ರಶ್ನೆಗಳ ಮೇಲೆ ಮೂರ್ತ ನೀತಿ-ನಿಯಮಗಳನ್ನು ಅದು ಹಾಕಿ ಕೊಟ್ಟಿತು. ಆ ನಿರ್ಣಯದ ಮುಖ್ಯಾಂಶಗಳನ್ನು ಈ ಕೆಳಗೆ ನೀಡಲಾಗಿದೆ:

ಕನ್ನಡಕ್ಕೆ: ಟಿ.ಸುರೇಂದ್ರ ರಾವ್

"ಇವತ್ತು ಉತ್ಪಾದನೆಗೆ ಪ್ರಾಚೀನ ಭೂ ವ್ಯವಸ್ಥೆಯೇ ಮುಖ್ಯ ಅಡ್ಡಿಯಾಗಿ ನಂತಿದೆ. ಭೂಮಾಲಕರ ವಿರುದ್ಧ ರೈತ ಸಮುದಾಯವು ಐಕ್ಯ ಹೋರಾಟ ಮಾಡದೆ ಅದನ್ನು ಬದಲಾಯಿಸಲಾಗದು. ಆದಕಾರಣ, ಈ ಹೋರಾಟದ ಅಗತ್ಯಗಳಿಗೆ ಅನುಗುಣವಾಗಿ ಘೋಷಣೆಗಳು ಮತ್ತು ತಂತ್ರಗಳನ್ನು ರೂಪಿಸಬೇಕಾಗಿದೆ. ಈ ಹೋರಾಟಕ್ಕೆ ರೈತ ಸಮುದಾಯವನ್ನು ಮತ್ತು ಗ್ರಾಮೀಣ ದುಡಿಯುವ ಜನರನ್ನು ಸೆಳೆಯುವುದರಿಂದ ಮತ್ತು ಆ ಮೂಲಕ ಅವರಿಗೆ ಜಮೀನು ಸಿಗುವಂತೆ ಮಾಡಿದರೆ ಮಾತ್ರವೇ, ಅಂತಿಮವಾಗಿ ಕೃಷಿ ಉತ್ಪಾದನೆಯಲ್ಲೂ ಗಮನಾರ್ಹ ಅಭಿವೃದ್ಧಿ ಸಾಧ್ಯವಾಗುತ್ತದೆಯೇ ವಿನಃ ಅಲ್ಲೊಂದು ಇಲ್ಲೊಂದು ಜಮೀನ್ದಾರರ ಮಾಲೀಕತ್ವದ ದೊಡ್ಡ ಆಧುನಿಕ ಫಾರ್ಮ್‌ಗಳನ್ನು ಬೆಳೆಸುವುದರಿಂದಲ್ಲ.

"ಭೂ ಹಿಡುವಳಿಗೆ ಒಂದು ಮಿತಿಯನ್ನು ನಿಗದಿಮಾಡಬೇಕು ಮತ್ತು ಆ ಮಿತಿಯನ್ನು ಮೀರಿ ಇರುವ ಹೆಚ್ಚುವರಿ ಜಮೀನನ್ನು ವಶಪಡಿಸಿಕೊಂಡು ಕೃಷಿ ಕೂಲಿಕಾರರಿಗೆ ಹಾಗೂ ಬಡ ರೈತರಿಗೆ ಉಚಿತವಾಗಿ ಹಂಚಬೇಕೆಂದು ನಾವು ಒತ್ತಾಯ ಮಾಡಬೇಕು ಮತ್ತು ಅದನ್ನು ವ್ಯಾಪಕವಾಗಿ ಜನಪ್ರಿಯಗೊಳಿಸಬೇಕು.

"ಆ ಮಿತಿ ಹೇಗಿರಬೇಕೆಂದರೆ ಅದರಿಂದ ಬರುವ ಆದಾಯವು ಒಬ್ಬ ವ್ಯಕ್ತಿ ಮತ್ತವನ ಕುಟುಂಬಕ್ಕೆ ಸಾಕಾಗುವಷ್ಟು ಹಾಗೂ ಅದು ಒಬ್ಬ ಶ್ರೀಮಂತ ರೈತನ ಸರಿಸಮಾನವಾಗುವಷ್ಟಾದರೂ ಇರಬೇಕು, ಆದರೆ ಅದು ಕೃಷಿ ಕೂಲಿಕಾರರಿಗೆ ಮತ್ತು ರೈತಾಪಿ ಜನರಿಗೆ ವಿತರಿಸುವುದಕ್ಕಾಗಿ ಸಾಕಷ್ಟು ಜಮೀನು ಇಲ್ಲದಂತಾಗುವಷ್ಟು ಹೆಚ್ಚು ಇರಬಾರದು.

"ಈ ಮೇಲಿನ ತಾತ್ವಿಕ ನೆಲೆಯಲ್ಲಿ ಪ್ರದೇಶದಿಂದ ಪ್ರದೇಶಕ್ಕೆ ಒಂದು ಮಿತಿಯನ್ನು ನಿಗದಿಗೊಳಿಸಲು ಪಕ್ಷವು ಕಿಸಾನ್ ಸಭಾದವರ ನಿಕಟ ಸಹಕಾರ ಪಡೆದು ಮತ್ತು ಸವಿಸ್ತಾರವಾಗಿ ಎಲ್ಲಾ ಅಂಶಗಳನ್ನೂ ಗಣನೆಗೆ ತೆಗೆದುಕೊಂಡು, ಅಧ್ಯಯನ ಮಾಡಿ, ಆ ಪ್ರದೇಶದ ರೈತರೊಂದಿಗೆ ಕೂಲಂಕುಷ ಚರ್ಚೆ ನಡೆಸಬೇಕು.

"ತಮ್ಮ ಜಮೀನುಗಳನ್ನು ಗೇಣಿಗೆ ನೀಡುವ ಜಮೀನ್ದಾರರು ಅವರು ಆ ಮಿತಿಗಿಂತಲೂ ಕಡಿಮೆ ಜಮೀನು ಹೊಂದಿದ್ದಾಗ್ಯೂ, ಅಂಥವರಿಗೆ ಸ್ವಯಂ ಕೃಷಿಯ ಹೆಸರಿನಲ್ಲಿ ಕೂಡ ಪುನಃಸ್ವಾಧೀನದ ಹಕ್ಕನ್ನು ನೀಡಬಾರದೆಂದು ನಾವು ಒತ್ತಾಯಿಸಬೇಕು. ಏಕೆಂದರೆ ಅದು ಸಾಗುವಳಿ ಮಾಡುತ್ತಿರುವವರನ್ನು ಒಕ್ಕಲೆಬ್ಬಿಸುವುದಕ್ಕೆ ಕಾರಣವಾಗುತ್ತದೆ. ಅಂಥವರಿಗೆ ಪುರ್ನವಸತಿ ಅನುದಾನವೇನಾದರೂ ಕೊಡಬಹುದು ಅಥವಾ ಅವರು ನಿಜವಾಗಿಯೂ ಉಳುಮೆ ಮತ್ತು ಸಾಗುವಳಿ ಮಾಡಲು ಬಯಸಿ ಜನರೊಂದಿಗೆ ಶಾಂತಿಯಿಂದ ಬದುಕಲು ಇಷ್ಟಪಟ್ಟರೆ ಹೆಚ್ಚುವರಿ ಭೂಮಿಯಲ್ಲಿ ಜಮೀನನ್ನು ಅವರಿಗೆ ನೀಡಬಹುದು. ವಿಶೇಷವಾಗಿ ಶಾಸನಾತ್ಮಕ ಜಮೀನ್ದಾರರಾದ ಇನಾಂದಾರರು ಮುಂತಾದವರು ತಲೆಮಾರುಗಳಿಂದ ಎಂದಿಗೂ ಸಾಗುವಳಿಯನ್ನೇ ಮಾಡದವರಿಗೆ ಇದು ಅನ್ವಯವಾಗುತ್ತದೆ.

"ಕೆಲವು ಸಣ್ಣ ಹಿಡುವಳಿದಾರರಿದ್ದಾರೆ, ಅವರ ಬಳಿ ಒಂದು ಕುಟುಂಬದ ಹಿಡುವಳಿಗಿಂತ ಕಡಿಮೆ ಇರುತ್ತದೆ (ಕುಟುಂಬ ಹಿಡುವಳಿ ಎಂದರೆ ಕೆಲವು ಸಂದರ್ಭಗಳಲ್ಲಿ ಒಬ್ಬ ವಯಸ್ಕ ಕೆಲಸಗಾರ ಮತ್ತು ಅವನ ಹೆಂಡತಿಗೆ ಉದ್ಯೋಗ ಒದಗಿಸಿ, ಒಂದು ಜೊತೆ ಎತ್ತುಗಳು, ಕೆಲವು ಸಮಯದಲ್ಲಿ ಮಾತ್ರ ಕೂಲಿ ಕೆಲಸಗಾರರನ್ನು ಬಳಸಲು ಸಾಧ್ಯವಾಗುವಷ್ಟು, ಅಥವಾ ಇನ್ನು ಕೆಲವು ಪ್ರದೇಶಗಳಲ್ಲಿ ಒಂದು ತರ್ಕಸಮ್ಮತ ಜೀವನ ಮಟ್ಟವನ್ನು ನಡೆಸಲು ಸಾಕಾಗುವಷ್ಟು ಮಾತ್ರ ಜಮೀನನ್ನು ಹೊಂದಿರುವುದು). ಅವರಿಗೆ ತಾವೇ ಸಾಗುವಳಿ ಮಾಡುವುದು ಆರ್ಥಿಕವಾಗಿ ಪ್ರಯೋಜನಕಾರಿ ಆಗಿರಲಿಕ್ಕಿಲ್ಲ ಅಥವಾ ಅವರು ಪಟ್ಟಣಗಳಲ್ಲಿ ಅಥವ ಹಳ್ಳಿಗಳಲ್ಲಿ ಉದ್ಯೋಗ ಅಥವಾ ವ್ಯಾಪಾರ ಮಾಡಬೇಕಾದಂತಹ ಒತ್ತಡಕ್ಕೆ ಒಳಗಾಗಿರಬಹುದು. ಅದರಿಂದ ಅವರು ಬೇರೆಯವರಿಗೆ ಗೇಣಿಗೆ ನೀಡಿರಬಹುದು. ಅವರು ಸಾಮಾನ್ಯವಾಗಿ ಕಾರ್ಖಾನೆ ಕಾರ್ಮಿಕರು, ಪುಟ್ಟ ವ್ಯಾಪಾರಿಗಳು, ಕಡಿಮೆ ಆದಾಯದ ವೃತ್ತಿನಿರತರು ಮುಂತಾದವರಿರುತ್ತಾರೆ. ಅಂಥವರನ್ನು ಜಮೀನ್ದಾರರು ಎಂದು ಗೊಂದಲ ಮಾಡಿಕೊಳ್ಳಬಾರದು. ಅವರನ್ನು ಸಂಪೂರ್ಣವಾಗಿ ಬೇರೆಯ ರೀತಿಯಲ್ಲೇ ಪರಿಗಣಿಸಬೇಕು.

"ಈ ಸಣ್ಣ ಹಿಡುವಳಿದಾರರಿಗೆ ಆಯ್ಕೆ ಇರಬೇಕು; ಹಿಂತಿರುಗಿ ಬಂದು ಉಳುಮೆ ಮಾಡುವುದು, ಅದನ್ನೇ ತಮ್ಮ ವೃತ್ತಿಯನ್ನಾಗಿಸಿಕೊಳ್ಳುವುದು, ಅಥವಾ ಕಾಲಮಿತಿ ನಿಗದಿ ಮಾಡಿ ಅದಕ್ಕನುಗುಣವಾಗಿ ಗೇಣಿ ಕಾನೂನಿನ ಪ್ರಕಾರ ಗೇಣಿ ಮೊತ್ತವನ್ನು ಕಡಿಮೆ ಮಾಡಿ ಗೇಣಿಗೆ ನೀಡುವುದು, ಅಥವಾ ಮಾರಾಟ ಮಾಡುವುದು, ಅಥವಾ ಮಾರುಕಟ್ಟೆ ದರದಲ್ಲಿ ಸರ್ಕಾರದಿಂದ ಪೂರ್ಣ ಪರಿಹಾರ ಪಡೆದು ಗೇಣಿದಾರನಿಗೆ ಜಮೀನನ್ನು ಬಿಟ್ಟುಕೊಡುವುದು. ಒಂದೊಮ್ಮೆ ಈ ಬಡ ಸಣ್ಣ ಹಿಡುವಳಿದಾರರು ಹಾಗೂ ಬಡ ಗೇಣಿದಾರರ ನಡುವೆ ವಿವಾದಗಳು ಉಂಟಾದರೆ, ಕಿಸಾನ್ ಚಳುವಳಿಯು ಮಧ್ಯಪ್ರವೇಶಿಸಿ ರೈತ ಸಮುದಾಯದ ನಡುವಿನ ಐಕ್ಯತೆ ಕಾಪಾಡುವ ದೃಷ್ಟಿಯಿಂದ ರಾಜಿ ಮಾಡಿಸಲು ಶ್ರಮಿಸಬೇಕು. ಆದರೆ ಒಂದು ನ್ಯಾಯಯುತ ಬದುಕನ್ನು ನಡೆಸುವಷ್ಟು ಆದಾಯದ ವೃತ್ತಿಯನ್ನು ಹೊಂದಿದ್ದರೆ, ಅವರಿಗೆ ಪರಿಹಾರ ನೀಡಬೇಕು ಅಥವಾ ಕಡಿಮೆ ಗೇಣಿಯನ್ನು ನಿಗದಿ ಮಾಡಬೇಕು, ಆದರೆ ಯಾವುದೇ ಕಾರಣಕ್ಕೂ ಅವರು ಪುರ್ನಸ್ವಾಧೀನದ ಹಕ್ಕನ್ನು ಪಡೆಯಬಾರದು.

"......ಪಕ್ಷದ ತಕ್ಷಣದ ಹಾಗೂ ಅತ್ಯಂತ ಮುಖ್ಯವಾದ ಕೆಲಸವೇನೆಂದರೆ ಒಕ್ಕಲೆಬ್ಬಿಸುವುದರ ವಿರುದ್ಧ ಮತ್ತು ಕಡಿಮೆ ಗೇಣಿಗಾಗಿ ಹೋರಾಟಗಳನ್ನು ಕೈಗೆತ್ತಿಕೊಳ್ಳುವುದಾಗಿದೆ . . . ಒಕ್ಕಲೆಬ್ಬಿಸುವುದರ ವಿರುದ್ಧ ಮತ್ತು ಗೇಣಿ ಇಳಿಕೆಗಾಗಿ ಪ್ರತಿರೋಧ ಮತ್ತು ಹೋರಾಟಗಳನ್ನು ನಡೆಸುವಾಗ ಅಸ್ತಿತ್ವದಲ್ಲಿರುವ ಕೃಷಿ ಕಾಯಿದೆಯಲ್ಲಿರುವ ರಿಯಾಯಿತಿಗಳು ಮತ್ತು ಸೌಲಭ್ಯಗಳನ್ನು, ಅವು ಎಷ್ಟೇ ತಾತ್ಕಾಲಿಕವಾಗಿ ಮತ್ತು ಸೀಮಿತವಾಗಿದ್ದರೂ, ಪಕ್ಷ ಮತ್ತು ಕಿಸಾನ್ ಸಭಾ ಅವುಗಳನ್ನು ಸಂಪೂರ್ಣವಾಗಿ ಬಳಸಿಕೊಳ್ಳಬೇಕು.

"ಗೇಣಿ ಕಡಿಮೆ ಮಾಡುವುದು ಮತ್ತು ಅನುಭೋಗದ ಅವಧಿ ಖಾಯಂಗೊಳಿಸುವುದು ಎಂದು ನಾವು ಒತ್ತಾಯ ಮಾಡುವುದೆಂದರೆ ರೈತರು ಜಮೀಂದಾರರಿಗೆ ಕೊಡುವ ಗೇಣಿಯನ್ನು ಕಡಿಮೆ ಮಾಡುವುದು ಮತ್ತು ಜಮೀಂದಾರರ ಜಮೀನಿನ ಮೇಲೆ ಗೇಣಿದಾರರ ಹಕ್ಕುದಾರಿಕೆ ಖಾಯಂ ಮಾಡುವುದು ಎಂದರ್ಥ. ಎಲ್ಲಿ ಆರ್ಥಿಕ ಬೆಳೆಗಳನ್ನು ಅಂದರೆ ಕಬ್ಬು, ಹೊಗೆಸೊಪ್ಪು ಮುಂತಾದವುಗಳನ್ನು ವ್ಯಾಪಕವಾಗಿ ಬೆಳೆಯುತ್ತಾರೋ ಅಂಥಲ್ಲಿ ಜಮೀಂದಾರರು ಸಣ್ಣ ಹಿಡುವಳಿದಾರರಿಂದ ಜಮೀನನ್ನು ಗುತ್ತಿಗೆಗೆ ಪಡೆದು ಅವರಿಗೆ ಕಡಿಮೆ ಹಣ ಕೊಡುವ ವ್ಯವಸ್ಥೆ ಇರುವ ಕಡೆಗಳಲ್ಲಿ ನಮ್ಮ ಬೇಡಿಕೆ ಅನ್ವಯವಾಗುವುದಿಲ್ಲ. ಅಂತಹ ಪ್ರದೇಶಗಳಲ್ಲಿ, ಜಮೀಂದಾರರು ರೈತರಿಗೆ ಹೆಚ್ಚಿನ ಹಣ ಕೊಡಬೇಕು ಎಂದು ನಾವು ಒತ್ತಾಯಿಸಬೇಕು.

"ಕೃಷಿ ಸಮುದಾಯದ ಭಾಗವಾಗಿರುವ ಕೃಷಿ ಕೂಲಿಕಾರರು ಅತ್ಯಂತ ಸಮರಶೀಲ ವಿಭಾಗವಾಗಿದ್ದಾರೆ. ಗ್ರಾಮೀಣ ಸಮುದಾಯದ 70% ರಷ್ಟಿರುವ ಕೃಷಿ ಕೂಲಿಕಾರರು ಮತ್ತು ಸಣ್ಣ ರೈತರ ಮೇಲೆಯೇ ಇಡೀ ಕಾರ್ಷಿಕ ಚಳುವಳಿ ನಿಂತಿದೆ. ಅವರನ್ನು ಮಧ್ಯಮ ರೈತರು ಹಾಗೂ ಶ್ರೀಮಂತ ರೈತರೊಡನೆ ದೃಢವಾಗಿ ಒಟ್ಟುಗೂಡಿಸಿ ನಗರ ಪಟ್ಟಣಗಳಲ್ಲಿನ ಕಾರ್ಮಿಕ ವರ್ಗ ಹಾಗೂ ಪ್ರಜಾಸತ್ತಾತ್ಮಕ ಚಳುವಳಿಯೊಂದಿಗೆ ಸಂಯೋಜನೆ ಮಾಡಿ ಭೂಮಾಲಕರ ವಿರುದ್ಧ ಅಣಿನೆರೆಸಬೇಕು.

"ಜಮೀನಿಗಾಗಿ, ಅನುಭೋಗದ ಅವಧಿಯ ಖಾಯಮಾತಿಗಾಗಿ ಮತ್ತು ಗೇಣಿಯನ್ನು ಕಡಿಮೆ ಮಾಡಲು ಕೂಡ ಭೂಮಾಲಕರ ವಿರುದ್ಧ ನಡೆಯುವ ಸಣ್ಣ, ಮಧ್ಯಮ ಹಾಗೂ ಶ್ರೀಮಂತ ರೈತರ ಹೋರಾಟವನ್ನು ಕೃಷಿ ಕೂಲಿಕಾರರ ಸಕ್ರಿಯ ಬೆಂಬಲವಿಲ್ಲದೇ ಮತ್ತು ಅವರನ್ನು ಒಳಗೊಳ್ಳದೇ ಇದ್ದರೆ ಯಶಸ್ವಿಯಾಗಿ ಕೊಂಡೊಯ್ಯಲು ಸಾಧ್ಯವಿಲ್ಲ.

"ಕೃಷಿ ಕೂಲಿಕಾರರ ತಕ್ಷಣದ ಬೇಡಿಕೆಗಳನ್ನು ಜತೆಯಲ್ಲೇ ಭೂಮಿಗಾಗಿನ ಅವರ ಮೂಲ ಬೇಡಿಕೆಯನ್ನು ಪಕ್ಷ ಮತ್ತು ಕಿಸಾನ್ ಸಭಾವು ಅತ್ಯಂತ ಹುರುಪಿನಿಂದ ಕೈಗೆತ್ತಿಕೊಂಡು ಹೋರಾಡಬೇಕು. ಕೃಷಿ ಕೂಲಿಕಾರರ ಬೇಡಿಕೆಗಳನ್ನು ಕೈಗೆತ್ತಿಕೊಳ್ಳುವ ಮೂಲಕ ಮಾತ್ರವೇ ಭೂಮಾಲಕ ಪದ್ಧತಿಯ ವಿರುದ್ಧದ, ಆಳುವ ವರ್ಗದ ವಿರುದ್ಧದ ಮತ್ತು ಭೂಮಿಗಾಗಿ, ಸ್ವಾತಂತ್ರ್ಯಕ್ಕಾಗಿ, ಪ್ರಜಾಪ್ರಭುತ್ವ ಹಾಗೂ ಶಾಂತಿಗಾಗಿನ ಚಳುವಳಿಯಲ್ಲಿ ಅವರನ್ನು ಒಳಗೊಳ್ಳಲು ಸಾಧ್ಯವಾಗುತ್ತದೆ. ಇದನ್ನು ಮಾಡುವಲ್ಲಿ ವಿಫಲವಾದರೆ, ಈ ವಿಭಾಗದ ಜನರು ಕೋಮುವಾದಿ, ವಿಚ್ಛಿದ್ರಕಾರಿ ಹಾಗೂ ಪ್ರತಿಗಾಮಿ ಸಂಘಟನೆಗಳ ತೆಕ್ಕೆಗೆ ಬೀಳುತ್ತಾರೆ. ಜಾತಿವಿಭಜನೆ, ಕುಂದು ಕೊರತೆಗಳು ಮತ್ತು ದಬ್ಬಾಳಿಕೆಯ ಹೆಸರಿನಲ್ಲಿ ಹಳ್ಳಿಗಳಲ್ಲಿನ ಇತರ ರೈತಾಪಿ ಜನರ ವಿರುದ್ಧವೇ ಅವರು ತಿರುಗಿ ಬೀಳುವ ಸಾಧ್ಯತೆ ಇದೆ.

"ಅವರ ಕೆಲವು ತಕ್ಷಣದ ಬೇಡಿಕೆಗಳು ಇಂತಿವೆ:

ಅ) ಬೇಸಾಯಯೋಗ್ಯ ಪಾಳು ಭೂಮಿಯನ್ನು ಮೊದಲ ಐದು ವರ್ಷ ಯಾವುದೇ ಶುಲ್ಕವಿಲ್ಲದೇ ಅವರಿಗೆ ಮತ್ತು ಬಡ ರೈತರಿಗೆ ಹಂಚಬೇಕು. ಜಾನುವಾರುಗಳು, ಸಲಕರಣೆಗಳು ಮುಂತಾದವುಗಳನ್ನು ಖರೀದಿಸಲು ಅನುದಾನ ಮತ್ತು ದೀರ್ಘಾವಧಿ ಸಾಲ ನೀಡಬೇಕು.

ಆ) ಉಚಿತ ನಿವೇಶನಗಳು ಮತ್ತು ಊರೊಟ್ಟಿನ ಜಮೀನುಗಳು ಹಾಗೂ ಜಾಗಗಳನ್ನು ಇತರರೊಂದಿಗೆ ಬಳಸಲು ಸಮಾನ ಹಕ್ಕುಗಳಿರಬೇಕು. ವಸತಿ ನಿವೇಶನಗಳಿಂದ ಅಥವಾ ಅವರು ಪ್ರಸ್ತುತ ಇರುವ ಮನೆಗಳಿಂದ ಅವರನ್ನು ಒಕ್ಕಲೆಬ್ಬಿಸಬಾರದು.

ಇ) ಜಮೀಂದಾರರು ಮತ್ತು ಸಾಹುಕಾರರುಗಳಿಂದ ಪಡೆದ ಸಾಲ ಮನ್ನಾ ಮಾಡಬೇಕು ಮತ್ತು ಕಡಿಮೆ ಬಡ್ಡಿದರದಲ್ಲಿ ಸಾಲ ಸೌಲಭ್ಯ ಒದಗಿಸಬೇಕು.

ಈ) ಜಾತಿ ಹಾಗೂ ಅಸ್ಪೃಶ್ಯತೆಯ ಆಧಾರದಲ್ಲಿನ ಸಾಮಾಜಿಕ ಕುಂದು ಕೊರತೆಗಳನ್ನು ನಿವಾರಿಸಬೇಕು.

ಉ) ಕಡ್ಡಾಯ ಬಿಟ್ಟಿ ಚಾಕರಿಯನ್ನು ರದ್ದು ಮಾಡಬೇಕು ಮತ್ತು ಅದನ್ನು ಶಿಕ್ಷಾರ್ಹವೆಂದು ಪರಿಗಣಿಸಬೇಕು.

ಊ) ಸರ್ಕಾರದಿಂದ ಉಚಿತ ವೈದ್ಯಕೀಯ ಮತ್ತು ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸಬೇಕು.

ಎ) ವಿವಿಧ ನೀರಾವರಿ ಮತ್ತು ಅಭಿವೃದ್ಧಿ ಯೋಜನೆಗಳನ್ನು ಪ್ರಾರಂಭಿಸಿ ಉದ್ಯೋಗಾವಕಾಶಗಳನ್ನು ಒದಗಿಸಬೇಕು.

ಏ) ಒಕ್ಕಲು ಜಮೀನಿನಲ್ಲಿ ಕೆಲಸ ಮಾಡುವ ಆಳುಗಳಿಗೆ ಕನಿಷ್ಠ ದಿನಗೂಲಿ ಮತ್ತು ಕನಿಷ್ಠ ತಿಂಗಳ ಸಂಬಳ ನಿಗದಿಮಾಡಬೇಕು.

ಐ) ಒಕ್ಕಲು ಜಮೀನನಲ್ಲಿ ಕೆಲಸಮಾಡುವ ಆಳುಗಳಿಗೆ ಈಗಿರುವ ವಿಪರೀತ ಕೆಲಸದ ಅವಧಿಯನ್ನು ಕಡಿಮೆ ಮಾಡಬೇಕು ಮತ್ತು ವಾರ್ಷಿಕವಾಗಿ ಕನಿಷ್ಠ ದಿನಗಳ ರಜೆಯನ್ನು ಕೊಡಬೇಕು.

"ಒಬ್ಬ ಕೃಷಿ ಕೂಲಿಕಾರನ ಕನಿಷ್ಠ ದಿನಗೂಲಿಯು ಕೊನೇಪಕ್ಷ ಅವನು ಮತ್ತು ಅವನ ಮೇಲೆ ಅವಲಂಬಿತರಾಗಿರುವವರಿಗೆ ಕೆಲಸದ ದಿನದ ಕನಿಷ್ಟ ಜೀವನಾವಶ್ಯಕಗಳನ್ನು ಪೂರೈಸುವಂತಿರಬೇಕು. ಕನಿಷ್ಠ ವೇತನವು ಸಾಮಾನ್ಯ ಕೆಲಸಕ್ಕಷ್ಟೆ. ಆದರೆ ಕಠಿಣತಮ ಕೆಲಸಗಳಿಗೆ ಅಥವಾ ಬಿಡುವಿಲ್ಲದ ಸಮಯಗಳಲ್ಲಿ ದೀರ್ಘಕಾಲೀನ ಕೆಲಸಗಳಿಗೆ ಕನಿಷ್ಠ ಕೂಲಿಗಿಂತ ಹೆಚ್ಚಾಗಿರಬೇಕು. ಒಕ್ಕಲು ಜಮೀನಿನಲ್ಲಿ ಕೆಲಸಮಾಡುವ ಆಳುಗಳಿಗೆ ಅವರ ಕನಿಷ್ಠ ವಾರ್ಷಿಕ ಸಂಬಳವು ಕೊನೇ ಪಕ್ಷ ಈ ದಿನಗೂಲಿಯ 365 ಪಟ್ಟು ಸಿಗಬೇಕು.

"ನಿರುದ್ಯೋಗ ಸಮಸ್ಯೆಯು ಕೃಷಿ ಕಾರ್ಮಿಕರ ಬೇರೆಲ್ಲಾ ಸಮಸ್ಯೆಗಳನ್ನು ಹಿಂದೆ ಹಾಕಿ ಅವರನ್ನು ತೀವ್ರವಾಗಿ ಕಾಡುತ್ತದೆ . . ಅವರಿಗೆ 'ಉದ್ಯೋಗ ಅಥವಾ ನಿರುದ್ಯೋಗ ಪರಿಹಾರ'ಕ್ಕಾಗಿನ ಅವರ ಬೇಡಿಕೆಯನ್ನು ಪಕ್ಷವು ಕೈಗೆತ್ತಿಕೊಳ್ಳಬೇಕು.

"ರೈತ ಸಂಘಟನೆಯ ಹೊರತಾಗಿ ಕೃಷಿ ಕೂಲಿಕಾರರನ್ನು ಪ್ರತ್ಯೇಕವಾಗಿ ಸ್ವತಂತ್ರ ವರ್ಗ ಸಂಘಟನೆಯಾಗಿ ಸಂಘಟಿಸಬೇಕು ಏಕೆಂದರೆ, ಮೊದಲನೆಯದಾಗಿ, ಅವರಿಗೆ ಅವರದ್ದೇ ಆದ ಪ್ರತ್ಯೇಕ ಬೇಡಿಕೆಗಳಾದ ಕೂಲಿ, ಕೆಲಸದ ಅವಧಿ, ರಜೆಗಳು ಮುಂತಾದವು ಇವೆ. ಎರಡನೆಯದಾಗಿ, ಈ ಕೃಷಿ ಕೂಲಿಕಾರರಲ್ಲಿ ಬಹುತೇಕರು ಸಾಮಾಜಿಕವಾಗಿ ಹಿಂದುಳಿದ ಅಥವಾ 'ಅಸ್ಪೃಶ್ಯರು' ಎಂದು ಕರೆಯಲ್ಪಡುವ ಜಾತಿಗೆ ಸೇರಿದವರಾಗಿರುತ್ತಾರೆ, ಅವರನ್ನು ಸೇರಿಸಿಕೊಳ್ಳುವುದು ಮತ್ತು ಕಿಸಾನ್ ಸಭಾಗಳಲ್ಲಿ ಇತರ ಜಾತಿಗಳ ರೈತರೊಂದಿಗೆ ನೇರವಾಗಿ ಕ್ರಿಯಾಶೀಲಗೊಳಿಸುವುದು ಹೆಚ್ಚು ಕಷ್ಟವಾಗಬಹುದು ಅಥವಾ ಅವರನ್ನು ಸೇರಿಸಿಕೊಳ್ಳುವಲ್ಲಿ ಯಶಸ್ವಿಯಾದರೂ, ಇತರ ಜಾತಿಗಳವರು ಹೆಚ್ಚಿನ ಸಂಖ್ಯೆಯಲ್ಲಿ ಕಿಸಾನ್ ಸಭಾಕ್ಕೆ ಸೇರದಿರುವ ಸ್ಥಿತಿ ಉಂಟಾಗಬಹುದು. ಮೂರನೆಯದಾಗಿ, ಅವರನ್ನು ಪ್ರತ್ಯೇಕವಾಗಿ ಸಂಘಟಿಸಿದರೆ ಕೃಷಿ ಕೂಲಿಕಾರರು ಒಂದು ಪ್ರಮುಖ ಶಕ್ತಿಯಾಗಿ ಬೆಳೆಯುತ್ತಾರೆ ಮತ್ತು ಹಾಗೆಯೇ ಕಿಸಾನ್ ಸಭಾಕ್ಕೆ ಕರೆತರಬಹುದು.

"ಗ್ರಾಮೀಣ ಪ್ರದೇಶದ ಇತರ ಕೂಲಿಕಾರರಾದ ಬಡಗಿ, ಕಮ್ಮಾರ, ಅಗಸ, ಮಣ್ಣು ಅಗೆಯುವವರು ಮತ್ತು ಇತರ ದೈಹಿಕ ಶ್ರಮಜೀವಿಗಳನ್ನೂ ಕೃಷಿ ಕೂಲಿಕಾರರ ಸಂಘಟನೆಗೆ ಸೇರಿಸಿಕೊಳ್ಳಲು ನಾವು ಯತ್ನಿಸಬೇಕು.

"ಭೂಮಾಲಕರ ವಿರುದ್ಧ ಜಮೀನಿಗಾಗಿನ ಬೇಡಿಕೆಯು ಇಡೀ ರೈತಾಪಿ ಜನಗಳ ಪ್ರಮುಖ ಬೇಡಿಕೆಯಾಗಿರುವುದರಿಂದ ಮತ್ತು ಅವರ ಆರ್ಥಿಕ ಸಂಬಂಧಗಳು ರೈತರೊಂದಿಗೇ ಹೆಚ್ಚು ಇರುವುದರಿಂದಾಗಿ ಕೂಡ, ಕೃಷಿ ಕೂಲಿಕಾರರ ಸಂಘಟನೆಗಳು ಮತ್ತು ಕಿಸಾನ್ ಸಭಾಗಳ ನಡುವೆ ಎಲ್ಲಾ ಹಂತಗಳಲ್ಲೂ ಪರಸ್ಪರ ಸೌಹಾರ್ದ ವಿಧಾನವೊಂದನ್ನು ರೂಪಿಸಲು ಈ ಕೂಡಲೇ ಕ್ರಮ ಕೈಗೊಳ್ಳಬೇಕು; ಅವು ಹೆಚ್ಚೆಚ್ಚು ಒಟ್ಟೊಟ್ಟಾಗಿ ಕಾರ್ಯನಿರ್ವಹಿಸುತ್ತಾ ಕೃಷಿ ಕೂಲಿಕಾರರು ಮತ್ತು ಬಡ ರೈತರು ನಾಯಕತ್ವದ ಪಾತ್ರ ವಹಿಸುವಂತೆ ಆಗಬೇಕು." ■

ಫೋಟೋಗ್ರಾಫರ್‌ಗಳ ಜತೆಗೆ ಬಂದ ಚಹಾ ರಾಯಭಾರ



ಸಂಸತ್ ಭವನದ ಎದುರು ರಾತ್ರಿಯಿಡೀ ಧರಣಿ ಕುಳಿತಿದ್ದ ಎಂಟು ಅಮಾನತುಗೊಂಡ ರಾಜ್ಯಸಭಾ ಸದಸ್ಯರನ್ನು ಭೇಟಿ ಮಾಡಲು ಮುಂಜಾನೆಯೇ ರಾಜ್ಯಸಭಾ ಉಪಸಭಾಪತಿಗಳು ಚಹಾದೊಂದಿಗೆ ಬಂದು 'ಮುತ್ಸದ್ದಿ'ತನವನ್ನು ಮೆರೆದಿದ್ದಾರೆ ಎಂದು ಪ್ರಧಾನ ಮಂತ್ರಿಗಳು ಶ್ಲಾಘಿಸಿದ್ದಾರೆ.

ಆದರೆ ಧರಣಿ ನಿರತ ಸಂಸದರು ಅವರ 'ಆತಿಥ್ಯ'ವನ್ನು ಸ್ವೀಕರಿಸಲಿಲ್ಲ. ಏಕೆ? ಪತ್ರಕರ್ತರು ಈ ಪ್ರಶ್ನೆಯನ್ನು ಅಮಾನತುಗೊಂಡವರಲ್ಲಿ ಒಬ್ಬರಾದ ಸಿಪಿಐ(ಎಂ)ನ ಎಳಮಾರಂ ಕರೀಂ ಅವರನ್ನು ಕೇಳಿದರು.

ತಾನು ಸರಕಾರೀ ಕಾರನ್ನು ಬಳಸಿಲ್ಲ, ಇದು ಅನೌಪಚಾರಿಕ ಭೇಟಿ ಎಂದು ಉಪಸಭಾಪತಿಗಳು ಹೇಳಿದರು. ಹಾಗಿದ್ದರೆ ಫೋಟೋಗ್ರಾಫರುಗಳ ಜತೆಗೆ ಏಕೆ ಬಂದರು ಎಂದು ಕರೀಂ ಅವರು ಪ್ರಶ್ನಿಸಿದ್ದಾರೆ.

ಇದು ಒಂದು ಪ್ರಚಾರ ಗಿಟ್ಟಿಸುವ ಕಸರತ್ತು. ನಾವೇಕೆ ಇದನ್ನು ಸ್ವೀಕರಿಸಬೇಕು ಎಂದು ಕೇಳಿದ ಕರೀಂ "ಅದೊಂದು ಯೋಜಿತ ಭೇಟಿ, ಮೂವರು ಫೋಟೋಗ್ರಾಫರ್ ಗಳೊಂದಿಗೆ! ಅದೊಂದು ಶೋ. ಆದ್ದರಿಂದಲೇ ನಾವು ಅದನ್ನು ನಿರಾಕರಿಸಿದೆವು. ಇದೇ 'ಮುತ್ಸದ್ದಿ'ತನವನ್ನು ಅವರು ಭಾನುವಾರ ಸದನದಲ್ಲಿ ಏಕೆ ಪ್ರದರ್ಶಿಸಿಲ್ಲ? ಇಂತಹ ಮುತ್ಸದ್ದಿತನವನ್ನು ತೋರಿಸಿದ್ದರೆ ಇಂತಹ ಪರಿಸ್ಥಿತಿಯೇ ಬರುತ್ತಿಲ್ಲ" ಎಂದು ಎಳಮಾರಂ ಕರೀಂ ಹೇಳಿದರು.

ಮಸೂದೆಗಳನ್ನು ಮತಕ್ಕೆ ಹಾಕಬೇಕು ಎಂದು ಠರಾವು ಮಂಡಿಸಿದ್ದ ಸದಸ್ಯರು ಹಾಜರಿರಲಿಲ್ಲ ಎಂದು ಈ 'ಮುತ್ಸದ್ದಿ' ಹೇಳಿರುವುದಾಗಿ ವರದಿಯಾಗಿದೆ. ಇದು ಬುಡವಿಲ್ಲದ ಆರೋಪ. ಆ ವೇಳೆಯಲ್ಲಿ ಕೆ ಕೆ ರಾಗೇಶ್ ಇದ್ದಿರಲಿಕ್ಕಿಲ್ಲ. ಆದರೆ ಠರಾವು ಮಂಡಿಸಿದ್ದ ಕರೀಂ, ಒಬ್ರಿನ್ ಮತ್ತು ತಿರುಚಿ ಶಿವ ಇದ್ದರು. ಅವರು ಎದ್ದು ಮಸೂದೆಗಳನ್ನು ಮತಕ್ಕೆ ಹಾಕಬೇಕು ಎಂದು ಆಗ್ರಹಿಸಿದರು. ಆದರೆ ಅದನ್ನು ಉಪಸಭಾಪತಿಗಳು ಕಿವಿಗೆ ಹಾಕಿಕೊಳ್ಳಲೇ ಇಲ್ಲ, ಠರಾವು ವಜಾ ಆಗಿದೆ ಎಂದು ಪ್ರಕಟಿಸಿ ಬಿಟ್ಟರು. ಸರಕಾರ ಸಂಸತ್ತಿನ ಅಪಹಾಸ್ಯ ಮಾಡಿದೆ, ಇದನ್ನು ಒಪ್ಪಲು ಸಾಧ್ಯವಿಲ್ಲ ಎಂದು ಕರೀಂ ಹೇಳಿದ್ದಾರೆ.

ಎಂಎಸ್‌ಪಿ ಖಾತ್ರಿಗೆ ಶಾಸನ ತರಲು ಏಕೆ ಹಿಂದೇಟು?

ಪ್ರತಿಪಕ್ಷಗಳು ಮೂರು ಬೇಡಿಕೆಗಳು ಈಡೇರುವ ವರೆಗೆ ಕಲಾಪಗಳನ್ನು ಬಹಿಷ್ಕರಿಸಲು ನಿರ್ಧರಿಸಿದ ಮೇಲೆ ಅಮಾನತುಗೊಂಡಿದ್ದ ಎಂಟು ರಾಜ್ಯಸಭಾ ಸದಸ್ಯರು ತಮ್ಮ ಧರಣಿಯನ್ನು ಹಿಂತೆಗೆದುಕೊಂಡರು.

ಈ ಮೂರು ಬೇಡಿಕೆಗಳು:

1. ಎಂಟು ಸಂಸದರ ಮೇಲಿನ ಅಮಾನತ್ತು ಶಿಕ್ಷೆಯನ್ನು ರದ್ದುಗೊಳಿಸಬೇಕು;
2. ರೈತರ ಬೆಳೆಗಳಿಗೆ ಸರ್ಕಾರ ಕನಿಷ್ಠ ಬೆಂಬಲ ಬೆಲೆಯನ್ನು ನಿಗದಿಗೊಳಿಸಬೇಕು, ವರ್ತಕರಾಗಲೀ, ಸಂಸ್ಥೆಗಳಾಗಲೀ ಇದಕ್ಕಿಂತ ಕಡಿಮೆ ದರದಲ್ಲಿ ರೈತರಿಂದ ಖರೀದಿಸುವಂತಿಲ್ಲ ಎಂಬ ಮಸೂದೆಯನ್ನು ತರಬೇಕು.
3. ಎಂ.ಎಸ್. ಸ್ವಾಮಿನಾಥನ್ ರವರ ಸಮಿತಿ ಶಿಫಾರಸು ಮಾಡಿದ ಬೆಂಬಲ ಬೆಲೆಯ ಖಾತ್ರಿಯನ್ನು ಸರಕಾರ ನೀಡಬೇಕು. ಬೆಂಬಲ ಬೆಲೆಗಿಂತ ಕಡಿಮೆ ದರದಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ಮತ್ತು ಆಹಾರ ನಿಗಮ (ಎಫ್‌ಸಿಐ) ರೈತರಿಂದ ಖರೀದಿಸಬಾರದು.

ಎಲ್ಲ ರೈತರಿಗೆ ಕನಿಷ್ಟ ಬೆಂಬಲ ಬೆಲೆ ನೀಡಲಾಗುವುದು ಎಂದು ಪ್ರಧಾನ ಮಂತ್ರಿಗಳು ಈಗ ಹೇಳಿದ್ದಾರೆ. ಆದರೆ ಅದನ್ನು ಶಾಸನಬದ್ಧಗೊಳಿಸುವ ಬಗ್ಗೆ ಏನೂ ಹೇಳಿಲ್ಲ.



ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ರಾಜ್ಯಸಭಾ ಸದಸ್ಯರಾಗಿದ್ದಾಗ 15 ಜೂನ್ 2017ರಂದು ಪ್ರಧಾನ ಮಂತ್ರಿಗಳಿಗೆ ಒಂದು ಪತ್ರ ಬರೆದು ರೈತರಿಗೆ ಕನಿಷ್ಟ ಬೆಂಬಲ ಬೆಲೆಯಲ್ಲಿ ಮಾರುವ ಹಕ್ಕನ್ನು ಕೊಡುವುದರೊಂದಿಗೆ, ಕೃಷಿ ಖರ್ಚುಗಳು ಮತ್ತು ಬೆಲೆಗಳು ಆಯೋಗ (ಸಿ.ಎ.ಸಿ.ಪಿ.) ನಿರ್ಧರಿಸಿರುವ ಸಮಗ್ರ ಉತ್ಪಾದನಾ ವೆಚ್ಚಗಳ ಮೇಲೆ ಕನಿಷ್ಟ 50 ಶೇ. ಸೇರಿಸಿರುವ ಕನಿಷ್ಟ ಬೆಂಬಲ ಬೆಲೆಗಳನ್ನು ಪ್ರತಿವರ್ಷ ಪರಾಮರ್ಶಿಸುವ ಖಾತ್ರಿಯನ್ನು ಕೊಡುವ ಒಂದು ಶಾಸನವನ್ನು ತರಬೇಕು ಎಂದು ಆಗ್ರಹಿಸಿದ್ದರು ಎಂಬುದನ್ನೂ ಇಲ್ಲಿ ನೆನಪಿಸಿಕೊಳ್ಳಬೇಕು.

ಎಂಟು ಸಂಸತ್ ಸದಸ್ಯರು ಕ್ಷಮೆ ಕೋರಿದರೆ ಅವರ ಅಮಾನತನ್ನು ವಾಪಾಸು ತೆಗೆದುಕೊಳ್ಳುವ ಬಗ್ಗೆ ಕೇಂದ್ರ ಸರಕಾರ ಯೋಚಿಸುವುದಾಗಿ ಮಂತ್ರಿ ರವಿಶಂಕರ ಪ್ರಸಾದ್ ಹೇಳಿದ್ದಾರೆಂದು ವರದಿಯಾಗಿದೆ. ಅಂದರೆ ಅಮಾನತನ್ನು ನಿರ್ಧರಿಸಿದ್ದು ರಾಜ್ಯಸಭೆಯ ಸಭಾಪತಿಗಳು ಮತ್ತು ಉಪಸಭಾಪತಿಗಳಲ್ಲವೇ, ಸರಕಾರ ಮೊದಲೇ ನಿರ್ಧರಿಸಿತ್ತೇ ಎಂದು ಒಬ್ಬ ಪತ್ರಕರ್ತರು ಪ್ರಶ್ನಿಸಿದ್ದಾರೆ. ಕ್ಷಮೆ ಕೇಳುವ ಪ್ರಶ್ನೆಯೇ ಇಲ್ಲ ಎಂದು ಎಳಮಾರಂ ಕರೀಮ್ ಹೇಳಿದ್ದಾರೆ.

ಎಂಎಸ್‌ಪಿ ಎಂಬೊಂದು ತಮಾಷೆ–ಕನಿಷ್ಟ ಏರಿಕೆ, ಗರಿಷ್ಟ ಸದ್ದು

ಕೃಷಿ ಮಸೂದೆಗಳ ಬಗ್ಗೆ, ವ್ಯಾಪಕ ವಿರೋಧಗಳಿಂದ, ಅದರಲ್ಲೂ ಅದರಲ್ಲೂ ಕನಿಷ್ಟ ಬೆಂಬಲ ಬೆಲೆ(ಎಂಎಸ್‌ಪಿ)ಯ ಬಗ್ಗೆ ವ್ಯಾಪಕ ಆತಂಕದಿಂದ ಕುಪಿತಗೊಂಡ ಮೋದಿ ಸರಕಾರ ಸಾಮಾನ್ಯವಾಗಿ ಪ್ರಕಟಿಸಬೇಕಾಗಿದ್ದ ಹಿಂಗಾರು ಬೆಳೆಗಳ ಕನಿಷ್ಟ ಬೆಂಬಲ ಬೆಲೆಯನ್ನು ಇದೇ ಸಂದರ್ಭದಲ್ಲಿ ಪ್ರಕಟಿಸಿ ರೈತರ ಆಕ್ರೋಶವನ್ನು ತಣ್ಣಗಾಗಿಸಬಹುದು, ಇಲ್ಲವೇ ಗಮನವನ್ನು ಬೇರೆಡೆಗಾದರೂ ತಿರುಗಿಸಬಹುದು ಎಂದು ಭಾವಿಸಿತು. 'ಉನ್ನತ ಎಂಎಸ್‌ಪಿ' ರೈತರನ್ನು ಸಬಲೀಕರಿಸುತ್ತವೆ, ಅವರ ವರಮಾನಗಳನ್ನು ದ್ವಿಗುಣಗೊಳಿಸಲು ನೆರವಾಗುತ್ತವೆ ಎಂದು ಸ್ವತಃ ಪ್ರಧಾನ ಮಂತ್ರಿಗಳೇ ಹೇಳಿದರು.

ಆದರೆ ಪ್ರಕಟಿಸಿರುವ ಬೆಲೆಗಳು ಅವರ ಈ ಮಾತುಗಳನ್ನೇ ಹುಸಿಗೊಳಿಸಿವೆ, ರೈತರ ಆಕ್ರೋಶವನ್ನು ಇನ್ನೂ ಹೆಚ್ಚಿಸಿವೆ. ಏಕೆಂದರೆ ಪ್ರಮುಖ ಹಿಂಗಾರು ಬೆಳೆಯಾದ ಗೋಧಿಯ ಎಂಎಸ್‌ಪಿ ಕ್ವಿಂಟಾಲ್‌ಗೆ 1925 ರಿಂದ 1975 ಕ್ಕೆ ಏರಿಸಲಾಗಿದೆ. ಅಂದರೆ ಕೆ.ಜಿ.ಗೆ ಕೇವಲ 50 ಪೈಸೆ ಅಥವ ಕೇವಲ 2.6ಶೇ. ಇದು ಮೋದಿ ಆಡಳಿತ ಕಾಲಕ್ಕೆ ಹೋಲಿಸಿದರೂ ಅತ್ಯಂತ ಕಡಿಮೆ ಏರಿಕೆ. ಕಳೆದ ವರ್ಷ 4.6ಶೇ. ಏರಿತ್ತು.

ಡಾ. ಸ್ವಾಮಿನಾಥನ್ ಸಮಿತಿಯ ಶಿಫಾರಸಿನ ಪ್ರಕಾರ ಎಂಎಸ್‌ಪಿ ನಿರ್ಧರಿಸಲಾಗುತ್ತದೆ ಎಂಬ ಅವರ ಆರು ವರ್ಷಗಳ ಹಿಂದಿನ ಆಶ್ವಾಸನೆಯೂ ಈ ಎಂಎಸ್‌ಪಿ ಪ್ರಕಟಣೆಯಲ್ಲಿ ಮತ್ತೆ ಹುಸಿಯಾಗಿದೆ. ಕೃಷಿ ಖರ್ಚುಗಳು ಮತ್ತು ಬೆಲೆಗಳು ಆಯೋಗ (ಸಿ.ಎ.ಸಿ.ಪಿ.) ನಿರ್ಧರಿಸಿರುವ ಸಮಗ್ರ ಉತ್ಪಾದನಾ ವೆಚ್ಚ(ಸಿ2)ಮೇಲೆ 50% ಸೇರಿಸಬೇಕೆಂಬ ಸೂತ್ರದಪ್ರಕಾರ (ಸಿ2+50%) ಗೋಧಿಗೆ ಕನಿಷ್ಟ ಬೆಂಬಲ ರೂ.2200.50 ಆಗಬೇಕಿತ್ತು. ಆದರೆ ಕೊಟ್ಟಿರುವುದು ರೂ.1975, ಅಂದರೆ ಇದರಲ್ಲೂ 225.50ರೂ, ಅಥವ ಸುಮಾರು 10ಶೇ.ನಷ್ಟ! ಸಬಲೀಕರಣದ ಅಮೋಘ ವಿಧಾನ. ಈ ಕೋಷ್ಟಕ ನೋಡಿ–


ಬೆಳೆ	ಸಿ2 ವೆಚ್ಚ	ಸಿ2+50%	ಪ್ರಕಟಿತಎಂಎಸ್‌ಪಿ	ರೈತರಿಗೆ ನಷ್ಟ
ಗೋಧಿ	ರೂ.1467	2200.50	1975	225.50
ಬಾರ್ಲಿ	ರೂ.1404	2106	1600	506
ಕಡಲೆ	ರೂ.4012	6018	5100	918
ಅವರೆ	ರೂ.4204	6306	5100	1206
ಸಾಸಿವೆ	ರೂ.3470	5205	4650	555
ಸೂರ್ಯಕಾಂತಿ	ರೂ.4908	7362	5327	2035




ಮತ್ತೊಮ್ಮೆ 'ಚಾರಿತ್ರಿಕ'! – ಸತೀಶ ಆಚಾರ್ಯ, ಗಲ್ಫ್ ನ್ಯೂಸ್

ಮತ್ತೆ ಅದೇ 'ಅಚ್ಛೇ ದಿನ್'
ಮತ್ತೆ ಅದೇ 'ಚಾರಿತ್ರಿಕ' ಕ್ರಮ


2014–19ರ ಅಚ್ಛೇ ದಿನ್ ಕಾಲದ ನೋಟುರದ್ದತಿ ಮತ್ತು ಜಿಎಸ್‌ಟಿ ನಂತರ 2019–24ರ 'ನ್ಯೂ ಇಂಡಿಯ' ಕಾಲದ ಮತ್ತೊಂದು 'ಚಾರಿತ್ರಿಕ' ಹೆಜ್ಜೆ ಈ ವಾರ ದೇಶ ಕಂಡಿತು– ಕೊವಿಡ್ ಕಾಲದಲ್ಲಿ ಹೊರಡಿಸಿದ್ದ ಮೂರು ಕೃಷಿ ಸುಗ್ರೀವಾಜ್ಞೆಗಳು ಈಗ ಕಾನೂನುಗಳಾಗಿವೆ. ವ್ಯಂಗ್ಯಚಿತ್ರಕಾರರ ಕಂಗಳಲ್ಲಿ ಈ 'ಚಾರಿತ್ರಿಕ' ಹೆಜ್ಜೆಯ ವಿವಿಧ ಆಯಾಮಗಳು



ಮಂಜು ಗಂಗೋತ್ರಿ /ಫೇಸ್‌ಬುಕ್



ಪಿ.ಮಹಮ್ಮದ್, ಆಂದೋಲನ



ದಿನೇಶ್ ಕುಕ್ಕುಜಡ್ಕ, ಅವಧಿ ಕಾರ್ಟೂನ್ ಕಾರ್ನರ್



ರೈತನಿಗೆ ತನ್ನ ಬೆಳೆ ಮಾರಲು ಎಷ್ಟೊಂದು ಆಯ್ಕೆಗಳು–ಸುಭಾನಿ, ಡೆಕ್ಕನ್ ಕ್ರಾನಿಕಲ್

ಆರಾಳು ಬಾವಿಯಿಂದ ಮೂರಾಳು ಹಗ್ಗದಲ್ಲಿ ನೀರೆಳೆಯುವ ಪರಮ ಅಸಮರ್ಥ ಸರ್ಕಾರ

ಕುರುದು ಕಾಂಚಾಣ

ಅರ್ಥವ್ಯವಸ್ಥೆಯು ಒಂದು ಆಳವಾದ ಮತ್ತು ದೀರ್ಘಕಾಲೀನ ಆರ್ಥಿಕ ಹಿಂಜರಿತಕ್ಕೆ ಜಾರುವುದನ್ನು ತಡೆಯುವ ಸಲುವಾಗಿ ಸರ್ಕಾರವು ತನ್ನ ಖರ್ಚು ವೆಚ್ಚಗಳನ್ನು ಹೆಚ್ಚಿಸಿಕೊಳ್ಳಲೇ ಬೇಕು ಎಂಬ ಬಗ್ಗೆ, ಸೈದ್ಧಾಂತಿಕ ಭಿನ್ನಾಭಿಪ್ರಾಯಗಳ ಹೊರತಾಗಿಯೂ, ಅರ್ಥಶಾಸ್ತ್ರಜ್ಞರ ನಡುವೆ ಒಂದು ವಿಶಾಲ ಸಹಮತವಿದ್ದರೂ ಕೂಡ, ಮೋದಿ ಸರ್ಕಾರವು ಈ ನಿಟ್ಟಿನಲ್ಲಿ ತೋರಿಸುತ್ತಿರುವ ಸಂಪೂರ್ಣ ನಿರ್ಲಕ್ಷ್ಯವನ್ನು ಮತ್ತು ಜನರು ಎದುರಿಸುತ್ತಿರುವ ಬೃಹತ್ ನಿರುದ್ಯೋಗದ ಬಗ್ಗೆ ಅದರ ನಿಷ್ಕಾಳಜಿಯನ್ನು ಅರ್ಥಮಾಡಿ ಕೊಳ್ಳಬೇಕಾದರೆ, ಮೋದಿಯವರ ಮನಸ್ಥಿತಿಯತ್ತ ತಿರುಗಬೇಕಾಗುತ್ತದೆ –ಅದು ಬಂಡವಾಳಶಾಹಿಗಳ ಬಗ್ಗೆ ಪರಮ ಭೋಳೇತನದೊಂದಿಗೆ, ಹಿಂದುತ್ವದ ಮೂಲಕ ಚುನಾವಣೆ ಗೆಲ್ಲುವ ಪರಮ ಆತ್ಮವಿಶ್ವಾಸ ಬೆರೆತುಕೊಂಡಿರುವ ಮನಸ್ಥಿತಿ.

ಪ್ರೊ.ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ಹಿಂದಿನ ವರ್ಷದ ಮೊದಲ ತ್ರೈಮಾಸಿಕಕ್ಕೆ ಹೋಲಿಸಿದರೆ 2020–21ರ ಮೊದಲ ತ್ರೈಮಾಸಿಕದಲ್ಲಿ ಜಿಡಿಪಿಯಲ್ಲಿ ಶೇ.24ರಷ್ಟು ಕುಸಿತವಾಗಿದೆ. ಸಾರ್ವಜನಿಕ ಆಡಳಿತ, ರಕ್ಷಣೆ ಮತ್ತು ಇತರ ಸಾರ್ವಜನಿಕ ಸೇವೆಗಳ ವೆಚ್ಚಗಳು ಶೇ.10.3ರಷ್ಟು ಇಳಿದಿವೆ ಎಂಬ ಅಂಶವು ಈ ಕುಸಿತದಲ್ಲಿ ಎದ್ದು ಕಾಣುತ್ತದೆ. ಜಿಡಿಪಿಯ ಅಂದಾಜಿನಲ್ಲಿ ಈ ಅಂಕಿ–ಅಂಶಗಳ ಪಾತ್ರವು ಗಣನೀಯವೇ. ಆದರೂ, ಈ ವಲಯವು "ಉತ್ಪಾದನೆ" ಯನ್ನು ಸೂಚಿಸುವುದಿಲ್ಲ. ಬದಲಿಗೆ ಸರ್ಕಾರದ ಖರ್ಚು ವೆಚ್ಚಗಳ ಸ್ಥಿತಿ–ಗತಿಗಳನ್ನು ತಿಳಿಸುತ್ತದೆ. ಜಿಡಿಪಿಗೆ ಪರಿಗಣನೆಯಾಗುವ ಈ ಮೂಲ ಅಂಶದಲ್ಲಿ ಆಗಿರುವ ಕುಸಿತವು ಎರಡು ಕಾರಣಗಳಿಂದಾಗಿ ಆಶ್ಚರ್ಯಕರವಾಗಿದೆ: ಮೊದಲನೆಯದಾಗಿ, ಸರ್ಕಾರದ ವೆಚ್ಚಗಳ ಕುಸಿತವು ಜಿಡಿಪಿಯನ್ನು ಹಿಗ್ಗಿಸುವುದರ ಬದಲು ಕುಸಿತಕ್ಕೆ ಕಾರಣವಾಗಿವೆ. ಎರಡನೆಯದಾಗಿ, ಸಾಂಕ್ರಾಮಿಕ ರೋಗದ ಕಾರಣದಿಂದ ಉಂಟಾದ ಲಾಕ್‌ಡೌನ್ ಸಮಯದಲ್ಲಿ, ಆರೋಗ್ಯ ಸೇವೆಗಳಿಗೆ ಸರ್ಕಾರವು ಉನ್ನತ ಮಟ್ಟದ ವೆಚ್ಚಗಳನ್ನು ಕೈಗೊಳ್ಳುವ ನಿರೀಕ್ಷೆ ಇತ್ತು. ಬದಲಿಗೆ, ಸರ್ಕಾರದ ವೆಚ್ಚಗಳು ಇಳಿಕೆಯಾಗಿವೆ. ಒಟ್ಟಾರೆಯಾಗಿ ನೋಡಿದರೂ ಸರ್ಕಾರಿ ವೆಚ್ಚಗಳು ಇಳಿದಿವೆ.

ಲಾಕ್‌ಡೌನ್ ಇದ್ದ ಅವಧಿಯಲ್ಲಿ ಉತ್ಪಾದನಾ ಚಟುವಟಿಕೆಗಳು ಕುಗ್ಗುತ್ತವೆ. ಈ ಕಾರಣದಿಂದಾಗಿಯೇ, ಸರ್ಕಾರವು ತನ್ನ ವೆಚ್ಚಗಳನ್ನು ಹೆಚ್ಚಿಸಬೇಕಾಗುತ್ತದೆ. ಸರ್ಕಾರದ ಖರ್ಚುಗಳ ಹೆಚ್ಚಳದಿಂದಾಗಿ, ಆರ್ಥಿಕ ಚಟುವಟಿಕೆಗಳ ಕುಗ್ಗುವಿಕೆಯ ಕಡಿಮೆಯಾಗುತ್ತದೆ. ಜನರ ಕೊಳ್ಳುವ ಶಕ್ತಿಯು ಹೆಚ್ಚುತ್ತದೆ. ಹಾಗಾಗಿ, ಅನೇಕರು ಸಾಲಕ್ಕೆ ಒಳಗಾಗದೆ ತಮ್ಮ ಉಪಭೋಗದ ಖರ್ಚುಗಳನ್ನು ನಿಭಾಯಿಸಿಕೊಳ್ಳಬಹುದು. ಸರಕಾರವು ತನ್ನ ವೆಚ್ಚಗಳನ್ನು ಹೆಚ್ಚಿಸದೇ ಇದ್ದರೂ ಸಹ, ಕನಿಷ್ಠ ಪಕ್ಷ ಜಿಡಿಪಿಯ ಕುಗ್ಗುವಿಕೆಯನ್ನು ಮಿತಿಗೊಳಿಸುವ ಸಲುವಾಗಿ ತನ್ನ ಮಾಮೂಲಿ ಖರ್ಚು ವೆಚ್ಚಗಳನ್ನು ಕೈಕೊಳ್ಳಲೇಬೇಕು. ಆದರೆ, ಲಾಕ್‌ಡೌನ್ ಅವಧಿಯಲ್ಲಿ ಸರ್ಕಾರದ ಖರ್ಚು ವೆಚ್ಚಗಳು ಇಳಿದಿವೆ. ಜಿಡಿಪಿಯು ಕುಗ್ಗಿದೆ. ಅಂದರೆ, ಸರ್ಕಾರವು ಏನು ಮಾಡಬೇಕಿತ್ತೋ ಅದಕ್ಕೆ ತದ್ವಿರುದ್ಧವಾಗಿ ನಡೆದುಕೊಂಡಿದೆ.

ಲಾಕ್‌ಡೌನ್ ಅವಧಿಯಲ್ಲಿ ಸರ್ಕಾರದ ಆದಾಯ ಕುಸಿಯುತ್ತದೆ ಎಂಬುದು ನಿಜ. ಆದರೆ, ಆದಾಯವು ಕುಸಿದ ಸಂದರ್ಭದಲ್ಲಿಯೂ ಸಹ, ವಿತ್ತೀಯ ಕೊರತೆ ಹೆಚ್ಚಾಗುತ್ತದೆ ಎಂಬ ಕಾರಣದ ಮೇಲೆ ಸರ್ಕಾರವು ತನ್ನ ವೆಚ್ಚಗಳನ್ನು ಕಡಿಮೆ ಮಾಡಿಕೊಳ್ಳುವುದು ಅತಿರೇಕದ ಪರಮಾವಧಿಯಾಗುತ್ತದೆ. ವಾಸ್ತವವಾಗಿ ಇದು ಅರ್ಥ ವ್ಯವಸ್ಥೆಯ ಚಟುವಟಿಕೆಗಳನ್ನು ಕುಗ್ಗಿಸುತ್ತದೆ ಮತ್ತು ಜನರ ಸಂಕಷ್ಟಗಳನ್ನು ಮತ್ತಷ್ಟು ಹೆಚ್ಚಿಸುತ್ತದೆ. ಆದರೂ, ಮೋದಿ ಸರ್ಕಾರ ಮಾಡಿರುವುದು ಇದನ್ನೇ.

ಅಷ್ಟೇ ಅಲ್ಲ, ಮೊದಿ ಸರಕಾರ ಈ ಪ್ರಮಾದವನ್ನು ಮುಂದುವರೆಸುತ್ತಲೇ ಇದೆ. ಸಂಸತ್ತಿನ ಮುಂಗಾರು ಅಧಿವೇಶದ ಮೊದಲ ದಿನವೇ ಸರ್ಕಾರವು 2.35 ಲಕ್ಷ ಕೋಟಿ ರೂ.ಗಳ ಹೆಚ್ಚುವರಿ ವೆಚ್ಚಗಳ ಬೇಡಿಕೆ ಸಲ್ಲಿಸಿರುವುದರಿಂದ ಕೆಲವರಿಗೆ ಈ ಆರೋಪವು ವಿಚಿತ್ರವಾಗಿ ಕಾಣಬಹುದು. ಆದರೆ, ಈ ಎಣಿಕೆ ತಪ್ಪು. ಏಕೆಂದರೆ, ಈ ಪೂರಕ ಬೇಡಿಕೆಗಳು ಈ ಮೊದಲೇ ಘೋಷಿಸಿದ್ದ ಖರ್ಚು ವೆಚ್ಚಗಳಿಗೆ ಸಂಬಂಧಿಸುತ್ತವೆ. ಕೋವಿಡ್ ಸಂಬಂಧವಾಗಿ ಈ ಮೊದಲು ಘೋಷಿಸಿದ ಈ ಖರ್ಚು ವೆಚ್ಚಗಳು ಜಿಡಿಪಿಯ ಶೇ.1ಕ್ಕಿಂತಲೂ ಕಡಿಮೆ ಎಂಬುದು ನಮಗೆ ತಿಳಿದಿದೆ. ಅನುದಾನದ ಕೊರತೆಯಿಂದ ಸ್ಥಗಿತಗೊಂಡಿರುವ ಉದ್ಯೋಗ ಖಾತ್ರಿ ಯೋಜನೆಯನ್ನು ಈ ಪೂರಕ ಬೇಡಿಕೆಗಳು ಪುನಶ್ಚೇತನಗೊಳಿಸಲಿವೆ ಎಂಬುದು ನಿಜ. ಆದರೆ ಈ ಪುನರುಜ್ಜೀವನವು ಈಗಾಗಲೇ ಕೊಟ್ಟಿರುವ ಭರವಸೆಯನ್ನು ಈಡೇರಿಸುತ್ತದೆಯೇ ವಿನಃ, ಆರ್ಥಿಕ ಚಟುವಟಿಕೆಗಳನ್ನು ವಿಸ್ತರಿಸುವುದಿಲ್ಲ.

ಕೊರೋನಾ ಸಾಂಕ್ರಾಮಿಕದ ಅವಧಿಯಲ್ಲಿ ಜನರಿಗೆ ಪರಿಹಾರ ಒದಗಿಸಲು ಮೋದಿ ಸರ್ಕಾರವು ನಿಗದಿಪಡಿಸಿರುವ ಜಿಡಿಪಿಯ 1% ಮೊತ್ತವು ಜಗತ್ತಿನ ಪ್ರಮುಖ ದೇಶಗಳಿಗೆ ಹೋಲಿಸಿದರೆ, ಅತ್ಯಂತ ಕಡಿಮೆ ಪ್ರಮಾಣದ್ದು. ಅಮೆರಿಕದಲ್ಲಿ ಡೊನಾಲ್ಡ್ ಟ್ರಂಪ್ ಕೂಡ ಜಿಡಿಪಿಯ ಶೇ.10ರಷ್ಟು ಮೊತ್ತದ ಪರಿಹಾರ ಪ್ಯಾಕೇಜ್ ಘೋಷಿಸಿದ್ದಾರೆ. ಜರ್ಮನಿಯಲ್ಲಿ 5%, ಜಪಾನ್‌ನಲ್ಲಿ ಇನ್ನೂ ಹೆಚ್ಚು ಹಣವನ್ನು ನಿಗದಿಪಡಿಸಲಾಗಿದೆ. ಆಹಾರ ದಾಸ್ತಾನು ಸಾಕಷ್ಟು ಇದ್ದರೂ ದೇಶದ ವಿವಿಧ ಭಾಗಗಳಲ್ಲಿ ಹಸಿವಿನಿಂದ ಸಾವುಗಳು ವರದಿಯಾಗುತ್ತಿರುವ ಈ ಹೊತ್ತಿನಲ್ಲಿ ಮೋದಿ ಸರಕಾರದ ಜಿಪುಣತನವು ದಿಗ್ಭ್ರಮೆಗೊಳಿಸುವಂತಿದೆ.

ಮೋದಿ ಸರ್ಕಾರವು ನಿಗದಿಪಡಿಸಿರುವ ಜಿಡಿಪಿಯ 1% ಮೊತ್ತದ ಪರಿಹಾರ ಪ್ಯಾಕೇಜ್ ಏನೇನೂ ಸಾಲದು. ಆದ್ದರಿಂದ ಪ್ಯಾಕೇಜ್ ಮೊತ್ತವನ್ನು ಹೆಚ್ಚಿಸಬೇಕು ಎಂಬ ಅಂಶದ ಬಗ್ಗೆ, ಸೈದ್ಧಾಂತಿಕ ಭಿನ್ನಾಭಿಪ್ರಾಯಗಳ ಹೊರತಾಗಿಯೂ, ದೇಶದ ಅರ್ಥಶಾಸ್ತ್ರಜ್ಞರ ನಡುವೆ ಮೂಡಿರುವ ಸಹಮತವು ಬಹುತೇಕ ಸಾರ್ವತ್ರಿಕವಾಗಿದೆ. ವಾಸ್ತವವಾಗಿ, ಇಂತಹ ವಿಷಯದಲ್ಲಿ ಆರ್ಥಿಕ ತಜ್ಞರ ನಡುವೆ ಸಹಮತ ಇರುವುದು ಬಹಳ ಅಪರೂಪವೇ. ನೋಟು ರದ್ದತಿಯ ವಿರುದ್ಧವೂ ಅವರ ನಡುವೆ ಅಷ್ಟೇ ವಿಶಾಲವಾದ ಸಹಮತವಿತ್ತು ಎಂಬುದು ನಿಜ. ಆದರೆ, ಅದು ಒಂದು ನಿರ್ದಿಷ್ಟ ಕ್ರಮವಾಗಿತ್ತು ಮತ್ತು ಅದು ವಿಚಾರಹೀನತೆಯಿಂದ ಕೂಡಿತ್ತು ಎಂಬುದರ ಬಗ್ಗೆ ಸಂದೇಹವೇ ಇರಲಿಲ್ಲ. ಈ ಕ್ರಮವು ಸರ್ಕಾರದ ನೀತಿ ಎತ್ತ ಸಾಗುತ್ತಿದೆ ಎಂಬುದರ ಸೂಚನೆಯೂ ಆಗಿರಲಿಲ್ಲ.

ಪ್ರಸಕ್ತ ಪರಿಹಾರ ಪ್ಯಾಕೇಜ್ ಬಗ್ಗೆ ಅರ್ಥಶಾಸ್ತ್ರಜ್ಞರ ನಡುವೆ ಇರುವ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳು ಎರಡು ಅಂಶಗಳಿಗೆ ಸಂಬಂಧಿಸಿವೆ: ಹೆಚ್ಚುವರಿ ವೆಚ್ಚಗಳನ್ನು ಯಾವ ಯಾವ ವಲಯಗಳಲ್ಲಿ ಕೈಗೊಳ್ಳಬೇಕು; ಮತ್ತು ಈ ಕಾರ್ಯಕ್ಕೆ ತಗಲುವ ಹೆಚ್ಚುವರಿ ವೆಚ್ಚವನ್ನು ಹೇಗೆ ಹೊಂದಿಸಿಕೊಳ್ಳಬೇಕು. ಈ ಎರಡರಲ್ಲಿ ಮೊದಲನೆಯ ಅಂಶದ ಬಗ್ಗೆ, ಜನರ ಆರೋಗ್ಯ ಪಾಲನೆ, ಸಾಮಾಜಿಕ ಮೂಲಸೌಕರ್ಯಗಳ ಮೇಲೆ ಬಂಡವಾಳ ಹೂಡಿಕೆಗಳ ಜೊತೆಯಲ್ಲಿ ಒಂದಿಷ್ಟು ನಿರ್ದಿಷ್ಟ ಹಣವನ್ನು ಆದಾಯ ತೆರಿಗೆಯ ವ್ಯಾಪ್ತಿಗೆ ಸೇರದ ಪ್ರತಿ ಕುಟುಂಬಕ್ಕೂ ಸಾರ್ವತ್ರಿಕವಾಗಿ ನಗದು ವರ್ಗಾವಣೆ ಮಾಡಬೇಕು ಎಂದು ಎಡಪಂಥೀಯರು ಹೇಳುತ್ತಾರೆ. ಆದರೆ, ಸಂಪ್ರದಾಯವಾದಿ ಅರ್ಥಶಾಸ್ತ್ರಜ್ಞರು ಕೇವಲ ಭೌತಿಕ ಮೂಲಸೌಕರ್ಯಗಳ ಮೇಲೆ ಬಂಡವಾಳ ಹೂಡಿಕೆಗೆ ಮಾತ್ರ ಒತ್ತು ನೀಡುತ್ತಾರೆ.

ಕೊರತೆ ಬೀಳುವ ಹಣವನ್ನು ಹೇಗೆ ಹೊಂದಿಸಿಕೊಳ್ಳಬೇಕು ಎಂಬ ಅಂಶಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ತಕ್ಷಣವೇ ಅದನ್ನು ವಿತ್ತೀಯ ಕೊರತೆಯ ಮೂಲಕವೇ ಹೊಂದಿಸಿಕೊಳ್ಳಬೇಕು. ಅದಕ್ಕಾಗಿ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದಿಂದ ಸಾಲ ಪಡೆಯಬೇಕಾಗುತ್ತದೆ. ಕೇಂದ್ರ ಸರ್ಕಾರವು ಈ ವರ್ಷದ ಆರಂಭದಲ್ಲಿ ಮಂಡಿಸಿದ ಬಜೆಟ್‌ನಲ್ಲಿ ನಿಗದಿಪಡಿಸಿದ್ದಕ್ಕಿಂತಲೂ ಅಧಿಕವಾಗಿ 10 ಲಕ್ಷ ಕೋಟಿ ರೂಗಳನ್ನು ಖರ್ಚು ಮಾಡಬೇಕು. ಅಂದರೆ, ಬಜೆಟ್‌ನಲ್ಲಿ ಇರಿಸಿಕೊಂಡಿದ್ದ ಶೇ.3.5 ವಿತ್ತೀಯ ಕೊರತೆಯನ್ನು ಗುರಿಯನ್ನು ಜಿಡಿಪಿಯ ಶೇ.9ಕ್ಕೆ ಏರಿಸಿಕೊಳ್ಳಬೇಕಾಗುತ್ತದೆ ಎಂಬುದು ಹಲವು ಆರ್ಥಿಕ ತಜ್ಞರ ಅಭಿಪ್ರಾಯ. ಅದೇನೊ ಸರಿಯೇ. ಆದರೆ, ಅರ್ಥವ್ಯವಸ್ಥೆಯು ಚೇತರಿಸಿಕೊಳ್ಳುತ್ತಿದ್ದಂತೆಯೇ, ವಿತ್ತೀಯ ಕೊರತೆಯನ್ನು ಸರಿದೂಗಿಸುವ ಸಲುವಾಗಿ ಹೆಚ್ಚುವರಿ ಸಂಪನ್ಮೂಲಗಳನ್ನು ಕ್ರೋಡೀಕರಿಸುವ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಈ ನಿಟ್ಟಿನಲ್ಲಿ, ಭಾರತದಲ್ಲಿ ಇನ್ನೂ ಜಾರಿಗೊಳಿಸದ ಸಂಪತ್ತಿನ ತೆರಿಗೆಯನ್ನು ಹೇರುವಂತೆ ಎಡಪಂಥೀಯರು ಒತ್ತಿ ಹೇಳುತ್ತಾರೆ. ಆದರೆ, ಸಂಪ್ರದಾಯವಾದಿ ಅರ್ಥಶಾಸ್ತ್ರಜ್ಞರು ಸಾರ್ವಜನಿಕ ಉದ್ದಿಮೆಗಳ ಒಡೆತನದ ಭೂಮಿಯೂ ಸೇರಿದಂತೆ ಸಾರ್ವಜನಿಕ ವಲಯದ ಆಸ್ತಿಗಳನ್ನು ಮಾರಾಟ ಮಾಡುವ ಬಗ್ಗೆ ಮಾತನಾಡುತ್ತಾರೆ.

ಈ ಎರಡೂ ನಿಲುವುಗಳ ನಡುವೆ ಒಂದು ಮೂಲಭೂತ ವ್ಯತ್ಯಾಸವಿದೆ. ಈ ವ್ಯತ್ಯಾಸವನ್ನು ಬಹಳ ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕು. ಒಂದು ವಿತ್ತೀಯ ಕೊರತೆ ಉಂಟಾದರೆ ಸರ್ಕಾರವು ಅವಶ್ಯವಾಗಿ ಸಾಲ ಮಾಡಲೇಬೇಕಾಗುತ್ತದೆ (ವಿದೇಶಗಳಿಂದ ಪಡೆಯುವ ಸಾಲಗಳು ಹೆಚ್ಚುವುದಿಲ್ಲ ಎಂದು ನಾವು ಭಾವಿಸುತ್ತೇವೆ) ಸಮಾಜದ ಯಾವ ವರ್ಗ ಉಳಿತಾಯ ಮಾಡುತ್ತದೆಯೋ ಅವರಿಂದ ಸರ್ಕಾರ ಸಾಲ ಎತ್ತುತ್ತದೆ. ಹಾಗಾಗಿ, ವಿತ್ತೀಯ ಕೊರತೆಯು ಆ ವರ್ಗದ, ಅಂದರೆ ಶ್ರೀಮಂತರ ಸಂಪತ್ತನ್ನು ಹೆಚ್ಚಿಸುತ್ತದೆ. ಅವರ ಸಂಪತ್ತಿನ ಮೇಲೆ ತೆರಿಗೆ ಹೇರುವ ಮೂಲಕ ಈ ಹೆಚ್ಚಾದ ವಿತ್ತೀಯ ಕೊರತೆಯನ್ನು ನೀಗಿಸಿಕೊಳ್ಳಬಹುದು. ಈ ರೀತಿಯ ಕ್ರಮ ಕೈಗೊಂಡ ಪರಿಸ್ಥಿತಿಯಲ್ಲಿ, ತನ್ನ ವಿತ್ತೀಯ ಕೊರತೆಯಿಂದಾಗಿ ಸರ್ಕಾರವು ಸಾಲ ಎತ್ತುವ ಮೊದಲು ಖಾಸಗಿ ಸಂಪತ್ತು ಎಷ್ಟಿತ್ತೋ ಅದೇ ಮಟ್ಟದಲ್ಲಿ ಉಳಿಯುತ್ತದೆ. ಅಂದರೆ, ಸಂಪತ್ತು ತೆರಿಗೆಗಳು ಹಾಲೀ ಸಂಪತ್ತಿನ ಅಸಮಾನತೆಗಳನ್ನು ಕಡಿಮೆ ಮಾಡುವುದಿಲ್ಲ. ಬದಲಿಗೆ, ಒಂದು ದೊಡ್ಡ ಪ್ರಮಾಣದ ವಿತ್ತೀಯ ಕೊರತೆಯಿಂದಾಗಿ ಅಂತಹ ಅಸಮಾನತೆಗಳು ಮತ್ತಷ್ಟು ಉಲ್ಬಣಗೊಳ್ಳುವುದನ್ನು ತಡೆಯುತ್ತದೆ. ಹಾಗಾಗಿ, ಎಡಪಂಥೀಯರ ಪ್ರಸ್ತಾಪದ ಪ್ರಕಾರ ಸರ್ಕಾರವು ತನ್ನ ಖರ್ಚು ವೆಚ್ಚಗಳನ್ನು ಹೆಚ್ಚಿಸಿಕೊಂಡರೆ ಮತ್ತು ಅದನ್ನು ಸರಿದೂಗಿಸಿಕೊಳ್ಳಲು ಶ್ರೀಮಂತರ ಸಂಪತ್ತಿನ ಮೇಲೆ ತೆರಿಗೆ ವಿಧಿಸಿದರೆ, ಸಮಾಜದಲ್ಲಿ ಸಂಪತ್ತಿನ ಅಸಮಾನತೆಗಳು ಹೆಚ್ಚುವುದಿಲ್ಲ.

ಎಡಪಂಥೀಯರ ಈ ಪ್ರಸ್ತಾಪಕ್ಕೆ ಪ್ರತಿಯಾಗಿ, ಸಂಪ್ರದಾಯವಾದಿಗಳ ಪ್ರಸ್ತಾಪವು, ಉದಾಹರಣೆಯಾಗಿ ಹೇಳುವುದಾದರೆ ಆರ್‌ಬಿಐನ ಮಾಜಿ ಗವರ್ನರ್ ಡಾ.ರಘುರಾಮ್ ರಾಜನ್ ಅವರು ಮಂಡಿಸಿದ ಪ್ರಸ್ತಾಪವು ಒಂದು ದೊಡ್ಡ ಪ್ರಮಾಣದ ವಿತ್ತೀಯ ಕೊರತೆಯಿಂದ ಹೆಚ್ಚುವ ಸಂಪತ್ತಿನ ಅಸಮಾನತೆಗಳನ್ನು ತೊಡೆದು ಹಾಕಲಾರದು. ಅವರು ಹೇಳುವಂತೆ ಸರ್ಕಾರಿ ಸ್ವಾಮ್ಯದ ಬ್ಯಾಂಕುಗಳ ಅಥವಾ ಸಾರ್ವಜನಿಕ ವಲಯದ ಉದ್ದಿಮೆಗಳ ಶೇರುಗಳನ್ನು ಮಾರಿದಾಗ ಶ್ರೀಮಂತರ ಕೈಗಳಲ್ಲಿ ಸಂಪತ್ತಿನ ಗಾತ್ರ ಹೆಚ್ಚುತ್ತದೆ. ಹಾಗಾಗಿ, ಸಂಪತ್ತಿನ ಹಾಲೀ ಅಸಮಾನತೆಗಳು ಹೆಚ್ಚುವ ಅಂಶವನ್ನು ಅಲ್ಲಗಳೆಯುವಂತಿಲ್ಲ.

ವಿತ್ತೀಯ ಕೊರತೆಯ ಬಗ್ಗೆ ಇರುವ ಇಂತಹ ಮೂಲಭೂತ ವ್ಯತ್ಯಾಸಗಳ ಹೊರತಾಗಿಯೂ, ಅರ್ಥವ್ಯವಸ್ಥೆಯು ಒಂದು ಆಳವಾದ ಮತ್ತು ದೀರ್ಘಕಾಲೀನ ಆರ್ಥಿಕ ಹಿಂಜರಿತಕ್ಕೆ ಜಾರುವುದನ್ನು ತಡೆಯುವ ಸಲುವಾಗಿ ಸರ್ಕಾರವು ತನ್ನ ಖರ್ಚು ವೆಚ್ಚಗಳನ್ನು ಹೆಚ್ಚಿಸಿಕೊಳ್ಳುವ ಅವಶ್ಯಕತೆಯ ಬಗ್ಗೆ, ಸೈದ್ಧಾಂತಿಕ ಭಿನ್ನಾಭಿಪ್ರಾಯಗಳ ಹೊರತಾಗಿಯೂ, ಅರ್ಥಶಾಸ್ತ್ರಜ್ಞರ ನಡುವೆ ಒಂದು ವಿಶಾಲ ಸಹಮತವಿದೆ. ಆದರೆ, ಈ ಬಗ್ಗೆ ಸರ್ಕಾರವು ಸ್ವಲ್ಪವೂ ಮಿಸುಕಾಡದೆ ನಿಶ್ಚಲವಾಗಿ ಉಳಿದಿರಲು ಕಾರಣಗಳೇನು ಎಂಬುದು ಮಾತ್ರ ಸ್ಪಷ್ಟವಿಲ್ಲ. ಪರಿಸ್ಥಿತಿಯ ಗಂಭೀರತೆಯ ಬಗ್ಗೆ ಎಚ್ಚರಗೊಳ್ಳಬೇಕು ಎಂದು ರಘುರಾಮ್ ರಾಜನ್ ಸರ್ಕಾರದ ಉನ್ನತಾಧಿಕಾರಿಗಳಿಗೆ ಮನವಿ ಮಾಡಿದ್ದಾರೆ. ಆದರೆ, ಮೋದಿ ಆಡಳಿತದಲ್ಲಿ ನೀತಿಗಳನ್ನು ನಿರ್ಧರಿಸುವ ಪಾತ್ರ ವಹಿಸುವ ಪರಿಸ್ಥಿತಿ ಉನ್ನತಾಧಿಕಾರಿಗಳಿಗೂ ಇಲ್ಲ. ಪ್ರಧಾನ ಮಂತ್ರಿಗಳು ಮತ್ತು ಅವರ ಆಪ್ತ ಕೂಟವೇ ಆರ್ಥಿಕ ನೀತಿಯೂ ಸೇರಿದಂತೆ ಪ್ರತಿಯೊಂದು ವಿಷಯವನ್ನೂ ನಿರ್ಧರಿಸುತ್ತಾರೆ. ಅರ್ಥವ್ಯವಸ್ಥೆಗೆ ಎದುರಾಗಲಿರುವ ವಿಪತ್ತಿನ ಬಗ್ಗೆ ಸರಕಾರವು ತೋರಿಸುತ್ತಿರುವ ಸಂಪೂರ್ಣ ನಿರ್ಲಕ್ಷ್ಯವನ್ನು ವಿವರಿಸಬೇಕಾದರೆ, ಜನರು ಎದುರಿಸುತ್ತಿರುವ ಬೃಹತ್ ನಿರುದ್ಯೋಗದ ಬಗ್ಗೆ (ಕೆಲವು ಅಂದಾಜುಗಳ ಪ್ರಕಾರ ಐದು ಕೋಟಿ ಉದ್ಯೋಗಗಳು ನಾಶವಾಗಿವೆ)ಅದರ ನಿಷ್ಕಾಳಜಿಯನ್ನು ಅರ್ಥಮಾಡಿಕೊಳ್ಳಬೇಕಾದರೆ, ನಾವು ಮೋದಿಯವರ ಮನಸ್ಥಿತಿಯತ್ತ ತಿರುಗಬೇಕಾಗುತ್ತದೆ. ಇಲ್ಲಿ ನಾವು ಒಂದು ಪರಮ ಭೋಳೇತನದ ಮತ್ತು ಪರಮ ಆತ್ಮವಿಶ್ವಾಸ ಬೆರೆತುಕೊಂಡಿರುವುದನ್ನು ಕಾಣುತ್ತೇವೆ.

ಈ ಭೋಳೇತನ ಎಂದರೆ ಬಂಡವಾಳಶಾಹಿ ಅರ್ಥಶಾಸ್ತ್ರದಲ್ಲೂ ಈಗ ಹಳಸಲಾಗಿರುವ ಆವೃತ್ತಿಯ ಕೆಲವು ಅಸಂಬದ್ಧ ಪ್ರತಿಪಾದನೆಗಳನ್ನು ರಕ್ತಗತವಾಡಿಕೊಂಡಿರುವುದು. ದೊಡ್ಡ ಬಂಡವಾಳಗಾರರನ್ನು "ಸಂಪತ್ತಿನ ಸೃಷ್ಟಿಕರ್ತರು" ಎಂದು ಅವರು ಪದೇ ಪದೇ ಕರೆಯುತ್ತಿರುವುದು ಇಂತಹ ಭೋಳೇತನಕ್ಕೆ ಒಂದು ಉದಾಹರಣೆ. ಅರ್ಥವ್ಯವಸ್ಥೆಗೆ ಎದುರಾಗಿರುವ ಸಂಕಷ್ಟಗಳಿಂದ ಅದನ್ನು ಹೊರತರಲು ಈ "ಸಂಪತ್ತು ಸೃಷ್ಟಿಕರ್ತರು" ಇವತ್ತಲ್ಲ ನಾಳೆ ಸಾಕಷ್ಟು ಬಂಡವಾಳವನ್ನು ತೊಡಗಿಸುತ್ತಾರೆ ಎಂದು ಹೇಳುವುದನ್ನು ಅವರು ನಂಬಿದ್ದಾರೆ. ಈ ಚಿಂತನೆಯ ಪ್ರಕಾರ, ಏನೋ ಕೆಲವು ಎಡರು ತೊಡರುಗಳನ್ನು ಹೊರತುಪಡಿಸಿದರೆ ಅರ್ಥವ್ಯವಸೆಯಲ್ಲಿ ಬಿಕ್ಕಟುಗಳೇ ಇಲ್ಲ. ಕೆಲವು ಕಾರಣಗಳಿಂದಾಗಿ ಅರ್ಥವ್ಯವಸ್ಥೆಯು ಒಂದು ವೇಳೆ ತನ್ನ ಚೈತನ್ಯವನ್ನು ಕಳೆದುಕೊಂಡರೆ ಅದನ್ನು ಪುನಶ್ಚೇತನಗೊಳಿಸಲು "ಸಂಪತ್ತು ಸೃಷ್ಟಿಕರ್ತರು" ಹೇಗೂ ಇದ್ದೇ ಇದ್ದಾರೆ. ಹಾಗಾಗಿ ಅದರ ಬಗ್ಗೆ ತಲೆ ಕೆಡಿಸಿಕೊಳ್ಳುವ ಅಗತ್ಯವಿಲ್ಲ. ಆದರೆ, ಎರಡು ಮಹಾಯುದ್ಧಗಳ ನಡುವಿನ ಅವಧಿಯ ವರ್ಷಗಳಲ್ಲಿ ಉಂಟಾಗಿದ್ದ ಮಹಾ ಕುಸಿತವು ಒಂದು ದಶಕಕ್ಕೂ ಹೆಚ್ಚು ಕಾಲ ಮುಂದುವರೆದು, ಎರಡನೆಯ ಮಹಾಯುದ್ಧವು ಜರುಗದಿದ್ದರೆ ಇನ್ನೂ ಹೆಚ್ಚು ಕಾಲ ಮುಂದುವರೆಯುತ್ತಿತ್ತು ಎಂಬ ಸಂಗತಿಯನ್ನು ಈ ಚಿಂತನೆಯು ಗಮನಿಸಿಲ್ಲ. ಹೂಡಿಕೆಯು ಬೇಡಿಕೆಯ ಮೇಲೆ ಅವಲಂಬಿಸಿದೆ ಎಂಬ ಸಂಗತಿಯೂ ಈ ಚಿಂತನೆಯಲ್ಲಿ ಕಾಣೆಯಾಗಿದೆ.

ಮತ್ತು ಆತ್ಮವಿಶ್ವಾಸ ಎಂದರೆ, ಜನರು ಎಷ್ಟೇ ಕಷ್ಟಗಳನ್ನು ಎದುರಿಸಿದರೂ, ಎಷ್ಟೇ ದಾರಿದ್ರ್ಯಕ್ಕೆ ಇಳಿದರೂ, ಹಿಂದುತ್ವವನ್ನು ಪ್ರೋತ್ಸಾಹಿಸಿದರೆ, ಮತ್ತು ಕೋಮು ಧ್ರುವೀಕರಣದ ಮೂಲಕ ಚುನಾವಣೆಗಳಲ್ಲಿ ಜನರ ಬೆಂಬಲವನ್ನು ಸದಾ ಗೆದ್ದುಕೊಳ್ಳಬಹುದು ಎಂಬುದು ನಂಬಿಕೆ. ಇದು ಒಂದು ತೀರಾ ಸಿನಿಕ ದೃಷ್ಟಿಕೋನ. ಆದರೆ, ಈಗಿನ ಆಳ್ವಿಕೆಯು ಪ್ರತಿನಿಧಿಸುತ್ತಿರುವುದು ಇಂತಹ ಸಿನಿಕತನದ ಪರಾಕಾಷ್ಠೆಯನ್ನೇ ತಾನೇ?




ವ್ಯಂಗ್ಯಚಿತ್ರ ಕೃಪೆ: ಪಿ.ಮಹಮ್ಮದ್, ವಾರ್ತಾಭಾರತಿ

ಒಟ್ಟಿನಲ್ಲಿ ಪ್ರಸ್ತುತ ಕೃತಿ ಚಿಕ್ಕದಾದರೂ, ಕನ್ನಡಕ್ಕೆ ಒಂದಿಷ್ಟು ಹೊಸ ಸಂದೇಶವನ್ನು ನೀಡಿದೆ. ನಾಟಕ, ಸಂಗೀತ, ಮತ್ತು ಸಮಗ್ರ ಕಲಾಪ್ರಕಾರಗಳ ಉಳಿವು ಮತ್ತು ಬೆಳವಣಿಗೆಗಳ ಹಿನ್ನೆಲೆಯಲ್ಲಿ, ಸರಕಾರವೂ ಅಲ್ಲಿಯ ಸ್ಥಳೀಯ ಸಂಸ್ಕೃತಿಯ ಉಳಿವಿಗಾಗಿ ಸಂಸ್ಕೃತಿ ಇಲಾಖೆಯ ಮೂಲಕ ಮಾಡುತ್ತಿರುವ ರಚನಾತ್ಮಕ ಕೆಲಸಗಳಾಗಲೀ, ರಂಗ ಸಂಘಟನೆಗಳ ಚಟುವಟಿಕೆಗಳಾಗಲಿ, ಸ್ವಾಯತ್ತ ಕಲಾ ಸಂಘಟನೆಗಳಾಗಲೀ ಸಮರ್ಪಣಾ ಭಾವದಿಂದ ದುಡಿಯುತ್ತಿರುವುದು ನಮಗೆ ಮಾದರಿಯಾಗಬೇಕು.. .. ನಮ್ಮ ಸರಕಾರದ ಕಾಟಾಚಾರದ ಸಾಂಸ್ಕೃತಿಕ ಸಾಹಿತ್ಯಿಕ ಲಲಿತಕಲೆಗಳ ಜಾತ್ರೆಗೆ ಕೇರಳದ ಸಂಸ್ಕೃತಿ ಪ್ರೀತಿ ಮತ್ತು ಇಚ್ಛಾಶಕ್ತಿಯ ಪ್ರಭಾವ ಬೀಳುವಂತಾದರೆ, ನಮ್ಮ ಕಲೆಗಳೂ ಉಳಿದು ಬಾಳಿಯಾವು..........

ಕೇರಳದ ಕೇರಿಯಲಿ 'ರಂಗ ಕೈರಳಿ'

-ಸುಬ್ರಾಯ ಮತ್ತೀಹಳ್ಳಿ-



ಆಧುನಿಕ ಬದುಕಿನ ಆತುರದ ಕ್ಷಣದಲ್ಲಿ, ಮಾಹಿತಿ ಮನರಂಜನೆಯ ಮಾಯಾ ಪ್ರವಾಹದಲ್ಲಿ, ಮೌನದ ಧ್ಯಾನದ ಆಪ್ತ ಓದಿನ ಸುಖವನ್ನೇ ಸಾಮೂಹಿಕವಾಗಿ ಕಳೆದುಕೊಳ್ಳುತ್ತಿದ್ದೇವೆಯೇನೋ ಅನ್ನಿಸುತ್ತಿರುವಾಗಲೇ ಕೋವಿಡ್ ಸಂಕಟ ಧುತ್ ಎಂದು ಮನೋಭಿತ್ತಿಯ ಮೇಲೆ ಆಕ್ರಮಿಸಿ ಎಲ್ಲೆಲ್ಲೂ ಘೋರ ತಲ್ಲಣವನ್ನು ಸೃಷ್ಟಿಸಿದ್ದ ನಿರ್ವಾತ ಕ್ಷಣದಲ್ಲಿ, ಆಕರ್ಷಕ ಮುದ್ರಣ, ಕಣ್ಸೆಳೆಯುವ ಕಲಾತ್ಮಕ ವರ್ಣಮಯ ಮುಖಪುಟ, ಮತ್ತು ಪುಟ್ಟ ಪುಟ್ಟ ನುಡಿಗುಚ್ಛಗಳ, ಚಿಕ್ಕಪುಸ್ತಕವೊಂದು ಕಣ್ಣೆದುರು ಪ್ರತ್ಯಕ್ಷಗೊಂಡು ಮುದ ನೀಡಿತು. ಹೊಚ್ಚ ಹೊಸ ಆಹ್ಲಾದಕರ ಜಗತ್ತೊಂದನ್ನ ಅಂಗೈಯಲ್ಲಿ ಇಟ್ಟು ನಗು ಬೀರಿತು.


ಪ್ರಸ್ತುತ ಕೃತಿ ಮತ್ಯಾರದ್ದೂ ಅಲ್ಲ. ನಮ್ಮ ಶಿರಸಿಯಲ್ಲಿಯೇ ಎರಡು ದಶಕಗಳ ಕಾಲ ಬಿ.ಎಸ್.ಎನ್.ಎಲ್ ಉದ್ಯೋಗಿಯಾಗಿ ಸೇವೆ ಸಲ್ಲಿಸುತ್ತ, ತಮ್ಮ ಬಿಡುವಿನ ಎಲ್ಲ ಸಮಯವನ್ನೂ ರಂಗಚಟುವಟಿಕೆಗಳಿಗೆ ಮೀಸಲಾಗಿಟ್ಟು, ರಂಗಸಂಚಲನ ಮೂಡಿಸಿದ್ದ "ಕಿರಣ ಭಟ್" ರವರದ್ದು. ರಂಗತಜ್ಞ ವಿ.ಟಿ. ಹೆಗಡೆಯವರ ಕೆಲವು ಆಧುನಿಕ ರಂಗ ಪ್ರಯೋಗಗಳಾಗಿ ಹಲವು ದಶಕಗಳೇ ಕಳೆದುಹೋಗಿದ್ದವು. ಪ್ರಾಯೋಗಿಕ ರಂಗಚಟುವಟಿಕೆಯ ದೃಷ್ಟಿಯಲ್ಲಿ, ಶಿರಸಿ ನಿರ್ವಾತವಾಗಿತ್ತು. ತೊಂಭತ್ತರ ದಶಕದಲ್ಲಿ ಉದ್ಯೋಗನಿಮಿತ್ತ ಶಿರಸಿಗೆ ಆಗಮಿಸಿದ ಕಿರಣ ಭಟ್ಟರು, 'ರಂಗಸಂಗ' ವೆಂಬ ಸ್ನೇಹಿತರ, ಕಲಾಸಕ್ತರ ತಂಡವೊಂದನ್ನು ಕಟ್ಟಿ, ತಮ್ಮ ಬಿಡುವಿನ ಸಮಯಕ್ಕೆ, ರಂಗಚಟುವಟಿಕೆಯ ರಂಗು ರಂಗಿನ ಪೋಷಾಕು ತೊಡಿಸಿದ್ದು ಈಗ ಇತಿಹಾಸ. ಹತ್ತು ಹಲವು ಗಂಭೀರ ರಂಗಪ್ರಯೋಗಗಳೊಂದಿಗೆ, ಮಕ್ಕಳ ರಂಗಭೂಮಿಯನ್ನೂ ಹುಟ್ಟುಹಾಕಿ, ನೂರಾರು ಮಕ್ಕಳನ್ನು ರಂಗಭೂಮಿಗೆ ಆಕರ್ಷಿಸಿದ್ದು ಅವರ ಬಹುಮುಖ್ಯ ಸಾಧನೆಯೆನ್ನಿಸಿದೆ.

ಅಧ್ಯಯನ, ಅನುಷ್ಠಾನ ಮತ್ತು ತಜ್ಞರ ಸಾಮೀಪ್ಯ, ಜೊತೆಗೆ ಹಲವು ರಾಜ್ಯಗಳ ವಿವಿಧ ರಂಗಪ್ರಯೋಗಗಳ ವೀಕ್ಷಣೆ, ಕಿರಣ ಭಟ್ಟರನ್ನು ಪ್ರತಿಭಾವಂತ ರಂಗಪರಿಣತರನ್ನಾಗಿ ರೂಪಿಸಿದೆ ಎಂದು ತಿಳಿದಿದ್ದೇನೆ. ತೊಂಭತ್ತರ ದಶಕದಲ್ಲಿ ಅವರು ಕೈಗೊಂಡ ಪಾಠನಾಟಕ ಸರಣಿ, ಆ ಕಾಲದ ಅತ್ಯಂತ ಅಪರೂಪದ ಪರಿಕಲ್ಪನೆಯಾಗಿತ್ತು. ಶಿಕ್ಷಣದಲ್ಲಿ ರಂಗಭೂಮಿಯ ಪ್ರಾಮುಖ್ಯತೆ ಎಷ್ಟೆಂದು, ಇನ್ನೂ ಮನದಟ್ಟಾಗಿರದ ಕಾಲದಲ್ಲಿ ಪಾಠನಾಟಕಗಳು, ರಾಜ್ಯದಲ್ಲಿ ಕುತೂಹಲ ಮೂಡಿಸಿದ್ದವು. ಮಕ್ಕಳ ರಂಗಭೂಮಿಗೊಂದು ಹೊಸ ಆಯಾಮವನ್ನೇ ನೀಡಿತ್ತು.

ಪ್ರಸ್ತುತ ನಮ್ಮೆದುರಿರುವ 'ರಂಗ ಕೈರಳಿ' ಕೃತಿಯನ್ನು ಗಮನಿಸಿದಾಗ, ಕಿರಣ ಭಟ್ಟರು ತಮ್ಮ ಸುದೀರ್ಘ ರಂಗಾನುಭವಗಳನ್ನು ಅಕ್ಷರದಲ್ಲಿ ದಾಖಲಿಸಲು ಕೊಂಚ ತಡಮಾಡಿದರೇನೋ ಎಂದೆನ್ನಿಸುತ್ತಿದೆ, ಹೇಗೇ ಇರಲಿ, ಅವರ ಕೇರಳ ರಾಜ್ಯದ ರಂಗಾನುಭವಗಳ, ಸೂಕ್ಷ್ಮ ಸರಳ ಸುಂದರ ಕೃತಿಯೊಂದು ಈ ವರ್ಷ ಬೆಳಕು ಕಂಡಿದೆ.

ಕೇರಳ, ಕಮ್ಯುನಿಷ್ಟ ಚಳುವಳಿಗೋ, ಅಸಂಖ್ಯಾತ ದೇವಾಲಯಗಳಿಗೋ ಮಾತ್ರ ಪ್ರಸಿದ್ಧವಲ್ಲ. ಅದಕ್ಕೂ ಮೊದಲು ಅಲ್ಲಿಯ ವೈಶಿಷ್ಟ್ಯಪೂರ್ಣ ಸಂಸ್ಕೃತಿ, ವೈವಿಧ್ಯಮಯ ಸಾಂಪ್ರದಾಯಿಕ ಕಲಾಪ್ರಕಾರಗಳಿಗೆ ದೇಶದಲ್ಲಿ ತನ್ನದೇ ಆದ ಪ್ರತ್ಯೇಕ ಸ್ಥಾನವನ್ನು ಈವರೆಗೂ ಕಾಯ್ದುಕೊಂಡಿದೆ. ಆ ಬಗೆಗೆ ಸಾಕಷ್ಟು ಅಧ್ಯಯನಗಳೂ ಆಗಿವೆ. ಆದರೆ, ಆಧುನಿಕ ಪ್ರಾಯೋಗಿಕ ರಂಗ ಚಳುವಳಿಯೂ ಅಷ್ಟೇ ಸುಪ್ರಸಿದ್ಧವಾದುದು ಎಂಬ ಸಂಗತಿ ಮಾತ್ರ ಕೇರಳದಿಂದ ಹೊರರಾಜ್ಯಕ್ಕೆ ಇನ್ನೂ ತಲುಪಿಲ್ಲ. ಕಿರಣ ಭಟ್ ಕೇರಳ ರಂಗ ಕಿರಣಗಳನ್ನು ತಮ್ಮ ಕೃತಿ ಕಿಟಕಿಯ ಮೂಲಕ ಕನ್ನಡ ಸಹೃದಯರೆದುರು ಬೀರುವ ಪ್ರಯತ್ನಗೈದಿರುವುದು ಖುಷಿ ನೀಡುವ ಸಂಗತಿ.

ಅವರೇ ಹೇಳಿಕೊಂಡಂತೆ ಇದೊಂದು ರಂಗಪ್ರವಾಸ ಕಥನ. ಕೇರಳದ ಸಮೃದ್ಧ ಶ್ರೀಮಂತ ರಂಗಭೂಮಿಯ ತೋರಣಬಾಗಿಲಿಗೆ ಕೊಂಡೊಯ್ಯುವ ಪ್ರಯತ್ನವನ್ನು ಲೇಖಕರು



ಮಾಡಿದ್ದಾರೆ. ಭಟ್ಟರು ತಮ್ಮ ಪ್ರಾರಂಭದ ನುಡಿಯಲ್ಲಿ, "ಈ ಬಾರಿ ಕೇರಳವನ್ನೆಲ್ಲ ಸುತ್ತಾಡಿ ಒಂದಿಷ್ಟು ಸಾಂಸ್ಕೃತಿಕ ಅನುಭವ ಗಳಿಸೋದು ನನ್ನ ಆಸೆ. ನನ್ನ ಬಯಕೆ ಹುಸಿಯಾಗಲಿಲ್ಲ. ಅಲ್ಲಿದ್ದ ಎರಡು ವರ್ಷಗಳಲ್ಲಿ ಸಾಕಷ್ಟು ನಾಟಕಗಳನ್ನು ನೋಡಿದೆ. ಸಂಗೀತ ಕೇಳಿದೆ. ಜಾನಪದ ಉತ್ಸವಗಳಲ್ಲಿ ಪಾಲ್ಗೊಂಡೆ. ಮಲಯಾಳೀ ಮಕ್ಕಳ ಜೊತೆಗೆ ರಂಗಭೂಮಿಯ ಕೆಲಸಮಾಡಿದೆ. ನೋಡಿದ್ದನ್ನೆಲ್ಲ ಫೋಟೋ ಹೊಡೆದುಕೊಳ್ಳುತ್ತ ಸ್ವಲ್ಪ ವಿವರಗಳೊಂದಿಗೆ ನಿರಂತರವಾಗಿ ಫೇಸ್ ಬುಕ್ ನಲ್ಲಿ ದಾಖಲಿಸ್ತಾ ಬಂದೆ. ನಾಟಕಗಳ ಒಂದೊಂದು ಚಿತ್ರವೂ ರಂಗಭೂಮಿಯ ವಿದ್ಯಾರ್ಥಿಗೆ ಕಲಿಕೆಯ ಟೂಲ್ ಅನ್ನುವುದು ನನ್ನ ಅನಿಸಿಕೆ." ಎಂದು ಹೇಳಿಕೊಂಡಂತೇ ಬರಹವನ್ನು ಪ್ರಾರಂಭಿಸುವಾಗ ಅದು ಕೇವಲ ಆಕ್ಷಣದ ಡಿಜಿಟಲ್ ಪ್ರತಿಕ್ರಿಯೆಯಾಗಿತ್ತು. ಆದರೆ ಆ ಎಲ್ಲ ಬರಹಗಳು ತನ್ನ ಅಪರೂಪದ ಗುಣಗಳಿಂದ ಒಂದು ಪುಟ್ಟ ಕೃತಿಯಾಗಿಯೇ ದಾಖಲುಗೊಂಡಿತು.

ಅವರ ಫೇಸ್ ಬುಕ್ ಪ್ರಕ್ರಿಯೆ ಅವಧಿಯ ಜಿ.ಎನ್ ಮೋಹನರ ಗಮನಕ್ಕೆ ಬಂದಾಗ ತಮ್ಮ ಬ್ಲಾಗಿನ ಬಾಗಿಲು ತೆರೆದು, ಬರೆಯಲು ಪ್ರೇರೇಪಿಸುತ್ತಾರೆ. ಅಸಂಖ್ಯಾತ ರಂಗ ಕುತೂಹಲಿಗಳ ಗಮನಕ್ಕೆ, ಕಿರಣರ ನುಡಿಚಿತ್ರಗಳು ಬೀಳತೊಡಗಿದಾಗ, ಪುಸ್ತಕವನ್ನಾಗಿಸುವ ವಿಚಾರ ಮೋಹನರವರಲ್ಲಿ ಮೂಡಿ, ಇದೀಗ ಮುದ್ರಿತ ರಂಗಾನುಭವ ನಮ್ಮೆದುರಿಗಿದೆ.

ಕೃತಿಗೆ ರಾಜ್ಯ ರಾಷ್ಟ್ರಮಟ್ಟದಲ್ಲಿ ಹೆಸರಾಗುತ್ತಿರುವ ರಂಗ ನಿರ್ದೇಶಕ ಶ್ರೀಪಾದ ಭಟ್ ತಮ್ಮ ಸುದೀರ್ಘ ಮುನ್ನುಡಿಯಲ್ಲಿ,

"ಕಿರಣನ ಬರಹದಲ್ಲಿ ಆಡುಮಾತಿನ ಉತ್ಸಾಹೀ ಲಯವಿದೆ. ಕ್ಲುಪ್ತವಾಗಿ ಹೇಳಬಲ್ಲ ಗುಣವಿದೆ. ಕನ್ನಡಾಂಗ್ಲ ಪದಗಳನ್ನು ಬೆಸೆಯುವಲ್ಲಿ ಕೈಲಾಸಂ ಮೊಮ್ಮಗ ಈತ. ರಂಗಪ್ರಯೋಗದ ವಿಶ್ಲೇಷಣೆಯಲ್ಲೂ ಕೆಲ ಹೊಸ ಪದಗಳನ್ನು ಟಂಕಿಸಿದ್ದಾನೆ. ಲೋಕಲ್ ಟ್ರೇನ್ ತರಹ ಎಲ್ಲಿಬೇಕಿದ್ದರೂ ಹತ್ತಿಳಿಯಬಹುದಾದ್ದ ಸೌಲಭ್ಯ ಇಲ್ಲಿಯ ಬರಗಹಗಳಿಗಿದೆ." ಎಂದು ಬೆನ್ನು ತಟ್ಟುತ್ತಲೇ, "ನಾಟಕಗಳ ಕುರಿತ ವಿಶ್ಲೇಷಣೆ, ಮತ್ತು ತಾಂತ್ರಿಕ ವಿವರಗಳು, ಇನ್ನಷ್ಟು ಬೇಕೆನಿಸುತ್ತವೆ" ಎಂಬ ಎಚ್ಚರವನ್ನೂ ಮೂಡಿಸುತ್ತಾರೆ.

ಹಾಗೆಂದು ಕೃತಿಯ ಉದ್ದೇಶ ಕೇರಳ ರಂಗಭೂಮಿಯ ಅಧ್ಯಯನವಲ್ಲ. ವಿಮರ್ಶೆಯಲ್ಲ. ಲೇಖಕರು ಎರಡು ವರ್ಷಗಳ ಕಾಲ ತಾವು ಕಂಡ ಅಸಂಖ್ಯಾತ ರಂಗಪ್ರಯೋಗಗಳಲ್ಲಿ, ಆಕರ್ಷಕವಾದ, ಮನಸ್ಸನ್ನು ತಟ್ಟಿ ಮುಟ್ಟಿದ ನಾಟಕಗಳ ವೈಶಿಷ್ಟ್ಯವನ್ನು, ಅವುಗಳ ರಸಸ್ಥಳವನ್ನು ಸಂಕ್ಷಿಪ್ತವಾಗಿ ಹಂಚಿಕೊಳ್ಳುವುದೇ ಆಗಿದೆ. ಅದರಲ್ಲಿಯೂ ಫೇಸ್ ಬುಕ್ಕಿನ ಮಿತಿಯಲ್ಲಿ, ನಂತರ ವಿದ್ಯುನ್ಮಾನ ಪತ್ರಿಕೆಯ ಅಂಕಣದ ಚೌಕಟ್ಟಿನಲ್ಲಿ ಹೇಳಿದ ಮಾತುಗಳೇ ಹೂಬೇ ಹೂಬಾಗಿ ಕೃತಿಯಲ್ಲಿಯೂ ಇಳಿದು ಬಂದುದರಿಂದ, ಅವರು ಕಟ್ಟಿಕೊಡುವ ಹೊಚ್ಚ ಹೊಸ ರಂಗ ಚಿತ್ರಣಗಳು, ಒಮ್ಮೆ ಖುಷಿನೀಡುತ್ತವೆ. ಆದರೆ ಓದುಗನ ಕುತೂಹಲವನ್ನು ತಣಿಸುವುದಿಲ್ಲ. ಇನ್ನಷ್ಟು ರಸಪೂರ್ಣ ವಿವರಗಳನ್ನು ಕೊಟ್ಟು ಆ ಕೊರತೆಯನ್ನು ನಿವಾರಿಸಬಹುದಿತ್ತು. ಆದರೂ ಕೃತಿ ಯಶಕಾಣುವುದು ಅವರೇ ಕ್ಲಿಕ್ಕಿಸಿದ ಆಕರ್ಷಕ ಭಾವಚಿತ್ರಗಳಿಂದ. ಸರಳ ಸುಂದರ ಭಾಷಾಶೈಲಿಯಿಂದ. ಮತ್ತು ಅಚ್ಚುಕಟ್ಟಾದ ಪುಸ್ತಕ ರೂಪದಿಂದ.

ವಿವರ ಚಿಕ್ಕದಾದರೂ ಅಚ್ಚಳಿಯದೇ ಮನಸ್ಸಿನಲ್ಲುಳಿಯುವ ಹತ್ತು ಹಲವು ನಾಟಕಗಳ ಚಿತ್ರಣ ಪುಸ್ತಕದ ತುಂಬೆಲ್ಲಾ ಕಾಣತೊಡಗುತ್ತವೆ. "ಅದೊಂದು ಮಾಯಾಬಜಾರು" ನುಡಿಚಿತ್ರಣದಲ್ಲಿ, ಪೌರಾಣಿಕ ನಾಟಕವೊಂದರ ಕಥಾನಾಯಕಿ ವೈಶಾಲಿಯ ಪರಮ ದುರಂತವೊಂದು ಮನಸ್ಸನ್ನು ಕಲಕಿದರೆ, ಅರ್ಧಕೋಟಿ ವೆಚ್ಚದ "ಮ್ಯಾಕ್ ಬೆತ್" ನಾಟಕ ಸಾಂಪ್ರದಾಯಿಕ ರಂಗದಲ್ಲಿ ಬೆರಗು ಮೂಡಿಸುತ್ತದೆ.

ಕೇರಳದ ಪ್ರಾಯೋಗಿಕ ರಂಗಭೂಮಿ ತನ್ನ ಆಧುನಿಕ ನಾಟಕಗಳಲ್ಲಿ ದೇಶದ ಉಳಿದೆಲ್ಲ ರಾಜ್ಯಕ್ಕೂ ಮಾದರಿಯಾಗಿ ಬೆಳೆಯುತ್ತಿದ್ದಂತೇ, ಸಾಂಪ್ರದಾಯಿಕ ರಂಗವನ್ನು ಅಲಕ್ಷಿಸುತ್ತಿಲ್ಲ. ಸಮಾನಾಂತರವಾಗಿ ಅವೆರಡೂ ಸಹಬಾಳ್ವೆ ನಡೆಸುವಲ್ಲಿ ಅಲ್ಲಿಯ ರಂಗಪ್ರಿಯರು, ಮತ್ತು ಸರಕಾರಗಳ ಪ್ರಾಮಾಣಿಕ ಬೆಂಬಲವಿದೆ, ಎಂಬುದನ್ನು ಲೇಖಕರು ಸೂಕ್ಷ್ಮವಾಗಿ ಗುರುತಿಸುತ್ತಾರೆ.

ನೋಬೆಲ್ ವಿಜೇತ ಲೇಖಕ "ಅರ್ನೆಸ್ಟ ಹೆಮಿಂಗ್ ವೇ" ಯ ``The Old man and the Sea'' ಕೃತಿಯನ್ನಾಧರಿಸಿದ "ಹಾಯ್ ಹೆಮಿಂಗ್ ವೇ" ನಾಟಕ ಪ್ರಯೋಗ ಕುತೂಹಲ ಹುಟ್ಟಿಸುತ್ತದೆ. ಆದರೆ ರಂಗದಲ್ಲಿ ಹೆಮಿಂಗ್ ವೇ ಹೇಗೆ ಮಿಂಚಿದ ಎಂಬ ಕುತೂಹಲ ತಣಿಯದೇ ನಿರಾಶೆಯಾಗುತ್ತದೆ. ಏಕೆಂದರೆ ಪ್ರಸ್ತುತ ಕಾದಂಬರಿಯಲ್ಲಿ ತಿಮಿಂಗಲಕ್ಕೂ ಮುದುಕ ಮೀನುಗಾರನಿಗೂ ನಡುವೆ ಬದುಕಿನ ಸೋಲು ಗೆಲುವು ಮತ್ತು ಸಾವಿನ ಬಗೆಗಿನ ತಾತ್ವಿಕ ನೆಲೆಯಲ್ಲಿ ನಡೆಯುವ ವಾಗ್ವಾದ ಸದಾ ಕಾಡುವಂಥಹದ್ದು. ಮೀನುಗಾರ ಮುದುಕ ಒಂಟಿಯಾಗಿ ವಿಶಾಲ ಸಾಗರದ ನಡುವೆ, ತಿಮಿಂಗಿಲದ ಬೇಟೆಯಾಡಿ ಗೆದ್ದರೂ, ದಾರುಣ ಸಾವನ್ನಪ್ಪುವ ದೃಶ್ಯಮಾತ್ರ ಎಂದೂ ಮರೆಯಲಾಗದ್ದಾಗಿದೆ.

ಮತ್ತೊಂದು ಕುತೂಹಲಕಾರಿ ನಾಟಕ "ಅಡಕ್ಕಳಯಿಲ್ ನಿನ್ನುಂ ಅರಂಗೇಟ್ಟತ್ತೇಕ್" ಕನ್ನಡಕ್ಕೆ ವಿಚಿತ್ರ ಹೆಸರಾಗಿ ಕಂಡರೂ, ನಾಟಕವೊಂದು ಸಾಮಾಜಿಕ ಅನಿಷ್ಟವೊಂದರ ವಿರುದ್ಧ ಒಂದು ಚಳುವಳಿಯಾಗಿ ರೂಪುಗೊಂಡು, ಅನಿಷ್ಟ ನಿವಾರಿಸಿದ ಇತಿಹಾಸ ಬೆರಗು ಮೂಡಿಸುತ್ತದೆ.

ಒಟ್ಟಿನಲ್ಲಿ ಪ್ರಸ್ತುತ ಕೃತಿ ಚಿಕ್ಕದಾದರೂ, ಕನ್ನಡಕ್ಕೆ ಒಂದಿಷ್ಟು ಹೊಸ ಸಂದೇಶವನ್ನು ನೀಡಿದೆ. ನಾಟಕ, ಸಂಗೀತ, ಮತ್ತು ಸಮಗ್ರ ಕಲಾಪ್ರಕಾರಗಳ ಉಳಿವು ಮತ್ತು ಬೆಳವಣಿಗೆಗಳ ಹಿನ್ನೆಲೆಯಲ್ಲಿ, ಸರಕಾರವೂ ಅಲ್ಲಿಯ ಸ್ಥಳೀಯ ಸಂಸ್ಕೃತಿಯ ಉಳಿವಿಗಾಗಿ ಸಂಸ್ಕೃತಿ ಇಲಾಖೆಯ ಮೂಲಕ ಮಾಡುತ್ತಿರುವ ರಚನಾತ್ಮಕ ಕೆಲಸಗಳಾಗಲೀ, ರಂಗ ಸಂಘಟನೆಗಳ ಚಟುವಟಿಕೆಗಳಾಗಲಿ, ಸ್ವಾಯತ್ತ ಕಲಾ ಸಂಘಟನೆಗಳಾಗಲೀ ಸಮರ್ಪಣಾ ಭಾವದಿಂದ ದುಡಿಯುತ್ತಿರುವುದು ನಮಗೆ ಮಾದರಿಯಾಗಬೇಕು. ಪ್ರತಿ ವರ್ಷ ಅಲ್ಲಿ ನಡೆಯುತ್ತಿರುವ ಜಾಗತಿಕ ಮಟ್ಟದ ನಾಟಕ ಸಂಗೀತ ಸಮ್ಮೇಳನಗಳಂತೇ ವ್ಯವಸ್ಥಿತವಾಗಿ ನಮ್ಮ ರಾಜ್ಯದಲ್ಲೂ ನಡೆಯುವಂತಾಗಲು, ನಮ್ಮ ಸರಕಾರಗಳೂ ಮನಸ್ಸು ಮಾಡಬೇಕು. ನಮ್ಮ ಸರಕಾರದ ಕಾಟಾಚಾರದ ಸಾಂಸ್ಕೃತಿಕ ಸಾಹಿತ್ಯಿಕ ಲಲಿತಕಲೆಗಳ ಜಾತ್ರೆಗೆ ಕೇರಳದ ಸಂಸ್ಕೃತಿ ಪ್ರೀತಿ ಮತ್ತು ಇಚ್ಛಾಶಕ್ತಿಯ ಪ್ರಭಾವ ಬೀಳುವಂತಾದರೆ, ನಮ್ಮ ಕಲೆಗಳೂ ಉಳಿದು ಬಾಳಿಯಾವು..........

ಪ್ರಸ್ತುತ ಕೃತಿಯಲ್ಲಿ ಕೃತಿಕಾರರು ಮನೋಜ್ಞವಾಗಿ ವರ್ಣಿಸಿದ ಇನ್ನೊಂದು ಘಟನೆಯನ್ನು ಪ್ರಸ್ತಾಪಿಸಲೇ ಬೇಕು. ಐವತ್ತು ಅರವತ್ತು ವರ್ಷಗಳ ಹಿಂದೆ ಕೇರಳದ ಕುಗ್ರಾಮವೊಂದರಿಂದ, ಒಬ್ಬ ಹೆಣ್ಣುಮಗಳು ಮದುವೆಯಾಗಿ, ದೂರದ ಕರ್ನಾಟಕ ರಾಜ್ಯದ ಕುಗ್ರಾಮವೊಂದಕ್ಕೆ ಬರುತ್ತಾಳೆ. ಅವಳು ಇದೀಗ ಹಣ್ಣು ಹಣ್ಣು ಮುದುಕಿ. ಇಲ್ಲಿ ಬಂದ ಮೇಲೆ ತನ್ನ ತವರನ್ನು ಒಂದು ಬಾರಿಯೂ ನೋಡಿಲ್ಲ. ಅಲ್ಲಿಯ ಸಂಪರ್ಕದಿಂದಲೇ ದೂರವಾಗಿ, ಅಲ್ಲಿಯ ಭಾಷೆಯಿಂದಲೂ ದೂರವಾಗಿದ್ದಳು. ಆದರೂ ತವರಿನ ಕನಸು ಮಾತ್ರ ಅಚ್ಚಳಿಯದೇ ಉಳಿದಿತ್ತು. ಮುದುಕಿಯ ಮಕ್ಕಳು ಲೇಖಕರ ದೂರದ ಸಂಬಂಧಿಗಳು. ಕಿರಣ ಭಟ್ಟರು ಕೇರಳದಲ್ಲಿದ್ದಾರೆಂಬ ವರ್ತಮಾನ ತಿಳಿದಕೂಡಲೇ ಅವರನ್ನು ಸಂಪರ್ಕಿಸಿ ತಮ್ಮ ತಾಯಿಯ ತವರನ್ನು ಶೋಧಿಸಿ ಕೊಡಲು ವಿನಂತಿಸಿಕೊಳ್ಳುತ್ತಾರೆ. ಲೇಖಕರು ತಿಂಗಳು ಕಾಲ ವಿಚಾರಿಸಿ ಪತ್ತೆ ಹಚ್ಚಿ ತವರಿನವರನ್ನು ಉತ್ತರಕನ್ನಡದ ಹಳ್ಳಿಗೆ ಕಳುಹಿಸುತ್ತಾರೆ. ತನ್ನ ತವರು ತನಗೆ ದೊರಕಿದ ವೃದ್ಧ ಹೆಣ್ಣುಮಗಳ ಕಣ್ಣಲ್ಲಿ ಆನಂದ ಭಾಷ್ಪವನ್ನು ಕಂಡ ಕಿರಣಭಟ್ಟರಿಗೆ ಧನ್ಯತೆಯ ಭಾವ ಮೂಡುತ್ತದೆ.

ಪ್ರಸ್ತುತ ಘಟನೆ ರಂಗಭೂಮಿಗೆ ಸಂಬಂಧಿಸದಿದ್ದರೂ, ರಂಗಕಾರ್ಯಾಚರಣೆಗಳ ವೀಕ್ಷಣೆಗಾಗಿ ತಿರುಗಾಡುತ್ತಿರುವಾಗಲೇ ಅವಳ ತವರಿನ ಮಾಹಿತಿ ದೊರಕಿದ್ದು, ದೂರವಾಗಿದ್ದ ಮನುಷ್ಯ ಸಂಬಂಧ ಮತ್ತೆ ಬೆಸೆಯುವಂತಾಗಿದ್ದು, ನಿಜಕ್ಕೂ ಅಚ್ಚರಿಪಡುವಂಥ ಸಂದರ್ಭವಾಗಿದೆ. ಎಷ್ಟೆಂದರೂ ರಂಗಕ್ರಿಯೆ ಎಂದರೆ ಮಾನವೀಯ ಸಂಬಂಧಗಳನ್ನು ಗಟ್ಟಿಗೊಳಿಸುವುದೇ ಅಲ್ಲವೇ...?

ಮುದ್ದಾದ ರಂಗ ಚಿತ್ರಣ ನಮ್ಮ ಕೈಲಿದೆ. ಸಾಕಷ್ಟು ಪ್ರಾಯೋಗಿಕ ಅನುಭವ ಕೃತಿಕಾರರ ಮನೋಭಿತ್ತಿಯಲ್ಲಿದೆ. ಇನ್ನೂ ಆಳಕ್ಕೆ, ಇನ್ನೂ ವಿಸ್ತಾರಕ್ಕೆ ರಂಗಪ್ರಿಯರನ್ನು ಕೊಂಡೊಯ್ಯುವ ಪ್ರಕ್ರಿಯೆ ಪ್ರಸ್ತುತ ಕೃತಿ "ರಂಗ ಕೈರಳಿ"ಯ ಮೂಲಕ ಪ್ರಾರಂಭಗೊಳ್ಳಲೆಂದು ಹಾರೈಸುತ್ತಿದ್ದೇನೆ. ■

ವಿಶ್ವಸಂಸ್ಥೆ-75: "ಏಕಪಕ್ಷೀಯತೆ ಹಿಮ್ಮೆಟ್ಟಿಸಬೇಕು, ಬಹುಪಕ್ಷೀಯತೆ ಕೊರತೆ ನೀಗಿಸಬೇಕು"



ಭವಿಷ್ಯದ ಯುದ್ಧಗಳನ್ನು ತಡೆಗಟ್ಟುವ ಉದ್ದೇಶದಿಂದ ಎರಡನೇ ಮಹಾ ವಿಶ್ವಯುದ್ಧದ ನಂತರ, ವಿಶ್ವ ಸಂಸ್ಥೆ (ಯು.ಎನ್) ಯನ್ನು 75ನೇ ವರ್ಷಗಳ ಹಿಂದೆ ಸ್ಥಾಪಿಸಲಾಯಿತು. ಆದರೆ ಈಗ ಯು.ಎನ್ ಪರಿಣಾಮಕಾರಿಯಲ್ಲದ ಇನ್ನೊಂದು (ಮೊದಲ ವಿಶ್ವಯುದ್ಧದ ನಂತರ ಇನ್ನೊಂದು ವಿಶ್ವಯುದ್ಧ ಆಗದಂತೆ ತಡೆಗಟ್ಟುವ ಉದ್ದೇಶದಿಂದ ಸ್ಥಾಪಿಸಲಾಗಿದ್ದ) ಲೀಗ್ ಆಫ್ ನೇಷನ್ ಆಗಿದೆ ಎಂದು ಹೇಳಲು ವಿಷಾದವಾಗುತ್ತದೆ. ವಿಶ್ವಸಂಸ್ಥೆಯ ಈ ರೀತಿಯ ಸ್ಥಿತಿಗೆ ಮೂಲ ಕಾರಣ ಯು.ಎಸ್ ಎಂದು ಹೇಳಲು ಯಾವ ದೇಶಕ್ಕೂ ಮುಜುಗರ ಇರಲಾರದು.

ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಸೆಪ್ಟೆಂಬರ್ 21, ವಿಶ್ವಸಂಸ್ಥೆಯ (ಯು.ಎನ್) 75ನೇ ವಾರ್ಷಿಕೋತ್ಸವ ಇತ್ತು. ಪ್ರಪಂಚವು ಬಹುಪಕ್ಷೀಯ ಸವಾಲುಗಳನ್ನು ಹೆಚ್ಚೆಚ್ಚಾಗಿ ಎದುರಿಸಬೇಕಾಗಿದೆ. ಏಕಪಕ್ಷೀಯ ಹೇರಿಕೆ ಹೆಚ್ಚಾಗಿ ಪ್ರಾಧಾನ್ಯ ಹೊಂದಿದೆ. ಆದರೆ, ಬಹುಪಕ್ಷೀಯವಾಗಿ ಸಾಕಷ್ಟು ಉತ್ತರಗಳು ಸಿಗುತ್ತಿಲ್ಲ. ಈ ಕೊರತೆ ನೀಗಲು ಸದಸ್ಯ ದೇಶಗಳ ಸಹಕಾರ ಬೇಕಾಗುತ್ತದೆ. ಆ ನಿಟ್ಟಿನಲ್ಲಿ ಏಕಪಕ್ಷೀಯ ನಿರ್ಧಾರಗಳನ್ನು ಹೇರುವ ಪ್ರವೃತ್ತಿ ಹೆಚ್ಚಾಗಿದೆ, ಎಂದು ವಿಶ್ವಸಂಸ್ಥೆ-75 ಭಾಗವಾಗಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಮಾತನಾಡಿದ ಅದರ ಮಹಾ ಕಾರ್ಯದರ್ಶಿ ಆಂಟೋನಿಯೋ ಗುಟೆರೆಸ್ ಹೇಳಿದ್ದಾರೆ. ಏಕಪಕ್ಷೀಯತೆಯನ್ನು ಹಿಮ್ಮೆಟ್ಟಿಸಬೇಕು ಎಂದು ಯು.ಎಸ್ ಹೆಸರನ್ನು ಹೇಳದೆ ಪರೋಕ್ಷವಾಗಿ ತಿಳಿಸಿದರು.

ಆಧುನಿಕ ಇತಿಹಾಸದಲ್ಲಿ ನಾವು ಪ್ರಮುಖ ಶಕ್ತಿ ರಾಷ್ಟಗಳ ನಡುವೆ ಮಿಲಿಟರಿ ಮುಖಾಮುಖಿಯಾಗದೇ 75 ವರ್ಷಗಳನ್ನು ಕಳೆದಿದ್ದೇವೆ. ಇದು ಸದಸ್ಯ ರಾಷ್ಟಗಳು ಹೆಮ್ಮೆ ಪಡುವಂತಹ ದೊಡ್ಡ ಸಾಧನೆಯಾಗಿದೆ. ಇದನ್ನು ಕಾಪಾಡಿಕೊಂಡು ಹೋಗಲು ಪ್ರಯತ್ನ ಪಡಬೇಕಾಗಿದೆ ಎಂದು ಗುಟೆರೆಸ್ ಹೇಳಿದರು.

ಆದಾಗ್ಯೂ, ಇನ್ನೂ ಹೆಚ್ಚಿನದನ್ನು ಮಾಡಬೇಕಾಗಿದೆ. ಲಿಂಗ ಮತ್ತು ಜನಾಂಗೀಯ ಅಸಮಾನತೆಯನ್ನು ಜಾಗತಿಕವಾಗಿ ಮಾನವ ಹಕ್ಕುಗಳ ರಕ್ಷಣೆಯ ಮಾಹಾ ದೊಡ್ಡ ಸವಾಲುಗಳಲ್ಲಿ ಮೊದಲನೆಯದು ಎಂದು ಗುರುತಿಸ ಬೇಕಾಗಿದೆ, ಎಂದು ಇತ್ತೀಚೆಗೆ ಯು.ಎಸ್ ನಲ್ಲಿ ನಡೆದ ಜಾರ್ಜ್ ಫ್ಲೋಯಿಡ್ ಹತ್ಯೆಯ ನಂತರ ನಡೆದ ಪ್ರತಿಭಟನೆಗಳನ್ನು ಉಲ್ಲೇಖಿಸದೆ ಸೂಚ್ಯ ವಾಗಿ ತಿಳಿಸಿದರು. ಇರಾಕ್ ಯುದ್ಧದ ಹಿಂದಿರುವ ಯು.ಎಸ್ ನ ಸಂಚುಗಳನ್ನು ಮತ್ತು ಅದು ಮಾಡಿದ ಅಂತರಾಷ್ಟ್ರೀಯ ಒಪ್ಪಂದಗಳನ್ನು ನೆನಪಿಸುತ್ತಾ, ಪ್ಯಾಲೆಸ್ತೈನ್ ಭೂ ಪ್ರದೇಶದಲ್ಲಿ ಯು.ಎಸ್ ಬೆಂಬಲದಿಂದ ಇಸ್ರೇಲ್ ನ ಆಕ್ರಮಣಶೀಲ ಭೂ ಸ್ವಾದೀನ, ಇದರಿಂದ ಆ ಪ್ರದೇಶದಲ್ಲಿ ಉಂಟಾಗಿರುವ ರಾಜಕೀಯ ಉದ್ವಿಗ್ನತೆ, ದ್ವೇಷ ಮತ್ತು ಪರಮಾಣು ಶಸ್ತ್ರಾಸ್ತ್ರಗಳ ಬೆದರಿಕೆಯು ಹೆಚ್ಚಿರುವುದು. – ಗುಟೆರೆಸ್ ಪಟ್ಟಿ ಮಾಡಿದ ಸವಾಲುಗಳಲ್ಲಿ ಸೇರಿಕೊಂಡಿವೆ.

ಕೋವಿಡ್-19 ಸಾಂಕ್ರಾಮಿಕವು ವಿಶ್ವದ ಆರೋಗ್ಯ ಸಂರಕ್ಷಣಾ ದುರ್ಬಲತೆಗಳನ್ನು ಎತ್ತಿ ತೋರಿಸಿದೆ. ನಾವೆಲ್ಲಾ ಒಂದಾಗಿ ಈ ಸಾಂಕ್ರಾಮಿಕ ರೋಗಕ್ಕೆ ಪರಿಹಾರ ಕೈಗೊಳ್ಳಬೇಕು. ಈ ನಿಟ್ಟಿನಲ್ಲಿ ನಮ್ಮಲ್ಲಿ ಬಹುಪಕ್ಷೀಯ ಪರಿಹಾರಗಳ ಕೊರತೆ ಇದೆ ಎಂದು ಗುಟೆರೆಸ್ ಗುರುತಿಸಿದರು.

ಅವರು ಸಾಂಕೇತಿಕವಾಗಿ ಕೆಲವು ಕೊರತೆಗಳನ್ನು ಗುರುತಿಸಿದರೂ ಸಹಾ, ವಿಶ್ವಸಂಸ್ಥೆಯ ನಿಜವಾದ ಉದ್ದೇಶಗಳನ್ನು ಜಾರಿಗೊಳಿಸಲು, ಅಡ್ಡಿಯಾಗಿರುವ ಯು.ಎಸ್ ನ ಉಲ್ಲಂಘನೆಗಳ ಬಗ್ಗೆ ನೇರವಾಗಿ ಏನನ್ನು ಹೇಳಲಿಲ್ಲ. ಎಪ್ಪತ್ತೈದನೇಯ ವಾರ್ಷಿಕೋತ್ಸವದ ಈ ಸಂದರ್ಭದಲ್ಲಿ ಅವಲೋಕನ ಮಾಡಬೇಕಾದ ಪ್ರಮುಖ ವಿಚಾರಗಳಲ್ಲಿ, ಯುಎಸ್ ಮಾಡಿರುವ ಒಪ್ಪಂದಗಳ ಸರ್ಜರಿಗಳನ್ನು ಜಗತ್ತಿಗೆ ತಿಳಿಸಬೇಕಾಗಿದೆ. ಅದರಲ್ಲೂ ಕಳೆದ ಮೂರು-ನಾಲ್ಕು ವರ್ಷಗಳಿಂದೀಚೆಗೆ, ಅಧ್ಯಕ್ಷ ಟ್ರಂಪ್ ರು ಸಾಕಷ್ಟು ಒಪ್ಪಂದಗಳನ್ನು ಉಲಂಘನೆ ಮಾಡಿದ್ದಾರೆ. ಅದು ಹವಾಮಾನ ಬದಲಾವಣೆಯ ಪ್ಯಾರಿಸ್ ಒಪ್ಪಂದದಿಂದ ಮೊದಲುಗೊಂಡು, ಇತ್ತೀಚಿನ ಇರಾನ್ ಕುರಿತಾದ ಪರಮಾಣು ಒಪ್ಪಂದದ ಉಲ್ಲಂಘನೆ, ಮತ್ತು ಕೋವಿಡ್-19 ರ ಮಾಹಾಮಾರಿ ಜಗತ್ತಿಗೆ ತಂದೊಡ್ಡಿರುವ ಅಪಾಯಕಾರಿ ಸನ್ನಿವೇಶದಲ್ಲಿ ವಿಶ್ವ ಆರೋಗ್ಯ ಸಂಸ್ಥೆಗೆ ನೀಡುತ್ತಿದ್ದ ದೇಣಿಗೆ ವಾಪಸ್ಸು ಪಡೆದಿದ್ದು, ಹೀಗೆ ಯುಎಸ್ ಮಾಡಿರುವ ಉಲಂಘನೆಗಳ ಬಗ್ಗೆ ಯುಎನ್ ಸುಮ್ಮನೆ ಕುಳಿತಿರುವುದು ಏಕೆ ? ಇದರಿಂದ ವಿಶ್ವ ಸಂಸ್ಥೆ ಕೇವಲ ಯುಎಸ್ ನ ಕೈಗೊಂಬೆಯಾಗಿ ತನ್ನ ನಿಜವಾದ ಉದ್ದೇಶಗಳನ್ನು ಗಾಳಿಗೆ ತೂರಿದಂತಾಗಲಿಲ್ಲವೇ?

ವಿಶ್ವಸಂಸ್ಥೆಯ 75ನೇ ವಾರ್ಷಿಕೋತ್ಸವ ಇವುಗಳಿಗೆ ಉತ್ತರ ನೀಡುವಂತಾಗಬೇಕು. ಕಳೆದು ಹೋಗುತ್ತಿರುವ ತನ್ನ ಸಾಮ್ರಾಜ್ಯಶಾಹಿ ಮಿಲಿಟರಿ ಸಾಮರ್ಥ್ಯವನ್ನು ಮರು ಸ್ಥಾಪಿಸಲು ವ್ಯೂಹ ರಚಿಸುತ್ತಿರುವ ಯುಎಸ್ ಗೆ ಈ ಸಂದರ್ಭದಲ್ಲಿ ಬಹು ಪಕ್ಷೀಯ ನಿಲುವುಗಳನ್ನು ರೂಪಿಸುವ ಮೂಲಕ ಎಚ್ಚರಿಕೆಯನ್ನು ನೀಡಿಬೇಕಾಗಿದೆ. ಆ ನಿಟ್ಟಿನಲ್ಲಿ 75 ನೇ ವಾರ್ಷಿಕೋತ್ಸವ ನಾಂದಿ ಹಾಡಬೇಕಿತ್ತು.

ವಿಶ್ವಶಾಂತಿಯನ್ನು ಕಾಪಾಡುವ ಧ್ಯೇಯವು ಆರಂಭಿಕ ದಶಕಗಳಲ್ಲಿ ಯು.ಎಸ್ ಮತ್ತು ಸೋವಿಯತ್ ಒಕ್ಕೂಟ ಮತ್ತು ಅವುಗಳ ಮಿತ್ರ ರಾಷ್ಟಗಳ ನಡುವೆ ಶೀತಲ ಸಮರದಿಂದ ಜಟಿಲವಾಗಿತ್ತು. ವಿಶ್ವಸಂಸ್ಥೆಯ ಕಾರ್ಯಾಚರಣೆಗಳು ಮೊದಲು ನಿರಾಯುಧವಾಗಿದ್ದವು. ಮುಖ್ಯವಾಗಿ ಮೇಲ್ವಿಚಾರಣೆ, ವರದಿ ಮತ್ತು ವಿಶ್ವಾಸಾರ್ಹತೆಯನ್ನು ಬೆಳೆಸುವ ಪಾತ್ರವನ್ನು ನಿರ್ವಹಣೆ ಮಾಡುತ್ತಿತ್ತು. 1960 ರ ದಶಕದ ನಂತರ, ವಸಹಾತುಗಳ ವಿಮೋಚನೆ, ಸಮನ್ವಯ ಒಪ್ಪಂದಗಳು ಇಂತಹ ನೀತಿ-ನಿರೂಪಣೆಯಿಂದಾಗಿ, ಯುಎನ್ ಸದಸ್ಯತ್ವ ಗಮನಾರ್ಹವಾಗಿ ಬೆಳೆಯಿತು. ಆದರೀಗ, ಯುಎನ್ ಯುಎಸ್ ನ ಅಡಿಯಾಳಾಗಿ ಸೊರಗಿ ಹೋಗುತ್ತಿದೆ ಎಂದರೆ ಅತಿಶಯೋಕ್ತಿಯಾಗಲಾರದು.

ಭವಿಷ್ಯದ ಯುದ್ಧಗಳನ್ನು ತಡೆಗಟ್ಟುವ ಉದ್ದೇಶದಿಂದ ಎರಡನೇ ಮಹಾ ವಿಶ್ವಯುದ್ಧದ ನಂತರ, ವಿಶ್ವ ಸಂಸ್ಥೆ (ಯು.ಎನ್) ಯನ್ನು 75ನೇ ವರ್ಷಗಳ ಹಿಂದೆ ಸ್ಥಾಪಿಸಲಾಯಿತು. ಆದರೆ ಈಗ ಯು.ಎನ್ ಪರಿಣಾಮಕಾರಿಯಲ್ಲದ ಇನ್ನೊಂದು (ಮೊದಲ ವಿಶ್ವಯುದ್ಧದ ನಂತರ ಇನ್ನೊಂದು ವಿಶ್ವಯುದ್ಧ ಆಗದಂತೆ ತಡೆಗಟ್ಟುವ ಉದ್ದೇಶದಿಂದ ಸ್ಥಾಪಿಸಲಾಗಿದ್ದ) ಲೀಗ್ ಆಫ್ ನೇಷನ್ ಆಗಿದೆ ಎಂದು ಹೇಳಲು ವಿಷಾದವಾಗುತ್ತದೆ. ವಿಶ್ವಸಂಸ್ಥೆಯ ಈ ರೀತಿಯ ಸ್ಥಿತಿಗೆ ಮೂಲ ಕಾರಣ ಯು.ಎಸ್ ಎಂದು ಹೇಳಲು ಯಾವ ದೇಶಕ್ಕೂ ಮುಜುಗರ ಇರಲಾರದು.

ಏಪ್ರಿಲ್ 25, 1945 ರಲ್ಲಿ ಸುಮಾರು 50 ಸರ್ಕಾರಗಳು 'ಸ್ಯಾನ್ ಫ್ರಾನ್ಸಿಸ್ಕೋ' ದ ಸಮ್ಮೇಳನದಲ್ಲಿ ಬೇಟಿಯಾಗಿ ಯು.ಎನ್ ಗೆ ಒಂದು ಪರಿಣಾಮಕಾರಿ ಚಾರ್ಟರ್ ಅನ್ನು ರೂಪಿಸಲು ಆರಂಭಿಸಿದವು. ಇದನ್ನು 25 ಜೂನ್ 1945 ರಲ್ಲಿ ಅಂಗೀಕರಿಸಲಾಯಿತು. ಅದಾದ ನಂತರ ವಿಶ್ವಸಂಸ್ಥೆ ಅಧಿಕೃತವಾಗಿ ತನ್ನ ಕಾರ್ಯಾಚರಣೆ ಯನ್ನು ಆರಂಭಿಸಿತು. ಅಂಗೀಕೃತ ಚಾರ್ಟರ್ ಗೆ ಅನುಗುಣವಾಗಿ, ಸಂಸ್ಥೆಯ ಉದ್ದೇಶಗಳು ಸ್ಪಷ್ಟತೆ ಹೊಂದಿದ್ದವು.


ಆ ಉದ್ದೇಶಗಳಲ್ಲಿ ಪ್ರಮುಖವಾದವುಗಳೆಂದರೆ, ಅಂತರರಾಷ್ಟ್ರೀಯ ಶಾಂತಿ ಮತ್ತು ಸುರಕ್ಷತೆಯನ್ನು ಕಾಪಾಡುವುದು, ಮಾನವ ಹಕ್ಕುಗಳನ್ನು ರಕ್ಷಿಸುವುದು, ಮಾನವೀಯ ನೆರವು ನೀಡುವುದು, ಸುಸ್ಥಿರ ಅಭಿವೃದ್ಧಿಯನ್ನು ಉತ್ತೇಜಿಸುವುದು ಮತ್ತು ಅಂತರರಾಷ್ಟ್ರೀಯ ಕಾನೂನು ಮತ್ತು ಒಪ್ಪಂದಗಳನ್ನು ಎತ್ತಿಹಿಡಿಯುವುದು ಹೀಗೆ ಹತ್ತು ಹಲವು ಉದ್ದೇಶಗಳ ಬಗ್ಗೆ ಸ್ಪಷ್ಟ ಮತ್ತು ಪಕ್ವತೆಯನ್ನು ಹೊಂದಿ, ವಿಶ್ವಸಂಸ್ಥೆ ತನ್ನ ಕಾರ್ಯಾಚರಣೆ ಆರಂಭಿಸಿತು.

ಇದು ಸ್ಥಾಪನೆಗೊಂಡಾಗ, 51 ಸದಸ್ಯ ರಾಷ್ಟಗಳನ್ನು ಯು.ಎನ್ ಹೊಂದಿತ್ತು. 2011 ರಲ್ಲಿ ದಕ್ಷಿಣ ಸುಡಾನ್ ಸೇರ್ಪಡೆ ಯೊಂದಿಗೆ, ಸದಸ್ಯತ್ವವು ಪ್ರಸ್ತುತ 193 ಆಗಿದೆ. ಈಗ ವಿಶ್ವಸಂಸ್ಥೆಯು ಪ್ರಪಂಚದ ಎಲ್ಲಾ ಸಾರ್ವಭೌಮ ರಾಜ್ಯಗಳನ್ನು ಪ್ರತಿನಿಧಿಸುತ್ತದೆ.

ಯುಎನ್ ಪ್ರಮುಖವಾಗಿ, ಆರು ಅಂಗಗಳನ್ನು ಹೊಂದಿದೆ. ಸಾಮಾನ್ಯ ಸಭೆ,; ಭದ್ರತಾ ಮಂಡಳಿ; ಆರ್ಥಿಕ ಮತ್ತು ಸಾಮಾಜಿಕ ಮಂಡಳಿ (ಇಕೋಸಾಕ್); ಟ್ರಸ್ಟೀಶಿಪ್ ಕೌನ್ಸಿಲ್; ಅಂತರಾಷ್ಟ್ರೀಯ ನ್ಯಾಯಾಲಯ; ಮತ್ತು ಯುಎನ್ ಸೆಕ್ರೆಟರಿಯೇಟ್. ಯು.ಎನ್ ವ್ಯವಸ್ಥೆ ಯು ವಿಶ್ವ ಬ್ಯಾಂಕ್ ಗುಂಪು, ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯೂ.ಎಚ್.ಒ), ವಿಶ್ವ ಆಹಾರ ಕಾರ್ಯಕ್ರಮ (ಡಬ್ಲ್ಯೂ.ಎಫ್.ಪಿ), ಯುನೆಸ್ಕೊ ಮತ್ತು ಯುನಿಸೆಫ್ ನಂತಹ ವಿಶೇಷ ಏಜೆನ್ಸಿ ಗಳನ್ನು ಒಳಗೊಂಡಿದೆ. ಹೆಚ್ಚುವರಿಯಾಗಿ ಯು.ಎನ್ ನ ಕೆಲಸಕಾರ್ಯಗಳಲ್ಲಿ ಭಾಗವಹಿಸಲು ಸರ್ಕಾರೇತರ ಸಂಸ್ಥೆಗಳು ಇಕೋಸೊಕ್ ಮತ್ತು ಏಜೆನ್ಸಿ ಗಳಲ್ಲಿ ಸಮಾಲೋಚನಾ ಸ್ಥಾನವನ್ನು ಹೊಂದಿದೆ.

ಯು.ಎನ್ ನ ಮುಖ್ಯ ಆಡಳಿತಾಧಿಕಾರಿ ಸೆಕ್ರೆಟರಿ ಜನರಲ್ ಪ್ರಸ್ತುತ ಪೋಚುಗೀಸ್ ರಾಜಕಾರಣಿ ಮತ್ತು ರಾಜತಾಂತ್ರಿಕ ಆಂಟೋನಿಯೋ ಗುಟೆರೆಸ್ ಅವರು ತಮ್ಮ 5 ವರ್ಷಗಳ ಅವಧಿಯನ್ನು 1 ಜನವರಿ 2017:ರಂದು ಪ್ರಾರಂಭಿಸಿದರು. ಸಂಸ್ಥೆಯು ಅದರ ಸದಸ್ಯ ರಾಷ್ಟಗಳಿಂದ ಮೌಲ್ಯಮಾಪನ ಮತ್ತು ಸ್ವಯಂ ಪ್ರೇರಿತ ಕೊಡುಗೆಗಳಿಂದ ಹಣಕಾಸು ಒದಗಿಸುತ್ತದೆ.

ಯು.ಎನ್ ನ ಅಧಿಕಾರಿಗಳು ಮತ್ತು ಏಜೆನ್ಸಿಗಳು ಅನೇಕ ನೊಬೆಲ್ ಶಾಂತಿ ಬಹುಮಾನಗಳನ್ನು ಗೆದ್ದಿವೆ. ಆದರೂ, ಕೆಲವು ವ್ಯಾಖ್ಯಾನಕಾರರು ಸಂಸ್ಥೆ ಶಾಂತಿ ಮತ್ತು ಮಾನವ ಅಭಿವೃದ್ಧಿ ಗೆ ಒಂದು ಪ್ರಮುಖ ಶಕ್ತಿ ಎಂದು ನಂಬಿದರೆ, ಇನ್ನೂ ಕೆಲವರು ಅದನ್ನು ನಿಷ್ಪರಿಣಾಮಕಾರಿ, ಪಕ್ಷಪಾತ ಅಥವಾ ಭ್ರಷ್ಟ ಎಂದು ಕರೆಯುತ್ತಾರೆ. ●









ಬಿಜೆಪಿ ಸರಕಾರಗಳ ರೈತ, ಕಾರ್ಮಿಕ ವಿರೋಧಿ ಮಸೂದೆಗಳ ವಿರುದ್ಧ ಚಾರಿತ್ರಿಕ ಐಕ್ಯ ಹೋರಾಟ



ಸೆಪ್ಟೆಂಬರ್ 21 ರಂದು (ಸೋಮವಾರ) ಬೆಳಿಗ್ಗೆ ಬೆಂಗಳೂರು ನಗರ ರೈಲು ನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನದವರೆಗೂ ಸಾವಿರಾರು ರೈತರು ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿದರು. ಮೆರವಣಿಗೆಯ ನೇತೃತ್ವವನ್ನು ಅಖಿಲ ಭಾರತ ಕಿಸಾನ್ ಸಭಾದ ಅಧ್ಯಕ್ಷ ಡಾ. ಅಶೋಕ ಧವಳೆ, ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಯು.ಬಸವರಾಜ್, ಉಪಾಧ್ಯಕ್ಷ ಮಾರುತಿ ಮಾನಪಡೆ ಮತ್ತು ಇತರ ರೈತ ಕಾರ್ಮಿಕ ದಲಿತ ಸಂಘಟನೆಗಳ ನಾಯಕರು ವಹಿಸಿದ್ದರು. ಅಧಿವೇಶನ ನಡೆಯುತ್ತಿರುವ ವಿಧಾನಸೌಧದತ್ತ ಹೋಗಿ ಮುತ್ತಿಗೆ ಹಾಕಲು ಮುಂದಾದರು. ಮಾರ್ಗಮಧ್ಯೆಯೇ ಪೊಲೀಸರು ಅವರನ್ನು ತಡೆದರು. ಹೀಗಾಗಿ, ಹಲವು ಕಡೆ ರಸ್ತೆಯಲ್ಲಿ ಕುಳಿತು ರೈತರು ಪ್ರತಿಭಟನೆ ಮುಂದುವರಿಸಿದರು. ಭೂಸುಧಾರಣೆ

ಪುಟ 10 ಕ್ಕೆ







ಅಕ್ಟೋಬರ್ 6 ರಂದು ಶೈಲಜಾ ಟೀಚರ್ ನಮ್ಮೊಡನೆ...

ಜನಶಕ್ತಿ ಮೀಡಿಯಾ ವೆಬ್ ಪತ್ರಿಕೆಯು ಈಗಾಗಲೇ ಪೂರ್ಣ ಪ್ರಮಾಣದಲ್ಲಿ ಸಕ್ರಿಯವಾಗಿದ್ದು, ಸೆಪ್ಟೆಂಬರ್ 15ರಿಂದ ಅಕ್ಟೋಬರ್ 15ರ ವರೆಗಿನ ಅವಧಿಯಲ್ಲಿ ಬರಹ ಮತ್ತು ವೆಬಿನಾರುಗಳ ಸರಣಿಯ ಮೂಲಕ ಲೋಕಾರ್ಪಣೆಯಾಗುತ್ತಿದೆ.

"ಕರ್ನಾಟಕ 2020 : ಕೊರೊನಾ ಕಾಲದಲ್ಲಿ ಮತ್ತು ನಂತರ" ಈ ಲೋಕಾರ್ಪಣೆ ಸರಣಿ ಕಾರ್ಯಕ್ರಮಗಳ ಸಾಮಾನ್ಯ ಥೀಮ್ ಆಗಿರುತ್ತದೆ. ಈ ಸಾಮಾನ್ಯ ಥೀಮ್ ಅಡಿಯಲ್ಲಿ ಹಲವು ಉಪಥೀಮ್ ಗಳ ಕುರಿತು ಬರಹ, ಅಡಿಯೊ/ವಿಡಿಯೊ ಪ್ರತಿಕ್ರಿಯೆಗಳ ಮತ್ತು ವೆಬಿನಾರ್ ನ ಮೂಲಕ ಸಂವಾದ ನಡೆಸಲಾಗುತ್ತದೆ. ಸಾರ್ವಜನಿಕ ಆರೋಗ್ಯ, ಮಾನವ ಹಕ್ಕುಗಳು, ಸಾಮಾಜಿಕ ಭದ್ರತೆ, ವೈಜ್ಞಾನಿಕ ಮನೋವೃತ್ತಿ, ಪ್ರದರ್ಶನ ಕಲೆಗಳು, ಪರ್ಯಾಯ ಮಾಧ್ಯಮ – ಇವು ಉಪಥೀಮ್ ಗಳಾಗಿರುತ್ತವೆ. ಈ ವಿಷಯಗಳ ಕುರಿತು ಈಗಾಗಲೇ ಬರಹ, ಅಡಿಯೊ/ವಿಡಿಯೊ ಪ್ರತಿಕ್ರಿಯೆಗಳು ವೆಬ್ ಪತ್ರಿಕೆಯಲ್ಲಿ ಪ್ರಕಟವಾಗಲಾರಂಭಿಸಿವೆ.

ಹಲವು ಸಬ್ ಥೀಮ್ ಗಳ ಕುರಿತು ನಡೆಸುವ ವೆಬಿನಾರ್ ನಲ್ಲಿ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಅತಿ ಮುಖ್ಯ ವಲಯವಾಗಿ ಪರಿಗಣಿಸಿ ಅದರ ಕುರಿತ ವೆಬಿನಾರ್ ಮೂಲಕ ಸರಣಿಯ ಉದ್ಘಾಟನೆ ಮತ್ತು ವೆಬ್ ಪತ್ರಿಕೆಯ ಲೋಕಾರ್ಪಣೆ ಮಾಡುವ ಕಾರ್ಯಕ್ರಮವನ್ನು ಅಕ್ಟೋಬರ್ 6 ರಂದು ಸಂಜೆ ಐದರಿಂದ ನಡೆಸಲು ಯೋಜಿಸಲಾಗಿದೆ.

ವೆಬ್‌ಪತ್ರಿಕೆಯ ಲೋಕಾರ್ಪಣೆಯನ್ನು ಮತ್ತು ವೆಬಿನಾರುಗಳ ಸರಣಿಯ ಉದ್ಘಾಟನೆಯನ್ನೂ, ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಕುರಿತ ವೆಬಿನಾರಿನ ಆಶಯ ಮಾತುಗಳನ್ನೂ ಕೇರಳದ ಆರೋಗ್ಯ ಸಚಿವೆ ಶ್ರೀಮತಿ ಶೈಲಜಾ ಟೀಚರ್ ರವರು ಮಾಡಲಿದ್ದಾರೆ. ವೆಬಿನಾರಿನ ಅಧ್ಯಕ್ಷತೆಯನ್ನು ಮಾನ್ಯ ಮಾಜಿ ಆರೋಗ್ಯ ಮಂತ್ರಿ ರಮೇಶ್ ಕುಮಾರ್ ವಹಿಸಿಕೊಳ್ಳುತ್ತಾರೆ.

"ಕರ್ನಾಟಕ ಕೊರೊನಾ ಸಂತ್ರಸ್ತ ರಾಜ್ಯಗಳಲ್ಲಿ 10ನೇ ಸ್ಥಾನದಿಂದ 4ನೇ ಸ್ಥಾನಕ್ಕೆ ಯಾಕೆ ಬಂತು?" ಎಂಬ ವಿಷಯವಾಗಿ ವೆಬಿನಾರ್ ಭಾಗವಾಗಿ ಒಂದು ಸಂವಾದ ಇರುತ್ತದೆ. ಸಂವಾದದಲ್ಲಿ ಸಾರ್ವಜನಿಕ ಮತ್ತು ಖಾಸಗಿ ವಲಯದ ವೈದ್ಯರು, ಸರಕಾರ ಆರೋಗ್ಯ ಇಲಾಖೆಯ ಪ್ರತಿನಿದಿಗಳು, ಕೊವಿಡ್ ಟಾಸ್ಕ್ ಫೋರ್ಸ್ ಸದಸ್ಯರು, ಜನಾರೋಗ್ಯ ಮತ್ತು ಜನ ವಿಜ್ಞಾನ ಚಳುವಳಿಗಾರರು, ಜನ ಸಂಘಟನೆಗಳ ಮತ್ತು ಮಾಧ್ಯಮ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**